ಕರ್ನಾಟಕ ವಿಧಾನಸಭೆ

ಶುಕ್ರವಾರ 25ನೇ ಫೆಬ್ರವರಿ 2011ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಮಧ್ಯಾಹ್ನ 12.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಕೆ.ಜಿ. ಬೋಪಯ್ಯರವರು ಪೀಠವನ್ನು ಅಲಂಕರಿಸಿದ್ದರು

1. ಸಂತಾಪ ಸೂಚನೆ

ವಿಷಯ: ಎಂ.ಪಿ. ಪ್ರಕಾಶ್, ಮಾಜಿ ಸಚಿವರು ಹಾಗೂ ಇತರ ಗಣ್ಯರು ನಿಧನರಾಗಿರುವ ಬಗ್ಗೆ

ಮಾನ್ಯ ಸಭಾಧ್ಯಕ್ಷರು:

ಸುಸಂಸ್ಕೃತ ರಾಜಕಾರಣಿ, ಸಮಾಜವಾದಿ ಚಿಂತಕ ಹಾಗೂ ಮಾಜಿ ಸಚಿವರಾಗಿದ್ದ ಎಂ.ಪಿ. ಪ್ರಕಾಶ್, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಪಿ. ತಿಪ್ಪಯ್ಯ, ಮೊಹಮದ್ ಉಮರ್ ಅಬ್ದುಲ್ ರೆಹಮಾನ್, ಹಿಂದೂಸ್ಥಾನಿ ಖ್ಯಾತ ಗಾಯಕ ಪಂಡಿತ ಭೀಮ್‌ಸೇನ್ ಜೋಶಿ ಮತ್ತು ರಂಗಭೂಮಿಯ ಹಿರಿಯ ನಟ ಬಸವರಾಜ್ ಗುಡಿಗೇರಿ ಹಾಗೂ ಶಬರಿಮಲೆ ಅರಣ್ಯಲ್ಲಿ ಉಂಟಾದ ದುರಂತದಲ್ಲಿ ನೂರಕ್ಕೂ ಹೆಚ್ಚು ಜನರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

ಎಂ.ಪಿ. ಪ್ರಕಾಶ್

ಎಂ.ಪಿ. ಪ್ರಕಾಶ್ ರವರು 11–7–1940ರಲ್ಲಿ ಜನಿಸಿದ್ದು, ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನವರಾದ ಶ್ರೀಯುತರು ಕಾನೂನು ಪದವೀಧರರಾಗಿದ್ದರು. 1963ರಲ್ಲಿ ಹೊಸಪೇಟೆಯಲ್ಲಿ ವಕೀಲ ವೃತ್ತಿಯನ್ನು ಆರಂಭಿಸಿದ ದಿವಂಗತರು 1967ರಲ್ಲಿ ಸಮಾಜವಾದಿ ಚಳುವಳಿಗೆ ಪಾದಾರ್ಪಣೆ ಮಾಡಿದರು. 1975ರಲ್ಲಿ ತುರ್ತು ಪರಿಸ್ಥಿತಿಯ ವಿರುದ್ಧ ಚಳುವಳಿ ನಡೆಸಿ, 1983, 1985, 1994 ಮತ್ತು 2004ರಲ್ಲಿ ಕ್ರಮವಾಗಿ 07, 08, 10 ಮತ್ತು 12ನೇ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ. ಅಲ್ಲದೆ, 2000 ರಿಂದ 2004ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಸಹ ಸೇವೆ ಸಲ್ಲಿಸಿರುತ್ತಾರೆ. ವೃತ್ತಿಯಲ್ಲಿ ವಕೀಲರಾಗಿದ್ದ ಪ್ರಕಾಶ್ ಅವರು ಮುಂದೆ ರಾಜಕೀಯದಲ್ಲಿ ಒಂದಾದ ಮೇಲೊಂದರಂತೆ ಯಶಸ್ಸಿನ ಮೆಟ್ಟಿಲುಗಳನ್ನು ಏರುತ್ತಲೇ ಹೋದರು. ಸಮಾಜವಾದಿ ಚಳುವಳಿಯ ಮೂಲಕ ರಾಜಕೀಯ ರಂಗ ಪ್ರವೇಶಿಸಿದ್ದ

ಎಂ.ಪಿ. ಪ್ರಕಾಶ್ ರವರು ನಾಡು ಕಂಡ ಅತ್ಯುತ್ತಮ ಸಂಸದೀಯ ಪಟುವಾಗಿದ್ದರಲ್ಲದೆ ಬರಹಗಾರರು, ರಂಗಕರ್ಮಿ ಮತ್ತು ಸಾಹಿತ್ಯಾಸಕ್ತರಾಗಿದ್ದರು.

ರಾಜಕೀಯದಲ್ಲಿ ಅಜಾತಶತ್ರುವೆಂದು ಬಿಂಬಿತರಾಗಿದ್ದ ದಿವಂಗತರು 1983ರಲ್ಲಿ ಪ್ರಥಮ ಬಾರಿಗೆ ವಿಧಾನಸಭೆಗೆ ಪ್ರವೇಶಿಸಿದ ಸಂದರ್ಭದಲ್ಲಿಯೇ ಸಚಿವರಾಗಿದ್ದರಲ್ಲದೆ, 1985 ಮತ್ತು 1994 ಹಾಗೂ 2004ರ ಮತ್ತು 2006ರ ಅವಧಿಯಲ್ಲಿ ಹಲವಾರು ಪ್ರಮುಖ ಖಾತೆಗಳ ಸಚಿವರಾಗಿ ಸೇವೆ ಸಲ್ಲಿಸಿದ್ದರು. 2005ರಲ್ಲಿ ಉಪಮುಖ್ಯಮಂತ್ರಿ ಸ್ಥಾನವನ್ನೂ ಸಹ ಅಲಂಕರಿಸಿದ್ದರು.

ದಿವಂಗತರು ಹಲವಾರು ಕೃತಿಗಳನ್ನು ರಚಿಸಿದ್ದರಲ್ಲದೆ ರಾಜಕೀಯ ಲೇಖನ, ಸಾಂಸ್ಕೃತಿಕ ಲೇಖನಗಳು, ಪ್ರವಾಸ ಕಥನಗಳು ಮತ್ತು ಅನುವಾದ ಸಾಹಿತ್ಯವನ್ನೂ ಕೂಡ ರಚಿಸಿರುತ್ತಾರೆ. ದಿವಂಗತರು ರಂಗಭೂಮಿಯ ಕಲಾವಿದರಾಗಿದ್ದು, ನಾಟಕ ರಚನಾಕಾರರು ಹಾಗೂ ಸ್ವತಃ ನಾಟಕಗಳಲ್ಲಿ ಅಭಿನಯಿಸುತ್ತಾ 'ರಂಗಭಾರತಿ' ನಾಟ್ಯ ತಂಡವನ್ನೂ ಸಹ ಕಟ್ಟಿದ್ದರು. 1998ರಲ್ಲಿ ಶ್ರೀಯುತರು ನಾಟಕ ಅಕಾಡೆಮಿ 'ಫೆಲೋಷಿಪ್' ಪ್ರಶಸ್ತಿಗೆ ಭಾಜನರಾಗಿದ್ದರು.

ಎಂ.ಪಿ. ಪ್ರಕಾಶ್ ಅವರ ನಿಧನದಿಂದ ಸಜ್ಜನ ಮತ್ತು ಜನಪ್ರಿಯ ರಾಜಕಾರಣಿ, ಉತ್ತಮ ರಂಗಕರ್ಮಿ, ಉತ್ತಮ ಸಾಹಿತಿ, ಅಪ್ರತಿಮ ವಾಗ್ಮಿ, ಬಹುಮುಖ ಪ್ರತಿಭೆಯ, ವೈಚಾರಿಕತೆಯ ನಾಯಕನನ್ನು ಕಳೆದುಕೊಂಡಂತಾಗಿದೆ. ಪರಿಸ್ಥಿತಿಗೆ, ಸಂದರ್ಭಗಳಿಗೆ ಹೊಂದಿಕೊಂಡು, ಇಷ್ಟವಾಗದ ಸಂಗತಿಗಳನ್ನು ಮೌನವಾಗಿ ನುಂಗಿಕೊಳ್ಳುತ್ತಿದ್ದುದು ಪ್ರಕಾಶ್ ಅವರ ದೊಡ್ಡ ಗುಣ ಎಂದು ಅರ್ಥೈಸಬಹುದು.

ಎಂ.ಪಿ. ಪ್ರಕಾಶ್ ಅವರು ದಿನಾಂಕ 9-2-2011ರಂದು ನಿಧನ ಹೊಂದಿರುತ್ತಾರೆ.

ಪಿ. ತಿಪ್ಪಯ್ಯ

ದಿವಂಗತರಾದ ಪಿ. ತಿಪ್ಪಯ್ಯ ಅವರು ದಿನಾಂಕ 29ನೇ ಮಾರ್ಚ್ 1929ರಲ್ಲಿ ಅಜ್ಜಂಪುರದಲ್ಲಿ ಜನಿಸಿದ್ದು ವೃತ್ತಿಯಲ್ಲಿ ಕೃಷಿಕರಾಗಿದ್ದರು. ದಿವಂಗತರು 1983ರಲ್ಲಿ ಮೂಡಿಗೆರೆ ವಿಧಾನಸಭಾ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರಲ್ಲದೆ, 1988 ರಿಂದ 1992ರ ಅವಧಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿರುತ್ತಾರೆ. ದಿವಂಗತರು ಹಲವಾರು ಸಂಘ ಸಂಸ್ಥೆಗಳ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿರುತ್ತಾರೆ.

ಪಿ. ತಿಪ್ಪಯ್ಯ ಅವರು ದಿನಾಂಕ 16–1–2011ರಂದು ನಿಧನ ಹೊಂದಿರುತ್ತಾರೆ.

ಮೊಹಮದ್ ಉಮರ್ ಅಬ್ದುಲ್ ರೆಹಮಾನ್

ದಿವಂಗತರು ರಾಯಚೂರಿನಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಪತ್ರಕರ್ತರಾಗಿದ್ದರು. 1985ರಲ್ಲಿ ರಾಯಚೂರು ವಿಧಾನಸಭಾ ಕ್ಷೇತ್ರದಿಂದ ಎಂಟನೇ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದು, ದಿವಂಗತರು New Education Society ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರಲ್ಲದೆ, ಸಮಾಜ ಸೇವಕರಾಗಿದ್ದರು.

ಮೊಹಮದ್ ಉಮರ್ ಅಬ್ದುಲ್ ರೆಹಮಾನ್ ಅವರು ದಿನಾಂಕ 31–1–2011ರಂದು ನಿಧನ ಹೊಂದಿರುತ್ತಾರೆ.

ಪಂಡಿತ್ ಭೀಮ್‌ಸೇನ್ ಜೋಶಿ

ದಿವಂಗತರು 4–2–1922ರಲ್ಲಿ ಗದಗ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿ ಜನಿಸಿದರು. ಸಣ್ಣ ವಯಸ್ಸಿನಲ್ಲಿಯೇ ಸಂಗೀತ ಕಲಿಯಲೆಂದು ಮನೆಯನ್ನು ಬಿಟ್ಟು ಜೋಶಿಯವರು ನಂತರ ಧಾರವಾಡ ಜಿಲ್ಲೆಗೆ ಹಿಂದಿರುಗಿ ಕುಂದಗೋಳದ ಪ್ರಸಿದ್ಧ ಗಾಯಕರಾದ ಸವಾಯಿ ಗಂಧರ್ವರ ಶಿಷ್ಯರಾದರು. ಹಿಂದೂಸ್ಥಾನಿ ಸಂಗೀತದ ಒಂದು ಪದ್ಧತಿಯಾದ ಅಪೂರ್ವ ಗಾಯನಶೈಲಿಯ ಕಿರಾಣಾ ಘರಾಣಾದಲ್ಲಿ ಪರಿಣಿತರಾದ ಸಂಗೀತ ಸಾಮ್ರಾಟ್ ಭೀಮಸೇನಜೋಶಿಯವರು ಕಳೆದ ಆರು ದಶಕಗಳ ಕಾಲ ದೇಶವಿದೇಶಗಳಲ್ಲಿ ಸಂಗೀತ ಕಛೇರಿಗಳನ್ನು ನಡೆಸುತ್ತಾ ಬಂದಿದ್ದರು.

'ನಂಬಿದೆ ನಿನ್ನ ನಾದದೇವತೆಯೇ' ಎಂದು ಸಂಗೀತವನ್ನು ಆರಾಧಿಸುತ್ತಾ ಬಂದ ಜೋಶಿ ಅವರಿಗೆ ಹಿಂದೂಸ್ಥಾನಿ ಸಂಗೀತದ ಖಯಾಲ್ ಕೃತಿಗಳ ಹಾಡುಗಾರಿಕೆಗೆ ಪ್ರಸಿದ್ಧರಾದವರು. ಹಾಗೆಯೇ ಹಿಂದಿ ಭಜನೆಗಳು, ಮರಾಠಿ ಅಭಂಗ ಮತ್ತು ನಾಟ್ಯ ಗೀತೆಗಳನ್ನು ಸಹ ಬಹಳಷ್ಟು ಹಾಡಿದ್ದಾರೆ. ಕನ್ನಡ ಭಾಷೆಯ ದಾಸಪದವಾದ 'ಭಾಗ್ಯದ ಲಕ್ಷ್ಮೀ ಬಾರಮ್ಮ' ಭೀಮಸೇನ ಜೋಶಿಯವರ ಹೆಸರಿನೊಂದಿಗೆ ಐಕ್ಯವಾಗುವಷ್ಟು ಪ್ರಸಿದ್ಧವಾಗಿದೆ. ಕನ್ನಡದಲ್ಲಿ ಭೀಮಸೇನ್ ಜೋಶಿಯವರ ಮುಖ್ಯ ಆಲ್ಬಮ್‌ಗಳೆಂದರೆ 'ದಾಸವಾಣಿ' ಮತ್ತು ಪಾಲಿಸೊ'.

ಪುಣೆ ನಿವಾಸಿಯಾಗಿದ ಭೀಮಸೇನ ಜೋಶಿ ಅವರು ತಮ್ಮ ಗುರುಗಳ ನೆನಪಿನಲ್ಲಿ 1952 ರಿಂದ ಪ್ರತಿ ವರ್ಷವೂ ಅಲ್ಲಿ "ಸವಾಯಿ ಗಂಧರ್ವ ಸಂಗೀತ ಮಹೋತ್ಸವ" ವನ್ನು ನಡೆಸುತ್ತಾ ಬಂದಿದ್ದರು.

ಜೋಶಿಯವರು ರಾಷ್ಟ್ರಭಕ್ತಿ, ರಾಷ್ಟ್ರದ ಹಿರಿಮೆ ಸಾರುವ "ಮಿಲೇ ಸುರ್ ಮೇರಾ ತುಮ್ಹಾರಾ", ಹಾಡಿಗೆ ಕಂಠ ನೀಡಿರುತ್ತಾರೆ.

ದಿವಂಗತರಿಗೆ ಪದ್ಮಶ್ರೀ, ಕರ್ನಾಟಕ ಸಂಗೀತ ಅಕಾಡೆಮಿಯ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಪದ್ಮವಿಭೂಷಣ, ಕರ್ನಾಟಕ ರತ್ನ ಹಾಗೂ ಭಾರತ ರತ್ನ ಪ್ರಶಸ್ತಿಗಳು ಅರಸಿ ಬಂದಿದ್ದವು.

ಭಾರತ ರತ್ನ ಪಡೆದ ಮೊದಲ ಹಿಂದುಸ್ತಾನಿ ಗಾಯಕ, ಅಂತರಾಷ್ಟ್ರೀಯ ಮಟ್ಟದಲ್ಲಿ ಹಿಂದೂಸ್ತಾನಿ ಗಾಯನದ ಕೀರ್ತಿ ಪತಾಕೆ ಹಾರಿಸಿದ ಗಾನ ಗಂಧರ್ವ ಭೀಮಸೇನ ಜೋಶಿ ಅವರು ದಿನಾಂಕ 24-1-2011ರಂದು ನಿಧನ ಹೊಂದಿರುತ್ತಾರೆ.

ಬಸವರಾಜ್ ಗುಡಿಗೇರಿ

ಕನ್ನಡ ರಂಗಭೂಮಿಯ ಹಿರಿಯ ನಟ ಶ್ರೀ ಬಸವರಾಜ್‌ರವರು ಮೂಲತಃ ಗುಡಿಗೇರಿಯವರಾಗಿದ್ದು, ಉತ್ತಮ ಪೈಲ್ವಾನ್‌ರಾಗಿದ್ದರು. ಶ್ರೀ ಬಸವರಾಜ್ ರವರು ಚಿಕ್ಕಂದಿನಿಂದಲೂ ನಾಟಕದ ಪ್ರಭಾವಕ್ಕೊಳಗಾಗಿ ಮುಂದೆ ನಾಟಕ ಕಂಪನಿಯನ್ನು ಕಟ್ಟಿ ಸ್ವತಃ ಅಭಿನಯಿಸುತ್ತಿದ್ಧರಲ್ಲದೆ, ನಿರ್ದೇಶನವನ್ನು ಮಾಡುತ್ತಿದ್ದರು. "ವರ ನೋಡಿ ಹೆಣ್ಣು ಕೊಡು", "ರೈತನ ಮಕ್ಕಳು', "ಕಿವುಡು ಮಾಡಿದ ಕಿತಾಪತಿ" ಮುಂತಾದ ನಾಟಕಗಳನ್ನು ರಚಿಸಿ, ಅಭೂತಪೂರ್ವ ಹೆಸರನ್ನು ಗಳಿಸಿದ್ದರು. ದಿವಂಗತರಿಗೆ ರಾಜ್ಯ ಪ್ರಶಸ್ತಿ ಮತ್ತು ಗುಬ್ಬಿ ವೀರಣ್ಣ ಪ್ರಶಸ್ತಿ ಲಭಿಸಿದ್ದವು.

ಬಸವರಾಜ್ ಗುಡಿಗೇರಿ ಅವರು ದಿನಾಂಕ 8-2-2011ರಂದು ನಿಧನ ಹೊಂದಿರುತ್ತಾರೆ.

ಶಬರಿಮಲೆ ದುರಂತ

ಕೇರಳ ರಾಜ್ಯದ ಪ್ರಸಿದ್ಧ ಶಬರಿಮಲೆ ದೇವಸ್ಥಾನದಲ್ಲಿ ದಿನಾಂಕ 14-1-2011ರಂದು ಶುಕ್ರವಾರದಂದು "ಮಕರ ಜ್ಯೋತಿ" ದರ್ಶನ ಪಡೆಯುವ ಸಂದರ್ಭದಲ್ಲಿ ಶ್ರೀ ಅಯ್ಯಪ್ಪ ಸ್ವಾಮಿ ಭಕ್ತರಲ್ಲಿ ಉಂಟಾದ ತೀವ್ರ ನೂಕನುಗ್ಗಲಿನಿಂದ ಕಾಲ್ತುಳಿತಕ್ಕೆ ಒಳಗಾಗಿ ರಾಜ್ಯದ ಭಕ್ತಾದಿಗಳು ಸೇರಿದಂತೆ

ನೂರಾರು ಜನ ಅಮಾಯಕ ಭಕ್ತರು ದುರ್ಮರಣಕ್ಕೀಡಾಗಿ ಸಾವನ್ನಪ್ಪಿದವರಿಗೆ ಈ ಸದನವು ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ.

+**ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):** ಸನ್ಮಾನ್ಯ ಸಭಾಧ್ಯಕ್ಷರೆ, ಕಳೆದ ಮತ್ತು ಈ ಅಧಿವೇಶನದ ನಡುವಿನ ಅವಧಿಯಲ್ಲಿ ಅನೇಕ ಗಣ್ಯರು ನಮ್ಮನ್ನು ಅಗಲಿದ್ದಾರೆ. ತಾವು ಮಂಡಿಸಿರುವ ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶ್ರೀ ಎಂ.ಪಿ. ಪ್ರಕಾಶ್‌ರವರು ಒಬ್ಬ ಅಜಾತಶತ್ರು. ಈ ಮನೆಯಲ್ಲಿ ಸಚಿವರಾಗಿ, ಅನೇಕ ಗಣ್ಯ ಸ್ಥಾನಗಳಲ್ಲಿ ಕೆಲಸ ಮಾಡಿ ಈ ನಾಡಿನ ಸರ್ವಾಂಗೀಣ ಅಭಿವೃದ್ಧಿಗೆ ತಮ್ಮದೇ ಆದಂಥ ಒಂದು ದೊಡ್ಡ ಕೊಡುಗೆಯನ್ನು ಕೊಟ್ಟಂಥ ಒಬ್ಬ ಧೀಮಂತ ನಾಯಕರಾಗಿದ್ದರು. ರಾಜಕೀಯ ಮತ್ತು ಸಾಂಸ್ಕೃತಿಕ ಲೋಕದ ಒಬ್ಬ ರಾಯಭಾರಿಯಾಗಿ, ಸಮಾಜದ ಒಬ್ಬ ಚಿಂತಕರಾಗಿ, ಹಿರಿಯ ಮುತ್ಸದ್ಧಿಯಾಗಿ ಈ ನಾಡಿಗೆ ಅನೇಕ ರೀತಿಯ ಕೊಡುಗೆಯನ್ನು ಅವರು ಕೊಟ್ಟಿದ್ದಾರೆ. ಸಮಾಜಮುಖಿಯಾಗಿ, ಸಾಹಿತಿಯಾಗಿ, ರಂಗ ಕರ್ಮಿಯಾಗಿ, ರಾಜಕೀಯದ ಹೊರತಾಗಿ ಅನೇಕ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಏಳು ದಶಕಗಳ ಕಾಲ ಸಾರ್ಥಕ ಜೀವನವನ್ನು ನಡೆಸಿದ್ದರು. ವಕೀಲಿ ವೃತ್ತಿ ಮಾಡುತ್ತಿದ್ದ ಶ್ರೀ ಎಂ.ಪಿ. ಪ್ರಕಾಶ್‌ರವರು 1974ರಲ್ಲಿ ರಾಜಕೀಯಕ್ಕೆ ಇಳಿದು ಸಮಾಜವಾದದ ಹೋರಾಟದ ಮೂಲಕ ಬಹುತೇಕ ತಮ್ಮ ರಾಜಕೀಯ ಜೀವನವನ್ನು ಜನತಾ ಪರಿವಾರದಲ್ಲಿಯೇ ಕಳೆದ ಕೆಲವು ವರ್ಷಗಳ ಹಿಂದೆ, ಅವರ ವಿಚಾರಕ್ಕೆ ಅವರ ಮನಸ್ಸಿಗೆ ಒಪ್ಪಿಗೆ ಇತ್ತೋ ಇಲ್ಲವೋ ಗೊತ್ತಿಲ್ಲ, ಆದರೆ ಕೊನೆಯ ದಿನಗಳಲ್ಲಿ ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರುವಂಥ ಅನಿವಾರ್ಯ ಪರಿಸ್ಥಿತಿ ಬಂದಿದ್ದು ನಮಗೂ ಮತ್ತು ನಿಮಗೆಲ್ಲರಿಗೂ ಗೊತ್ತಿರುವಂಥದ್ದು. 1975ರಲ್ಲಿ ತುರ್ತು ಪರಿಸ್ಥಿತಿ ವಿರುದ್ಧ ಚಳುವಳಿ ನಡೆಸಿ 1983, 1985, 1994 ಮತ್ತು 2004ರಲ್ಲಿ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ. ಇದಲ್ಲದೇ 2000–2004ರ ಅವಧಿಯಲ್ಲಿ ವಿಧಾನ ಪರಿಷತ್ ಸದಸ್ಯರಾಗಿಯೂ ಕೂಡ ಸೇವೆಯನ್ನು ಸಲ್ಲಿಸಿರುತ್ತಾರೆ.

ಅವರನ್ನು ನಾವೆಲ್ಲ ಅಜಾತಶತ್ರು ಎಂದು ಕರೆಯುತ್ತಿದ್ದೆವು. ಅವರು ಕಾನೂನು ಸಚಿವರಾಗಿ ಇಲ್ಲಿಯೇ ಪಕ್ಕದಲ್ಲಿ ಕುಳಿತು ಕೆಲಸ ಮಾಡಿದ ರೀತಿ ನೋಡಿದಾಗ ಅನೇಕ ಕ್ಲಿಷ್ಟ ಪ್ರಶ್ನೆಗಳು, ಸಮಸ್ಯೆಗಳು ಉದ್ಭವವಾದಾಗ ಬಹಳ ಸುಲಭವಾಗಿ ಅವರು ಬಗೆಹರಿಸುತ್ತಿದ್ದಂತಹ ರೀತಿ ನೀತಿಗಳನ್ನು ನಾನು ಕಣ್ಣಾರೆ

ನೋಡುವಂತಹ ಅವಕಾಶ ಸಿಕ್ಕಿತ್ತು. ಮಾನ್ಯ ರಾಮಕೃಷ್ಣ ಹೆಗಡೆಯವರು, ಮಾನ್ಯ ಜೆ.ಹೆಚ್. ಪಟೇಲ್, ಮಾನ್ಯ ಎಸ್.ಆರ್.ಬೊಮ್ಮಾಯಿಯವರು, ಮಾನ್ಯ ಹೆಚ್.ಡಿ. ದೇವೇಗೌಡರು ಹಾಗೂ ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರ ಸಚಿವ ಸಂಪುಟದಲ್ಲಿ ಸಚಿವರಾಗಿ ಅವರು ಕೆಲಸವನ್ನು ಮಾಡಿದ್ದರು. ಅವರು ಒಂದು ಬಾರಿ ಜನತಾ ದಳದ ರಾಜ್ಯದ ಅಧ್ಯಕ್ಷರಾಗಿ ಸಹ ಸೇವೆಯನ್ನು ಸಲ್ಲಿಸಿದ್ದರು. ಬಹುಶಃ ರಂಗಭೂಮಿಯಲ್ಲಿ ಅವರ ಒಂದು ಪ್ರತಿಭೆ ಇವತ್ತು ಸಹ ನಮ್ಮೆಲ್ಲರಿಗೆ ನೆನಪು ತರುತ್ತದೆ. ಅವರು ಯಾರಿಗೂ ಸಹ ಕೇಡನ್ನು ಬಯಸಿದವರಲ್ಲ. ಅವರು ಎರಡೂವರೆ ವರ್ಷದಿಂದ ಕ್ಯಾನ್ಸರ್ ರೋಗಕ್ಕೆ ಬಲಿಯಾಗಿ ಅದನ್ನು ಸಹ ಎದುರಿಸಿ, ಅವರ ಆರೋಗ್ಯದಲ್ಲಿ ಬಹಳ ಒಳ್ಳೆಯ ಸುಧಾರಣೆ ಕಾಣುತ್ತಿತ್ತು. ಆದರೆ ಅನಿವಾರ್ಯವಾಗಿ ಅವರು ಕೊನೆಯುಸಿರೆಳೆದರು. ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರಂತಹ ಸಜ್ಜನ ರಾಜಕಾರಣಿ ಇತ್ತೀಚಿನ ದಿನಗಳಲ್ಲಿ ಅತೀ ವಿರಳವಾಗಿದ್ದಾರೆ. ಅವರ ಅಂತಿಮ ಸಂಸ್ಕಾರದಲ್ಲಿ ಭಾಗವಹಿಸಿದಂತಹ ಸಂದರ್ಭದಲ್ಲಿ ಅಲ್ಲಿ ಸೇರಿದಂತಹ ಜನಸ್ತೋಮವನ್ನು ನೋಡಿದರೆ ಅವರ ಬಗ್ಗೆ ಯಾವ ರೀತಿ ಜನರು ಪ್ರೀತಿ ವಿಶ್ವಾಸವನ್ನು ಇಟ್ಟುಕೊಂಡಿದ್ದರು ಎನ್ನುವುದಕ್ಕೆ ಅದು ಒಂದು ಉದಾಹರಣೆಯಾಗಿತ್ತು. ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೂವಿನ ಹಡಗಲಿಯಲ್ಲಿ ರಂಗಭಾರತಿ ಸಾಮಾಜಿಕ ಸಭಾಂಗಣವನ್ನು ಕಟ್ಟಿಸುತ್ತಿದ್ದರು. ಅದು ಅರ್ಧಂಬರ್ಧ ಆಗಿದೆ ಎಂದು ಕೇಳಿದ್ದೇನೆ. ಅದಕ್ಕೆ ಸರ್ಕಾರದಿಂದ ಒಂದು ಕೋಟಿ ರೂಪಾಯಿಯನ್ನು ಕೊಟ್ಟು ಅದನ್ನು ಪೂರ್ಣ ಮಾಡುವಂತಹ ಜವಾಬ್ದಾರಿ ನಮ್ಮ ಮೇಲಿದೆ, ಆ ಕೆಲಸವನ್ನು ಸರ್ಕಾರದಿಂದ ಪೂರ್ಣ ಮಾಡುತ್ತೇವೆಂದು ಹೇಳುತ್ತೇನೆ.

ಮಾನ್ಯ ತಿಪ್ಪಯ್ಯನವರು ಅಜ್ಜಂಪುರದಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದು, 1983ರಲ್ಲಿ ಮೂಡಿಗೆರೆ ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಇವರು 1988 ರಿಂದ 1992ರ ಅವಧಿಯಲ್ಲಿ ವಿಧಾನಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. ದಿವಂಗತರು ಹಲವಾರು ಸಂಘ ಸಂಸ್ಥೆಗಳ ಅಧ್ಯಕ್ಷರಾಗಿ ತಮ್ಮ ಸೇವೆಯನ್ನು ಸಲ್ಲಿಸಿದ್ದರು.

ಮಾನ್ಯ ಮೊಹಮದ್ ಉಮರ್ ಅಬ್ದುಲ್ ರೆಹಮಾನ್‌ರವರು ರಾಯಚೂರಿನಲ್ಲಿ ಜನಿಸಿ 1985ರಲ್ಲಿ ರಾಯಚೂರು ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಆಯ್ಕೆಯಾಗಿದ್ದರು. ದಿವಂಗತರು New Education Society

ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ, ಶಿಕ್ಷಣ ಕ್ಷೇತ್ರದಲ್ಲಿ ತಮ್ಮದೇ ಆದ ಸೇವೆಯನ್ನು ಮಾಡಿದಂತಹ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ.

ಈ ದೇಶ ಕಂಡಂತಹ ಅಪರೂಪದ ವ್ಯಕ್ತಿ ಪಂಡಿತ್ ಭೀಮ್‌ಸೇನ್ ಜೋಶಿಯವರು ಕಿರಾಣಾ ಘರಾಣಾದಲ್ಲಿ ಖ್ಯಾತ ಹಿಂದೂಸ್ತಾನಿ ಗಾಯಕ, ಹೆಮ್ಮೆಯ ಕನ್ನಡಿಗ. ಭಾರತ ರತ್ನ ಪಂಡಿತ್ ಭೀಮ್‌ಸೇನ್ ಜೋಶಿಯವರು ಈ ದೇಶದ ಅಪಾರ ಸಂಗೀತ ಪ್ರೇಮಿಗಳ ಆರಾಧ್ಯ ದೈವವಾಗಿದ್ದರು. ಈ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಭಾರತ ರತ್ನ ಪುರಸ್ಕೃತರಾದಂತಹ ಪಂಡಿತ್ ಭೀಮ್‌ಸೇನ್ ಜೋಶಿಯವರು ಹಿಂದುಸ್ತಾನಿ ಸಂಗೀತದ ಅಚ್ಚಳಿಯದ ಧೃವತಾರೆಯಾಗಿದ್ದರು. ಕಂಚಿನ ಕಂಠ, ಉಸಿರು ನಿಯಂತ್ರಿಸಿ ಗಾಯನದ ಆಲಾಪಕ್ಕೆ ಜೀವ ತುಂಬುವ ಸಾಮರ್ಥ್ಯ, ಸ್ವರ, ಲಯ ಹಾಗೂ ತಾಳದ ಮೇಲಿದ್ದ ಅವರ ಹಿಡಿತ ಅವರನ್ನು ಸಂಗೀತ ಲೋಕದ ದಿಗ್ಗಜರನ್ನಾಗಿ ರೂಪಿಸಿತು. 1922ರ ಫೆಬ್ರವರಿ 4ರಂದು ಗದಗ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿ ಜನಿಸಿದ ಇವರು ನಾದದೇವತೆಯ ಆರಾಧಕರಾಗಿ ನಮ್ಮೆಲ್ಲರ ಮನದಲ್ಲಿ ನಿಂತಿದ್ದಾರೆ. ಅವರು ತಮ್ಮ ಭಾವಪೂರ್ಣ ಭಜನೆಗಳಿಂದ, ದಾಸ ಪದವಾದ ಭಾಗ್ಯದ ಲಕ್ಷ್ಮೀ ಬಾರಮ್ಮ ಹಾಡುಗಳಿಂದ ಕನ್ನಡಿಗರ ಮನವನ್ನು ಸೂರೆಗೊಂಡ ಸಂಗೀತ ಸಾಮ್ರಾಟ್ ಪಂಡಿತ್ ಭೀಮ್‌ಸೇನ್ ಜೋಶಿಯವರು ಭಾರತ ರತ್ನ, ಕರ್ನಾಟಕ ರತ್ನ, ಪದ್ಮಶ್ರೀ ಹಾಗೂ ಪದ್ಮಭೂಷಣ ಮುಂತಾದ ಪ್ರಶಸ್ತಿಗಳಿಂದ ಅಲಂಕೃತರಾಗಿದ್ದಂತಹ ಇವರು ಕ್ರೀಡಾಪಟುವಾಗಿ, ಈಜುಪಟುವಾಗಿ ಹಾಗೂ ಸತತ ಯೋಗಾಭ್ಯಾಸದ ಮೂಲಕ ಉತ್ತಮ ಶರೀರ ಮತ್ತು ಶಾರೀರವನ್ನು ಹೊಂದಿದ್ದರು. ಹಿಂದೂಸ್ತಾನಿ ಸಂಗೀತದ ದಿಗ್ಗಜರಾದ ಕರೀಂಖಾನ್ ಹಾಗೂ ಸವಾಯಿ ಗಂಧರ್ವರಂತಹ ಗುರುಗಳ ಮೂಲಕ ತರಬೇತಿ ಹೊಂದಿದಂತಹ ಇವರು ಅಪ್ರತಿಮ ರಾಷ್ಟ್ರ ಭಕ್ತರಾಗಿದ್ದರು, ಸಾಂಸ್ಕೃತಿಕ ಲೋಕದ ನಾಯಕರಾಗಿದ್ದರು. ಅವರ ಅಂತಿಮ ಕ್ರಿಯೆಯಲ್ಲಿ ಭಾಗವಹಿಸಿದಂತಹ ಸಂದರ್ಭದಲ್ಲಿ ದೇಶದ ಉದ್ದಗಲದಲ್ಲಿದಂತಹ ಅನೇಕ ದಿಗ್ಗಜರೂ ಅಲ್ಲಿಗೆ ಬಂದು ಅವರ ಅಂತಿಮ ದರ್ಶನ ಪಡೆದಂತಹ ಸಂದರ್ಭದಲ್ಲಿ ನಾನು ಉಪಸ್ಥಿತನಿದ್ದೆನು. ಅವರ ಮರಣದಿಂದ ದೇಶಕ್ಕೆ ಬಹಳ ದೊಡ್ಡ ನಷ್ಟವುಂಟಾಗಿದೆ. ನಮ್ಮ ಸರ್ಕಾರ ಪಂಡಿತ್ ಭೀಮ್‌ಸೇನ್ ಜೋಶಿಯವರ ಸ್ಮರಣೆಗಾಗಿ ಪ್ರತಿವರ್ಷ ಸಂಗೀತ ಕ್ಷೇತ್ರದಲ್ಲಿರುವಂತಹ ಮಹಾನ್ ಸಾಧಕರನ್ನು

ಗುರುತಿಸಿ ಭೀಮ್‌ಸೇನ್ ಜೋಶಿ ಸಂಗೀತ ರತ್ನ ಪ್ರಶಸ್ತಿಯನ್ನು, ಅದರ ಜೊತೆಗೆ ಒಂದು ಲಕ್ಷ ರೂಪಾಯಿಯ ಮೊತ್ತವನ್ನು ಇಟ್ಟು ನೀಡುತ್ತೇವೆ.

ಮಾನ್ಯ ಬಸವರಾಜ್ ಗುಡಿಗೇರಿಯವರು ಕನ್ನಡ ರಂಗಭೂಮಿ ಕಂಡಂತಹ ಶ್ರೇಷ್ಠ ನಟ ಮತ್ತು ನಾಟಕ ಕಂಪನಿ ಮಾಲೀಕರು. ಅವರಿಗೆ ಅವರೇ ಸಾಟೀ ಎನ್ನುವಂತೆ ತಮ್ಮದೇ ಆದಂತಹ ವಿಶಿಷ್ಟ ಶೈಲಿಯಲ್ಲಿ ತನ್ನ ಜೀವನವನ್ನು ರೂಢಿಸಿಕೊಂಡಂತಹ ಒಬ್ಬ ದಿಗ್ಗಜರಾಗಿದ್ದರು. ಅವರಿಗೆ ಮೈನವಿರೇಳಿಸುವಂತಹ ಪಾತ್ರ ಬೇಕು. ಪ್ರೇಕ್ಷಕರನ್ನು ಉನ್ಮತ್ತರಾಗಿಸಬೇಕು. ಅದು ಅವರ ಬದುಕಿನ ಶೈಲಿ ಹಾಗೂ ನಟನಾ ಶಕ್ತಿಯಾಗಿತ್ತು. 1963ರಲ್ಲಿ ಸಂಗಮೇಶ್ವರ ನಾಟಕ ರಂಗ ಸ್ಥಾಪಿಸಿ ಸತತವಾಗಿ ಐದು ದಶಕಗಳಿಂದ ಅದನ್ನು ನಡೆಸಿಕೊಂಡು ಬಂದಿದ್ದರು. ಅವರು ಕುಸ್ತಿ ಪೈಲ್ವಾನ್‌ರಾಗಿದ್ದರು. ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಸುಮಾರು 200ಕ್ಕೂ ಹೆಚ್ಚು ಕುಸ್ತಿ ಪಂದ್ಯಗಳನ್ನು ಗೆದ್ದು, ರಂಗದ ಪೈಲ್ವಾನರಂತೆ ಮೆರೆದಿದ್ದರು, ನಾಟಕರಂಗವನ್ನು ಶ್ರೀಮಂತಗೊಳಿಸಿದ್ದರು. ಶಾಂತಿ ಮಂತ್ರವನ್ನು ಕಲೆಯ ಮೂಲಕ ಸಮಾಜಕ್ಕೆ ಸಾರಿದ, ರಂಗಭೂಮಿಗೆ ತಮ್ಮನ್ನು ತಾವು ಸಂಪೂರ್ಣವಾಗಿ ಸಮರ್ಪಿಸಿಕೊಂಡ ಅಪರೂಪದ ವ್ಯಕ್ತಿತ್ವ ಅವರದ್ದಾಗಿತ್ತು. ಗುಬ್ಬಿ ವೀರಣ್ಣ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಯನ್ನು ಪಡೆದಿದ್ದ ಅವರು ರಂಗಭೂಮಿಯ ಸಾಹಸಿ ಎಂದರೆ ತಪ್ಪಾಗಲಾರದು. ಅವರ ನಿಧನದಿಂದ ನಾಟಕ ಮತ್ತು ಚಲನಚಿತ್ರ ಕ್ಷೇತ್ರಗಳಿಗೆ ಬಹು ದೊಡ್ಡ ನಷ್ಟವಾಗಿದೆ.

ಮಾನ್ಯ ಶ್ರೀ ಜೆ.ಎ. ಫರ್ನಾಂಡಿಸ್ ಆಂಗ್ಲೋ ಇಂಡಿಯನ್ ಸಮುದಾಯದ ಏಳಿಗೆಗಾಗಿ ಶ್ರಮಿಸಿದ ಇವರು ಎರಡು ಬಾರಿ ವಿಧಾನಸಭೆಗೆ ನಾಮ ನಿರ್ದೇಶನಗೊಂಡಿದ್ದರು. 1990ರ ಲೋಕಸಭೆಯಲ್ಲಿ ಆಂಗ್ಲೋ ಇಂಡಿಯನ್ ಸಮುದಾಯವನ್ನು ಪ್ರತಿನಿಧಿಸಿದ್ದರು. ವೈದ್ಯಕೀಯ, ಇಂಜಿನಿಯರಿಂಗ್, ಪಾಲಿಟೆಕ್ನಿಕ್ ಹಾಗೂ ನರ್ಸಿಂಗ್ ಕೋರ್ಸ್‌ಗಳಲ್ಲಿ ಆಂಗ್ಲೋ ಇಂಡಯನ್ ಸಮುದಾಯದ ವಿದ್ಯಾರ್ಥಿಗಳಿಗೆ ಸೀಟು ಹಂಚಿಕೆ ಮೀಸಲಾತಿ ಮತ್ತು ಶುಲ್ಕ ಮರುಪಾವತಿ ಸೌಲಭ್ಯವನ್ನು ಒದಗಿಸಿ ಕೀರ್ತಿಯನ್ನು ಪಡೆದಿದ್ದರು. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಿದ್ದೇನೆ.

ಶಬರಿಮಲೆ ದುರಂತ ಕೇರಳ ರಾಜ್ಯದ ಪ್ರಸಿದ್ಧ ಶಬರಿಮಲೆ ದೇವಸ್ಥಾನದಲ್ಲಿ ದಿನಾಂಕ 14-1-2011ರ ಶುಕ್ರವಾರದಂದು ಮಕರ ಜ್ಯೋತಿ ದರ್ಶನ ಪಡೆಯುವ ಸಂದರ್ಭದಲ್ಲಿ ಶ್ರೀ ಅಯ್ಯಪ್ಪ ಸ್ವಾಮಿ ಭಕ್ತರಲ್ಲಿ ಉಂಟಾದ

ತೀವ್ರ ನೂಕು ನುಗ್ಗುಲಿನಿಂದ ಕಾಲ್ತುಳಿತಕ್ಕೆ ಒಳಗಾದ ರಾಜ್ಯದ ಭಕ್ತಾದಿಗಳು ಸೇರಿದಂತೆ ನೂರಾರು ಜನ ಅಮಾಯಕ ಭಕ್ತರು ದುರ್ಮರಣಕ್ಕೀಡಾಗಿದ್ದು ದುರಾದೃಷ್ಟದ ಸಂಗತಿ. ಈ ಭಕ್ತರ ಸಾವಿಗೆ ಸಂತಾಪವನ್ನು ಬಯಸುತ್ತೇನೆ. ನಾಡು-ನುಡಿಯ ಬಗ್ಗೆ ಭಕ್ತಿ ಮತ್ತು ಗೌರವವನ್ನು ಹೊಂದಿದ್ದ ರಾಜ್ಯದ ಎಲ್ಲಾ ಸ್ತರದ ಜನರ ಅಭಿವೃದ್ಧಿಗಾಗಿ ಶ್ರಮಿಸಿದ ಮಹನೀಯರು ಇಂದು ನಮ್ಮೊಡನಿಲ್ಲ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವು ನಡೆಯಬೇಕಾಗಿದೆ. ಈ ರೀತಿ ಕಣ್ಮರೆಯಾದ ಹಿರಿಯರ ಆತ್ಮಕ್ಕೆ ಶಾಂತಿಯನ್ನು ಕೋರಿ ಈ ದುಃಖವನ್ನು ಭರಿಸುವಂತಹ ಶಕ್ತಿ ಅವರ ಕುಟುಂಬದವರಿಗೆ ನೀಡಲಿ ಎಂದು ಭಗವಂತನನ್ನು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇವತ್ತು ತಾವು ಸದನದ ಮುಂದೆ ತಂದಿರತಕ್ಕಂಥ ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸುತ್ತೇನೆ. ಕಳೆದ ವಿಧಾನಸಭೆಯ ಅಧಿವೇಶನ ಮುಗಿದ ಮೇಲೆ ಬಹಳ ಜನರು ನಮ್ಮನ್ನು ಆಗಲಿದ್ದಾರೆ. ಇವತ್ತು ನಾವು ಅವರನ್ನು ಸ್ಮರಣೆ ಮಾಡಿಕೊಳ್ಳುತ್ತಾ, ನಾನು ಕೂಡ ನಿಮ್ಮ ಜೊತೆಯಲ್ಲಿ ಅವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರುವುದಕ್ಕೆ ಧ್ವನಿಗೂಡಿಸುತ್ತಿದ್ದೇನೆ. ಮೊದಲನೆಯದಾಗಿ ಶ್ರೀ ಎಂ.ಪಿ. ಪ್ರಕಾಶ್‌ರವರ ಬಗ್ಗೆ ಹೇಳುವುದಾದರೆ, ಇವರು ಕರ್ನಾಟಕ ರಾಜ್ಯದ ರಾಜಕಾರಣದಲ್ಲಿ ಅಪರೂಪದ ವ್ಯಕ್ತಿತ್ವವನ್ನು ಹೊಂದಿದ್ದಂಥ ವ್ಯಕ್ತಿಯಾಗಿದ್ದರು. ನಾವು ಮತ್ತು ಅವರು ಸುಮಾರು 40 ವರ್ಷಗಳ ಕಾಲ ಸುಧೀರ್ಘವಾಗಿ ಜೊತೆಯಲ್ಲಿ ರಾಜಕಾರಣವನ್ನು ಮಾಡಿದ್ದೇವೆ. ಅವರು ಸಮಾಜವಾದಿ ಸಿದ್ಧಾಂತವನ್ನು ಅಪ್ಪಿಕೊಂಡು ಇದರ ಮೂಲಕ ರಾಜಕಾರಣವನ್ನು ಪ್ರಾರಂಭ ಮಾಡಿದರು. ಅವರು ಸಮಾಜವಾದಿ ಸಿದ್ಧಾಂತದಲ್ಲಿ ಲೋಹಿಯಾ ವಾದದಲ್ಲಿ ಬಲವಾದ ನಂಬಿಕೆಯನ್ನು ಇಟ್ಟುಕೊಂಡಿದ್ದರು. ಅವರು ಬದುಕಿರುವವರೆಗೂ ಸಮಾಜವಾದಿಯಾಗಿಯೇ ಉಳಿದಿದ್ದರೆಂದು ಹೇಳಿದರೆ ಅತಿಶಯೋಕ್ತಿ ಯಾಗಲಾರದು. ನಾನು ಕೂಡ ಅವರೊಡನೆ ಸಮಾಜವಾದಿ ಪಕ್ಷದ ಮೂಲಕ ರಾಜಕಾರಣವನ್ನು ಮಾಡಿದೆನು. ಅವರು ನನಗಿಂತ ವಯಸ್ಸಿನಲ್ಲಿ, ರಾಜಕಾರಣದಲ್ಲಿ ಹಿರಿಯರಾಗಿದ್ದಾರೆ. ನಾನು 1971ರಲ್ಲಿ ರಾಜಕಾರಣಕ್ಕೆ ಬಂದರೆ ಅವರು ಅದಕ್ಕಿಂತ ಮುಂಚಿತವಾಗಿ ಸಮಾಜವಾದಿ ಪಕ್ಷದಲ್ಲಿ ಸೇರಿಕೊಂಡಿದ್ದರು. ಅವರು ಬಳ್ಳಾರಿ ಜಿಲ್ಲಾ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ಅವರು 1978ರ ಚುನಾವಣೆಯಲ್ಲಿ ಜನತಾ ಪಕ್ಷದ ಅಭ್ಯರ್ಥಿಯಾಗಿ

ಸ್ಪರ್ಧಿಸಿದ್ದರು. ಅವರು ಆ ಚುನಾವಣೆಯಲ್ಲಿ ಸೋತಿದ್ದರು. ಅವರು ಸೋಲು-ಗೆಲುವನ್ನು ಸಮಾನ ಚಿತ್ತದಿಂದ ಸ್ವೀಕರಿಸತಕ್ಕಂಥ ಮನಸ್ಥಿತಿಯನ್ನು, ಮನೋಭಾವವನ್ನು ಬೆಳೆಸಿಕೊಂಡಿದ್ದರು. ಅವರು ನಾಲ್ಕು ಬಾರಿ ವಿಧಾನ ಸಭೆಗೆ ಆಯ್ಕೆಯಾಗಿದ್ದರು. ಒಮ್ಮೆ ಮೇಲ್ಮನೆಯ ಸದಸ್ಯರಾಗಿಯೂ ಕೂಡ ಆಯ್ಕೆಯಾಗಿ ಕೆಲಸ ಮಾಡಿದ್ದರು. 1983ರಲ್ಲಿ ಮೊದಲನೇ ಬಾರಿಗೆ ವಿಧಾನ ಸಭೆಗೆ ಆಯ್ಕೆಯಾಗಿ ಬಂದರು. ಅಲ್ಲಿಂದ ಅವರು ಕಳೆದ ಚುನಾವಣೆಯಲ್ಲಿ ದುಡ್ಡಿನ ವಿರುದ್ಧ ಹೋರಾಟ ಮಾಡುವುದಕ್ಕೆ ಆಗದೇ ಸೋತಿದ್ದರು. ಅವರು ಬಹಳ ದೀರ್ಘ ಕಾಲ ಸರ್ಕಾರದಲ್ಲಿ ಮಂತ್ರಿಯಾಗಿ ಕೆಲಸ ಮಾಡಿದರು. ಅವರು Transport Minister ಆಗಿ, Kannada & Culture Minister ಆಗಿ, Urban Development Minister ಆಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಯಾಗಿ, Law & Parliamentary Affairs Minister ಆಗಿ, ಉಪ ಮುಖ್ಯಮಂತ್ರಿಯಾಗಿ, ಆಡಳಿತದಲ್ಲಿ ಅಪಾರವಾದಂಥ ಅನುಭವ ಇತ್ತು. ನಾನು ಮತ್ತು ಅವರು 1983ರಲ್ಲಿ ಒಟ್ಟಿಗೆ ಆಯ್ಕೆಯಾಗಿ ಸದನಕ್ಕೆ ಬಂದೆವು. ಅವತ್ತಿನಿಂದ ನಾನು ಈ ಸದನದಲ್ಲಿ ನೋಡಿದಂಥ ಸದಸ್ಯರುಗಳಲ್ಲಿ ಒಬ್ಬ ಅಪ್ರತಿಮ ಸಂಸತ್ ಪಟುವಾಗಿದ್ದರು. ಇದರ ಜೊತೆಗೆ ಅವರು ಅಪಾರವಾದಂಥ ಜ್ಞಾನವನ್ನು ಸಂಪಾದನೆ ಮಾಡಿಕೊಂಡಿದ್ದರು. ಅವರು ಯಾವುದೇ ವಿಚಾರವನ್ನು ಮಂಡನೆ ಮಾಡುವಾಗ ಆ ವಿಚಾರದ ಮೇಲೆ ಪ್ರಭುತ್ವವನ್ನಿಟ್ಟುಕೊಂಡು ಮಂಡನೆ ಮಾಡುವಂಥ ಗುಣ ಅವರಲ್ಲಿತ್ತು. ನಾವು ಮೈಸೂರಿನಲ್ಲಿ ಒಂದು ಮಾತನ್ನು ಹೇಳುತ್ತೇವೆ. ಅವರು ಸುಬ್ರಾಯನ ಕೆರೆ ಭಾಷಣವನ್ನು ಮಾಡುವುದಕ್ಕೆ ಹೋಗುತ್ತಿರಲಿಲ್ಲ. ಅವರು ಅಪಾರವಾದಂಥ ಜ್ಞಾನ, ಅಧ್ಯಯನ, ವಿಚಾರಶೀಲತೆ, ಸ್ಪಷ್ಟತೆ, ಇವೆಲ್ಲವನ್ನು ಇಟ್ಟುಕೊಂಡು ಮಾತನಾಡತಕ್ಕಂಥ ಗುಣವನ್ನು ಬೆಳೆಸಿಕೊಂಡಿದ್ದರು. ಅವರು Ruling Partyಯಲ್ಲಿರಿ, Opposition Partyಯಲ್ಲಿರಲಿ, ಅವರು ಇಲ್ಲಿ Opposition Partyಯಲ್ಲಿ ಇದ್ದದ್ದು ಕಡಿಮೆ ಅನಿಸುತ್ತದೆ, ಮೇಲ್ಮನೆಯಲ್ಲಿದ್ದರು ಅಷ್ಟೆ.

ಶ್ರೀ ಜಗದೀಶ್ ಶೆಟ್ಟರ್: ಅವರು ಯಾವಾಗಿನಿಂದ ಆಯ್ಕೆಯಾಗಿ ಬಂದಿದ್ದಾರೆ, ಆಗಿನಿಂದಲೂ ಅವರು Ruling Partyಯಲ್ಲಿದ್ದಾರೆ. ಮಾನ್ಯ ಉದಾಸಿಯವರು ಯಾವಾಗ ಆಯ್ಕೆಯಾಗಿ ಬಂದಿದ್ದಾರೆ, ಆಗಿ ನಿಂದಲೂ ಅವರು Ruling Partyಯಲ್ಲಿದ್ದಾರೆ.

ಶ್ರೀ ಸಿದ್ಧರಾಮಯ್ಯ: ಈಗ ಅವರನ್ನು Opposition Partyಗೆ ಕಳುಹಿಸಬೇಕೆಂದು ತೀರ್ಮಾನ ಮಾಡಿದ್ದೀರಾ? ಮಾನ್ಯ ಉದಾಸಿಯವರೇ ಹುಷಾರಾಗಿರಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉದಾಸಿಯವರು ನಮ್ಮ ಜೊತೆಯಲ್ಲಿ ರೂಲಿಂಗ್ ಪಾರ್ಟಿಯಲ್ಲಿರುವುದರಿಂದ ನಾವು safe ಆಗಿದ್ದೇವೆ.

ಶ್ರೀ ಸಿದ್ದರಾಮಯ್ಯ: ಅದು ಏನಿ safe ಆಗಿ ಇದ್ದಿರೋ, unsafe ಆಗಿ ಇದ್ದಿರೋ, ಮಾನ್ಯ ಉದಾಸಿಯವರ ಮೇಲಂತೂ ನಿಮ್ಮ ಕಣ್ಣು ಬಿದ್ದಿದೆ. ಅವರು ಈ ಸದನಕ್ಕೆ ಬಂದ ಮೇಲೆ ಅಧಿಕಾರದಲ್ಲಿದ್ದರು, ಮೇಲ್ಮನೆಯಲ್ಲಿ ವಿರೋಧಪಕ್ಷದಲ್ಲಿದ್ದರು. ಇಲ್ಲಿ ನಆಲ್ಕು ಬಾರಿಗೆ ಗೆದ್ದಾಗಲೂ Ruling Party ಯಲ್ಲೆ ಇದ್ದರು, 1983, 1985, 1994, 2004ರಲ್ಲಿ ಮಂತ್ರಿಯಾಗಿಯೂ ಇದ್ದರು. ನಾನು ಕೂಡ ಅವರ ಜೊತೆಯಲ್ಲಿ ಮಂತ್ರಿಯಾಗಿದ್ದೆ. ಈಗ ನನಗೆ ವಿರೋಧ ಪಕ್ಷದಲ್ಲಿರುವಂಥ ಅವಕಾಶ ಬಂದಿದೆ. ಅವರು ಈಗ ಗೆದ್ದಿದ್ದರೆ ಇಲ್ಲಿ ವಿರೋಧ ಪಕ್ಷದಲ್ಲಿರುತ್ತಿದ್ದರು. ಅವರಿಗೆ ಹಣದ ಶಕ್ತಿ ಮುಂದೆ ಹೋರಾಟ ಮಾಡುವುದಕ್ಕೆ ಆಗದೇ, ಈ ಸಾರಿ ಸೋತರು. ಅವರು ಅತ್ಯಂತ ಸಜ್ಜನಿಕೆ ಇದ್ದಂಥ ವ್ಯಕ್ತಿಯಾಗಿದ್ದರು, ಯಾರಿಗೂ ಕೂಡ ಮನಸ್ಸಿಗೆ ನೋವು ಆಗುವ ರೀತಿಯಲ್ಲಿ hurt ಆಗುವ ರೀತಿಯಲ್ಲಿ ಯಾರಿಗೂ ಮಾತನಾಡುತ್ತಿರಲಿಲ್ಲ. ಅವರು ಬಹಳ ಸುಸಂಸ್ಕೃತಿಯನ್ನು ಬೆಳೆಸಿಕೊಂಡಿದ್ದವರು. ಇದರ ಜೊತೆಗೆ ಅವರಿಗೆ ಬಹುಮುಖ ಪ್ರತಿಭೆ ಇತ್ತು. ಅವರು ಬರೀ ರಾಜಕಾರಣಕ್ಕೆ ಸೀಮಿತವಾಗಿರಲಿಲ್ಲ. ಅವರು ಮೂಲತಃ ವಕೀಲರಾಗಿದ್ದರು. ಅವರು ಹೂವಿನ ಹಡಗಲಿಯಲ್ಲಿ ವಕೀಲಿ ವೃತ್ತಿಯನ್ನು ಮಾಡುತ್ತಿದ್ದರು. ನಾವು ಆಗ ಹೋಗುತ್ತಿದ್ದೆವು. ಆಗ ಅವರು ಒಂದು ಸಣ್ಣ ಬಾಡಿಗೆ ಮನೆಯಲ್ಲಿದ್ದುಕೊಂಡು ವಕೀಲಿ ವೃತ್ತಿಯನ್ನು ಮಾಡುತ್ತಿದ್ದರು. ಈಗ ಅಲ್ಲಿ ಒಂದು ತೋಟವನ್ನು ಮಾಡಿದ್ದಾರೆ, ಆ ತೋಟದಲ್ಲಿ ಒಂದು ಮನೆಯನ್ನು ಕಟ್ಟಿಕೊಂಡಿದ್ದಾರೆ. ಅವರು ಒಂದು ಬಾಡಿಗೆ ಮನೆಯಲ್ಲಿದ್ದರು, ಅದನ್ನು ಈಗಲೂ ಹಾಗೆ ಇಟ್ಟುಕೊಂಡಿದ್ದಾರೆ. ಅವರು ಬಹಳ ವರ್ಷಗಳ ಕಾಲ 1983, 1985ರವರೆಗೂ ಬಾಡಿಗೆ ಮನೆಯಲ್ಲೆ ಇದ್ದರು. ಅವರು ಎಷ್ಟು ಪ್ರಾಮಾಣಿಕರಾಗಿದ್ದರೆಂದರೆ ಬೆಂಗಳೂರಿನಲ್ಲಿ ಸ್ವಂತ ಮನೆಯನ್ನು ಇವತ್ತಿಗೂ ಕಟ್ಟಿ ವಾಸ ಮಾಡಲೇ ಇಲ್ಲ. ಅವರು ಡಾಲರ್ಸ್ ಕಾಲೋನಿಯಲ್ಲಿ ಒಂದು ಸಣ್ಣ ಮನೆಯನ್ನು ತೆಗೆದುಕೊಂಡು ಕಟ್ಟುತ್ತಿದ್ದರು. ಅದು ಮೂರು ವರ್ಷಗಳಿಂದ ಕುಂಟುತ್ತಾ ಕಟ್ಟುವ ಕೆಲಸ ಸಾಗುತ್ತಿತ್ತು. ಆ ಮನೆ

ಪೂರ್ಣವಾಗಲೇ ಇಲ್ಲ. ಅವರು ಬದುಕಿರುವಾಗ ಆ ಮನೆಗೆ ಗೃಹ ಪ್ರವೇಶ ಮಾಡಲೇ ಇಲ್ಲ. ಆ ಮನೆ ಇನ್ನೂ incomplete ಆಗಿದೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಈಗ ರಾಜಕಾರಣಕ್ಕೆ ಬಂದಂಥವರು, ಬೆಂಗಳೂರಿನಲ್ಲಿ ದೊಡ್ಡ ಬಂಗಲೆಗಳನ್ನು ಮಾಡಿ, ಅಪಾರವಾದಂಥ ಆಸ್ತಿಯನ್ನು ಮಾಡಿಕೊಂಡಿರುತ್ತಾರೆ. ಇವರು ಅದಕ್ಕೆ ಅಪವಾದವಾಗಿದ್ದಾರೆ. ಮಾನ್ಯ ಪ್ರಕಾಶ್‌ರವರು, he is an exception ಇವರು ಪ್ರಾಮಾಣಿಕವಾಗಿದ್ದರು, ಬರೀ ಮಾತಿನಲ್ಲಿ ಪ್ರಾಮಾಣಿಕತೆ ಇರಲಿಲ್ಲ, ಕೃತಿಯಲ್ಲೂ ಕೂಡ ಪ್ರಾಮಾಣಿಕವಾಗಿದ್ದರು. ಇದರ ಜೊತೆಗೆ ಅವರು ಸಾಹಿತ್ಯ ಕ್ಷೇತ್ರದಲ್ಲಿ, ನಾಟಕದಲ್ಲಿ, ಇವುಗಳಲ್ಲೂ ಕೂಡ ಬಹಳ ಅಭಿರುಚಿಯನ್ನು ಬೆಳೆಸಿಕೊಂಡಿದ್ದರು. ಹಾಗಾಗಿ ಅವರಿಗೆ ಸಾಹಿತ್ಯ ಕ್ಷೇತ್ರದಲ್ಲಿ ಅಪಾರವಾದಂಥ ಸ್ನೇಹ ಇತ್ತು. ಅವರಿಗೆ ನಾಟಕರಂಗ ಕ್ಷೇತ್ರದಲ್ಲಿ, ರಂಗಕರ್ಮಿಗಳು, ರಾಜಕಾರಣದಲ್ಲಿ, ಅಪಾರವಾದ ಸ್ನೇಹಿತರುಗಳು ಇದ್ದರು. ಇದಲ್ಲದೇ ಬೇರೆ ಬೇರೆ ಕ್ಷೇತ್ರಗಳಲ್ಲೂ ಅವರಿಗೆ ಅಪಾರವಾದಂಥ ಸ್ನೇಹಿತರುಗಳಿದ್ದರು.

ಅದಕ್ಕೆ ನಾವು ಅವರನ್ನು ಅಜಾತಶತ್ರು ಎಂದು ಕರೆಯುತ್ತಿದ್ದೆವು. ಅವರಿಗೆ ಯಾರಾದರೂ ವೈರಿಗಳಿದ್ದರು ಎಂದು ನನಗೆ ಅನಿಸುತ್ತಿರಲಿಲ್ಲ. ರಾಜಕೀಯವಾಗಿಯೂ ಕೂಡ ಅವರು ಎದುರಾಳಿಗಳನ್ನು ಯಾವತ್ತೂ ದ್ವೇಷ ಮಾಡತಕ್ಕದ್ದಾಗಲೀ, ಅಸೂಯೆಯಿಂದ ಕಾಣತಕ್ಕದ್ದನ್ನಾಗಲೀ ನಾವು ನೋಡಿದ ಯಾವುದೇ ನಿದರ್ಶನವಿಲ್ಲ. ಏಕೆಂದರೆ, ನಾನು 40 ವರ್ಷಗಳಿಂದ ಅವರ ಒಡನಾಡಿಯಾಗಿ ಬಹಳ ಹತ್ತಿರದಿಂದ ಅವರನ್ನು ನೋಡಿದ್ದೇನೆ. ಅವರೊಂದಿಗೆ ನನಗೆ ಬಹಳ ಸ್ನೇಹವಿತ್ತು. ನನಗೂ ಅವರಿಗೂ ವಯಸ್ಸಿನಲ್ಲಿ ಆರೇಳು ವರ್ಷಗಳು ವ್ಯತ್ಯಾಸವಿದ್ದರೂ ಕೂಡ, ಅವರು ದೊಡ್ಡವರಿರಲಿ, ಚಿಕ್ಕವರಿರಲಿ ಎಲ್ಲರನ್ನೂ ಅಷ್ಟೇ ಪ್ರೀತಿಯಿಂದ, ಅಭಿಮಾನದಿಂದ, ಗೌರವದಿಂದ ಕಾಣತಕ್ಕಂಥ ಒಂದು ಒಳ್ಳೆಯ ಗುಣವನ್ನು ಬೆಳೆಸಿಕೊಂಡಿದ್ದಂಥವರು. ಅಂಥವರು ರಾಜಕಾರಣದಲ್ಲಿ ಅಪರೂಪ. ಅದಕ್ಕಾಗಿಯೇ ಅವರು ಕರ್ನಾಟಕ ಕಂಡಂಥ ಒಬ್ಬ ಅಪರೂಪದ, ಬಹುಮುಖ ಪ್ರತಿಭೆ ಇದ್ದಂಥ ರಾಜಕಾರಣಿ. ಅಷ್ಟೇ ಅಲ್ಲ, ಪ್ರಾಮಾಣಿಕವಾಗಿ ಇದ್ದಂಥ ರಾಜಕಾರಣಿ. ಜೊತೆಗೆ, ಅವರು ಇವತ್ತಿನ ನಮ್ಮ ಎಲ್ಲ ಯುವ ರಾಜಕಾರಣಿಗಳಿಗೆ ಆದರ್ಶರಾಗಿದ್ದರು ಎಂದು ಹೇಳಬಹುದು. ಅವರು ಸರ್ಕಾರದಲ್ಲಿದ್ದುಕೊಂಡು, ಒಂದು ಇಲಾಖೆ ಬಗ್ಗೆ ಮಾತ್ರಲ್ಲ, ಎಲ್ಲ ಇಲಾಖೆಗಳ ಬಗ್ಗೆಯೂ ಮಾತನಾಡುತ್ತಿದ್ದರು. ಸಂಬಂಧಪಟ್ಟ ಮಂತ್ರಿಗಳು

ಹಾಜರಿಲ್ಲ ಎಂದು ವಿರೋಧ ಪಕ್ಷಗಳವರು ಪ್ರಶ್ನೆ ಮಾಡಿದಾಗ, ನಾನು ಇದ್ದೇನೆ, ನಾನು ಅದಕ್ಕೆ ಉತ್ತರ ಕೊಡುತ್ತೇನೆ ಎಂದು ಹೇಳುತ್ತಿದ್ದರು. ಎಲ್ಲಾ ಇಲಾಖೆಗಳ ಬಗ್ಗೆಯೂ ಕೂಡ, ಸಂಬಂಧಪಟ್ಟ ಮಂತ್ರಿಗಳು ಎಷ್ಟು ಅಧಿಕಾರಯುತವಾಗಿ ಮಾತನಾಡುತ್ತಾರೋ, ಅಷ್ಟೇ ಅಧಿಕಾರಯುತವಾಗಿ ಬೇರೆ ಇಲಾಖೆಗಳ ಮೇಲೂ ಮಾತನಾಡತಕ್ಕಂಥ ಒಂದು ಶಕ್ತಿ ಅವರಿಗಿತ್ತು. ಅಷ್ಟೊಂದು ಜ್ಞಾನ ಅವರಿಗಿತ್ತು. ಏಕೆಂದರೆ, ಅವರು ಸರ್ಕಾರದಲ್ಲಿ ಇದ್ದುಕೊಂಡು, ಎಲ್ಲ ಇಲಾಖೆಗಳ ಬಗ್ಗೆ ತಿಳಿದುಕೊಳ್ಳತಕ್ಕಂಥ, ಅರ್ಥ ಮಾಡಿಕೊಳ್ಳತಕ್ಕಂಥ ಸಾಮರ್ಥ್ಯ ಅವರಿಗಿತ್ತು ಎಂದು ನಾನು ಇವತ್ತು ನೆನಪು ಮಾಡಿಕೊಳ್ಳಲು ಬಯಸುತ್ತಿದ್ದೇನೆ. ಅವರ ಕ್ಷೇತ್ರದಲ್ಲಿ ನಿರ್ಮಾಣವಾಗುತ್ತಿದ್ದ ರಂಗಮಂದಿರಕ್ಕಾಗಿ ಹಣ ಕೊಡುತ್ತೇನೆ ಎಂದು ಈಗಾಗಲೇ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ಈ ಬಗ್ಗೆ ನಾನು ಒತ್ತಾಯ ಮಾಡುವುದಕ್ಕೆ ಹೋಗುವುದಿಲ್ಲ. ಅದನ್ನು ಕೂಡಲೇ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಂಥ ಪ್ರಕಾಶ್‌ರವರು ಇವತ್ತು ನಮ್ಮನ್ನು ಅಗಲಿದ್ದಾರೆ. ಅವರು ಒಂದು ಆದರ್ಶವಾಗಿದ್ದರು. ನಾಟಕ ಅಕಾಡಮಿಯಲ್ಲಿ ಅವರ ಹೆಸರಿನಲ್ಲಿ ಏನಾದರೂ ಒಂದು ಶಾಶ್ವತವಾಗಿ ಮಾಡಲು ಸಾಧ್ಯವಾದರೆ ಅದನ್ನು ಮಾಡಲು ಪ್ರಯತ್ನ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಏಕೆಂದರೆ, ಸ್ವತಃ ಅವರೇ ಒಬ್ಬ ರಂಗಕರ್ಮಿಯಾಗಿದ್ದರು. ಅವರೇ ಒಂದು ನಾಟಕ ಸಂಘವನ್ನು ಕಟ್ಟಿಕೊಂಡು, ಅವರೇ ನಾಟಕವನ್ನಾಡುತ್ತಿದ್ದರು ಮತ್ತು ಆಡಿಸುತ್ತಿದ್ದರು. ಅವರು ಬಯಲು ನಾಟಕಗಳನ್ನು ಆಡುತ್ತಿದ್ದರು. ನಾನು ಅನೇಕ ಸಲ ಅವರ ಬಯಲು ನಾಟಕಗಳನ್ನು ನೋಡಿದ್ದೇನೆ. ಅವರು ಒಂದು ಸಿನಿಮಾದಲ್ಲೂ ಮಾಡಿದ್ದರು. ಶಾಸಕರ ದಿನಾಚರಣೆಗಳು ಬಂದಾಗ ಅವರು ನಾಟಕಗಳನ್ನು ಮಾಡುತ್ತಿದ್ದರು. ಒಂದು ಸಲ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರಾಗಿದ್ದರು. ಅವರು ಸರ್ಕಾರದಲ್ಲಿರುವಾಗ ಶಾಶ್ವತವಾಗಿ ಅವರೇ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿರುತ್ತಿದ್ದರು. ಅವರು ಹೇಳಿದವರನ್ನೇ ನಾಟಕ ಅಕಾಡೆಮಿಗೆ, ಸಾಹಿತ್ಯ ಅಕಾಡೆಮಿಗೆ ಮತ್ತು ಯಾವುದೇ ಕಲೆಗೆ ಸಂಬಂಧಿಸಿದುದಕ್ಕೆ ಅವರ ತೀರ್ಮಾನಕ್ಕೆ ಬಿಟ್ಟು ಬಿಡುತ್ತಿದ್ದೆವು. ಒಂದು ರೀತಿ ಅವರು ಸಾಂಸ್ಕೃತಿಕ ರಾಯಭಾರಿಯಾಗಿ ಕೆಲಸ ಮಾಡುತ್ತಿದ್ದರು. ಇವತ್ತು ನಡೆಯುತ್ತಿರುವ "ಹಂಪಿ ಉತ್ಸವ"ವನ್ನು ಪ್ರಾರಂಭ ಮಾಡಿದವರು ಎಂ.ಪಿ. ಪ್ರಕಾಶ್‌ರವರು. ನಾವು ಮೈಸೂರಿನಲ್ಲಿ ದಸರಾ ಉತ್ಸವವನ್ನು ಮಾಡುತ್ತಿದ್ದೆವು. ಹಾಗೆ ನಾವು ದಸರಾ ಉತ್ಸವ

ಮಾಡುತ್ತಿದ್ದಂಥ ಸಂದರ್ಭದಲ್ಲಿ, 1994ರಲ್ಲಿ ನಾನು ಹಣಕಾಸಿನ ಮಂತ್ರಿಯಾಗಿದ್ದಾಗ ನನಗೆ ಹೇಳಿದರು. ಸಿದ್ದರಾಮಯ್ಯನವರೇ ನಾವು ಹಂಪಿ ಉತ್ಸವ ಮಾಡಬೇಕು, ಏಕೆಂದರೆ ದಸರಾ ಪ್ರಾರಂಭವಾದುದೇ ವಿಜಯನಗರದ ಅರಸರಿಂದ. ಅದಕ್ಕೋಸ್ಕರವಾಗಿ ನಾವು ಅಲ್ಲಿ ಅದ್ದೂರಿಯಾಗಿ ಆಚರಣೆ ಮಾಡಬೇಕೆಂದು ಹೇಳಿ ಹಂಪಿ ಉತ್ಸವವನ್ನು ಮಾಡಲಿಕೆ ಪ್ರಾರಂಭ ಮಾಡಿದರು. ಇವತ್ತು ಆ ಉತ್ಸವ ನಡೆದುಕೊಂಡು ಹೋಗುತ್ತಿದೆ. ಅವರಿಗೆ ಕಲೆ, ಸಂಸ್ಕೃತಿ, ನಾಟಕ, ಸಂಗೀತ ಇವುಗಳಲ್ಲಿ ಅಪಾರವಾದಂಥ ಆಸಕ್ತಿ ಇತ್ತು. ಮತ್ತು ಅವರು ಓದತಕ್ಕಂಥ ಗೀಳನ್ನು ಬೆಳೆಸಿಕೊಂಡಿದ್ದರು. ಯಾವತ್ತಿಗೂ ಕೂಡ ಸುಮ್ಮನೆ ಕಾಲ ಕಳೆಯುವುದು ಅವರ ಸ್ವಭಾವವೇ ಅಲ್ಲ. ವಿಶೇಷವಾಗಿ, ರಾಜಕಾರಣಿಗಳು ಓದುವ ಹವ್ಯಾಸದ ಗೀಳನ್ನು ಬೆಳೆಸಿಕೊಳ್ಳುವುದು ಅಪರೂಪ. ಅದನ್ನು ಅವರು ಬೆಳೆಸಿಕೊಂಡಿದ್ದರು. ಅವರು ಪ್ರಯಾಣ ಮಾಡುವಾಗ ಅಂದರೆ ಟ್ರೈನಿನಲ್ಲಿ ಹೋಗುವಾಗ, ಬಸ್ಸಿನಲ್ಲಿ ಹೋಗುವಾಗ ಹೀಗೆ ಯಾವಾಗಲೂ ಒಂದು ಪುಸ್ತಕವನ್ನು ಹಿಡಿದೇ ಇರುತ್ತಿದ್ದರು. ಅವರು ಅಷ್ಟರ ಮಟ್ಟಿಗೆ ಓದುವ ಗೀಳನ್ನು ಬೆಳೆಸಿಕೊಂಡಿದ್ದರು. ಎಲ್ಲಕ್ಕಿಂತ ಹೆಚ್ಚಾಗಿ ಒಬ್ಬ ಒಳ್ಳೆಯ ಸ್ನೇಹಿತನನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಅವರ ನಿಧನದಿಂದ ವಿಶೇಷವಾಗಿ, ಕರ್ನಾಟಕ ರಾಜಕಾರಣಕ್ಕೆ ಅಪಾರವಾದ ನಷ್ಟವಾಗಿದೆ. ಅವರು ಇನ್ನೂ ಕೆಲವು ವರ್ಷಗಳ ಕಾಲ ಇರಬೇಕಾಗಿತ್ತು. ವೈಯಕ್ತಿಕವಾಗಿ ಇವತ್ತು ನಾವು ಒಬ್ಬ ಒಳ್ಳೆಯ ಸ್ನೇಹಿತನನ್ನು ಕಳೆದುಕೊಂಡಿದ್ದೇವೆ. ಸಮಾಜವಾದ ಚಳುವಳಿಯ ಕೊಂಡಿಯೊಂದು ಇವತ್ತು ಕಳಚಿ ಹೋಗಿದೆ. ಅಷ್ಟರ ಮಟ್ಟಿಗೆ ನಾವು ಇವತ್ತು ಬಹಳ ನಷ್ಟವನ್ನು, ನೋವನ್ನು ಅನುಭವಿಸುತ್ತಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಎಂ.ಪಿ. ಪ್ರಕಾಶ್‌ರವರ ಆತ್ಮಕ್ಕೆ ನಾನು ಚಿರಶಾಂತಿಯನ್ನು ಕೋರುತ್ತೇನೆ.

ಇನ್ನು, ಪಿ. ತಿಪ್ಪಯ್ಯನವರು ಮೂಲತಃ ಶಿಕ್ಷಕರಾಗಿದ್ದರು. ಇವರು ಅಜ್ಜಂಪುರದಲ್ಲಿ ಹುಟ್ಟಿ ಮೇಷ್ಟರ ಕೆಲಸವನ್ನು ಮಾಡುತ್ತಿದ್ದರು. ಅಮೇಲೆ ರಾಜಕಾರಣಕ್ಕೆ ಬಂದು ಇಲ್ಲಿ ಎಂ.ಎಲ್.ಎ. ಆಗಿದ್ದರು. ಎಂ.ಎಲ್.ಎ. ಆಗಿ ಒಂದು ಟರ್ಮ್ ಇಲ್ಲಿ ಕೆಲಸ ಮಾಡಿದರು. ಒಂದು ಟರ್ಮ್‌ನಲ್ಲಿ ಅಪ್ಪರ್ ಹೌಸಿನಲ್ಲೂ ಕೂಡ ಕೆಲಸ ಮಾಡಿದರು. ತಿಪ್ಪಯ್ಯನವರೂ ಸಹ ನಮ್ಮ ಜೊತೆಯಲ್ಲೇ ಇದ್ದವರು. ಇತ್ತೀಚೆಗೆ ಅವರು ನಿಧರಾಗಿದ್ದಾರೆ. ಅವರು ಒಬ್ಬ ಒಳ್ಳೆಯ ಮನುಷ್ಯರು, ಒಳ್ಳೆಯ ಸಂಸ್ಕೃತಿ ಇದ್ದಂಥವರು. ಅವರೂ ಕೂಡ

ಒಳ್ಳೆಯ ಸಾರ್ಥಕ ಜೀವನವನ್ನು ನಡೆಸಿದಂಥವರು. ಇಂದು ಅವರು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೂ ಕೂಡ ಶಾಂತಿಯನ್ನು ಕೋರುತ್ತೇನೆ.

ಇನ್ನು, ಮೊಹಮದ್ ಉಮರ್ ಅಬ್ದುಲ್ ರೆಹಮಾನ್ ಎನ್ನುವವರು 1985ನೇ ಇಸವಿಯಲ್ಲಿ 8ನೇ ವಿಧಾನಸಭೆಗೆ ರಾಯಚೂರಿನಿಂದ ಇಲ್ಲಿಗೆ ಆಯ್ಕೆಯಾಗಿ ಬಂದಿದ್ದರು. ಅವರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಸಾರ್ವಜನಿಕ ಕ್ಷೇತ್ರದಲ್ಲಿ ಅಪಾರವಾದ ಕೆಲಸ ಮಾಡಿರತಕ್ಕಂಥವರು. ಅವರೂ ಕೂಡ ಇತ್ತೀಚೆಗೆ ನಮ್ಮನ್ನು ಅಗಲಿದ್ದಾರೆ.

ಇನ್ನು, ಪಂಡಿತ್ ಭೀಮಸೇನೆ ಜೋಷಿಯವರ ಹೆಸರು ಜಗತ್ಪ್ರಸಿದ್ಧವಾದಂಥ ಹೆಸರು. ಅವರು ಹಿಂದೂಸ್ತಾನಿ ಸಂಗೀತದಲ್ಲಿ ಮೇರು ವ್ಯಕ್ತಿತ್ವ ಇದ್ದಂಥ ಒಬ್ಬ ಮಹಾನ್ ಸಂಗೀತಗಾರರು. ಅವರೂ ಸಹ ಇಂದು ನಮ್ಮನ್ನು ಅಗಲಿದ್ದಾರೆ. ಅವರಿಗೆ ಸಂಗೀತದ ಗೀಳು ಅಂಟಿಕೊಂಡು, ಸಂಗೀತ ಕಲಿಯಬೇಕು ಎಂದೇ ಚಿಕ್ಕ ವಯಸ್ಸಿನಲ್ಲೇ ಮನೆ ಬಿಟ್ಟು ಹೊರಟು ಹೋಗುತ್ತಾರೆ. ಇವರು ಹುಟ್ಟಿರುವುದು ರೋಣ ತಾಲ್ಲೂಕಿನಲ್ಲಿ. ಮತ್ತೆ ಧಾರವಾಡಕ್ಕೆ ಬಂದು ಸವಾಯಿ ಗಂಧರ್ವರ ಹತ್ತಿರ ಶಿಷ್ಯರಾಗಿ ಸಂಗೀತ ಕಲಿತು, ಸಂಗೀತ ಕ್ಷೇತ್ರದಲ್ಲಿ ಬಹಳ ದೊಡ್ಡ ಎತ್ತರಕ್ಕೆ ಹೋಗುತ್ತಾರೆ. ಅವರಿಗೆ ಎಲ್ಲ ಪ್ರಶಸ್ತಿಗಲು ಸಿಕ್ಕಿವೆ. ಅವರು ಸಂಗೀತ ಕಛೇರಿಗಳನ್ನು ಬರೀ ಭಾರತ ದೇಶದಲ್ಲಿ ಅಲ್ಲ, ಜಗತ್ತಿನ ಅನೇಕ ಸ್ಥಳಗಳಲ್ಲಿ ಸಂಗೀತ ಕಛೇರಿಗಳನ್ನು ನಡೆಸಿ ಅಪಾರವಾದಂಥ ಅಭಿಮಾನಿಗಳನ್ನು ಪಡೆದುಕೊಂಡಿದ್ದಂಥ ಒಬ್ಬ ಸಂಗೀತ ಸಾರ್ವಭೌಮರು. ಅವರು ಇವತ್ತು ಇಲ್ಲ. ಅವರು ಕರ್ನಾಟಕದಲ್ಲೇ ಹುಟ್ಟಿ, ಕರ್ನಾಟಕದಲ್ಲೇ ಸಂಗೀತವನ್ನು ಕಲಿತಿದ್ದರೂ ಕೂಡ ಅವರು ವಾಸ ಮಾಡುತ್ತಿದ್ದುದು ಪುಣೆಯಲ್ಲಿ, ಅವರ ಅಂತಿಮ ದಿನಗಳೂ ಕೂಡ ಅಲ್ಲೇ ಆಯಿತು. ಅವರ ಪಾರ್ಥಿವ ಶರೀರದ ಸಂಸ್ಕಾರವೂ ಕೂಡ ಅಲ್ಲೇ ಆಯಿತು. ಅವರು ಪುಣೆಯಲ್ಲಿ ಅವರ ಗುರುಗಳಾದ ಸವಾಯಿ ಗಂಧರ್ವರ ಹೆಸರಿನಲ್ಲಿ, ಅವರ ಗೌರವಾರ್ಥವಾಗಿ ಪ್ರತಿ ವರ್ಷವೂ ಒಂದು ಸಂಗೀತ ಮಹೋತ್ಸವವನ್ನು ನಡೆಸುತ್ತಿದ್ದರು. ಹೀಗೆ ಅವರು ತಮ್ಮ ಗುರುಗಳಿಗೆ ಅಪಾರವಾದ ಗೌರವವನ್ನು ಕೊಟ್ಟುಕೊಂಡು, ಬಹಳ ಅಭಿಮಾನದಿಂದ ಇದನ್ನು ಮಾಡಿಕೊಂಡು ಬರುತ್ತಿದ್ದರು. ಅವರಿಗೆ ಬಹಳಷ್ಟು ಪ್ರಶಸ್ತಿಗಳು ಬಂದಿವೆ. ಕರ್ನಾಟಕ ರತ್ನ, ಭಾರತ ರತ್ನ, ಪದ್ಮಭೂಷಣ, ಪದ್ಮವಿಭೂಷಣ ಹೀಗೆ ಎಲ್ಲ ಪ್ರಶಸ್ತಿಗಳೂ ಬಂದಿದ್ದು, ಅಂಥ ಒಬ್ಬ ಭಾರತ ರತ್ನವನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಅಂಥವರು ಇವತ್ತು ನಮ್ಮನ್ನೆಲ್ಲ

ಅಗಲಿದ್ದಾರೆ. ಅಂಥ ಒಬ್ಬ ಮೇರು ಸಂಗೀತಗಾರರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆಯನ್ನು ಮಾಡುತ್ತೇನೆ.

ಇನ್ನು ಬಸವರಾಜ ಗುಡಿಗೇರಿಯವರು, ಇವರು ಸ್ವಲ್ಪ ದಿನ ನಮ್ಮ ಪಕ್ಷದಲ್ಲಿದ್ದರು. ಜನತಾದಳಕ್ಕೆ ಬಂದು ಲೋಕಸಭೆಗೆ ಅಭ್ಯರ್ಥಿಯಾಗಿದ್ದರು. ಆದರೆ ಅವರು ಸೋತು ಬಿಟ್ಟರು, ಗೆಲ್ಲಲಿಲ್ಲ. ಅವರು ಸದಾ ಪೈಲ್ವಾನರಾಗಿದ್ದರು, ಕುಸ್ತಿ ಮಾಡುತ್ತಿದ್ದರು ಮತ್ತು ಒಳ್ಳೆಯ ನಾಟಕಕಾರರಾಗಿದ್ದರು. ಉತ್ತರ ಕರ್ನಾಟಕದ ಭಾಗದಲ್ಲಿ ಅಂದರೆ ಹುಬ್ಬಳ್ಳಿ, ಬೆಳಗಾಂ, ಬಿಜಾಪುರ, ಬಾಗಲಕೋಟೆ ಈ ಭಾಗಗಳಲ್ಲಿ ಬಹಳ ಒಳ್ಳೆಯ ನಾಟಕಕಾರರಾಗಿದ್ದರು. ಅವರ ನಾಟಕಗಳು ಬಹಳ ಹೆಸರುವಾಸಿಯಾಗಿದ್ದವು. ಜೊತೆಗೆ ಅವರು ಬಹಳ ಜನಪ್ರಿಯತೆಯನ್ನು ಗಳಿಸಿದ್ದಂಥ ಒಬ್ಬ ನಾಟಕಕಾರ. ಅವರೂ ಕೂಡ ಇವತ್ತು ನಮ್ಮನ್ನು ಅಗಲಿದ್ದಾರೆ. ರಾಜಕಾರಣದಲ್ಲಿ ಅವರು ಮೇಲೆ ಬರಲು ಆಗಲಿಲ್ಲ. ಅವರಿಗೆ ರಾಜಕಾರಣದಲ್ಲಿ ಬಹಳ ಆಸಕ್ತಿ ಇತ್ತು, ಎಂ.ಎಲ್.ಎ. ಆಗಬೇಕು, ಲೋಕಸಭಾ ಸದಸ್ಯನಾಗಬೇಕು ಎಂದೆಲ್ಲಾ ಆಸೆಯಿತ್ತು. ಅದು ಆಗಲಿಲ್ಲ. ಅವರೂ ಕೂಡ ಇಂದು ನಮ್ಮನ್ನು ಅಗಲಿದ್ದಾರೆ. ಆದರೆ ಅವರು ರಾಜಕಾರಣದಲ್ಲಿ ಮೇಲಕ್ಕೆ ಬರಲಿಕ್ಕಾಗಲಿಲ್ಲ. ರಾಜಕಾರಣದಲ್ಲಿ ತಾವು ಎಂಎಲ್ಎ ಆಗಬೇಕು, ಲೋಕಸಭಾ ಸದಸ್ಯರಾಗಬೇಕೆಂಬ ಆಸೆ ಅವರಿಗಿತ್ತು. ಆದರೆ, ಅದಾಗಲಿಲ್ಲ, ಅವರೂ ಕೂಡ ನಮ್ಮನ್ನಗಲಿದ್ದಾರೆ. ಇನ್ನು, ಶಬರಿಮಲೆ ದುರಂತ ಬಹಳ ದುಃಖದ ವಿಚಾರ. ಅಲ್ಲಿ ನೂರಾರು ಜನ ಸಾಯುತ್ತಿದ್ದಾರೆ. ಶಬರಿಮಲೆಗೆ ಪ್ರತಿ ಸಾರಿ ಕೂಡ ವಿಶೇಷವಾಗಿ ಮಕರ ಸಂಕ್ರಾಂತಿ ದಿವಸ ಬಹಳ ಜನ ಭಕ್ತರು ಹೋಗುತ್ತಾರೆ. ಆ ಸಂದರ್ಭದಲ್ಲಿ ನೂಕುನುಗ್ಗಲಿಗೆ ಸಿಕ್ಕಿ ಹಾಕಿಕೊಂಡು, ಕಾಲ್ತುಳಿತಕ್ಕೆ ಸಿಕ್ಕಿ ಹಾಕಿಕೊಂಡು ಜನ ಸಾಯುತ್ತಾರೆ. ಅದಕ್ಕೋಸ್ಕರ ಈ ರಾಜ್ಯ ಸರ್ಕಾರ ಕೇರಳ ರಾಜ್ಯ ಸರ್ಕಾರದ ಜೊತೆ ಮಾತನಾಡಬೇಕು. ಅಲ್ಲಿ ಏಕೆ ಹೀಗಾಗುತ್ತಿದೆ ಎಂದು ಕೇಳಬೇಕು. ಏನೋ ಒಂದು ವರ್ಷ ಈ ರೀತಿಯಾಗಿದ್ದರೆ ಈ ವರ್ಷವಾಗಿದೆ ಎನ್ನಬಹುದಿತ್ತು. ಆದರೆ, ಅನೇಕ ಸಾರಿ ಈ ತರಹದ ದುರಂತಗಳಾಗಿ, ಅನೇಕ ಜನ ಭಕ್ತರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಶಬರಿಮಲೆಗೆ ಹೋಗಿ ಭಕ್ತರು ತಮ್ಮ ಪ್ರಾಣ ಕಳೆದುಕೊಳ್ಳುವುದೆಂದರೆ ಅತ್ಯಂತ ದುರ್ದೈವದ ಸಂಗತಿಯಾಗಿದೆ. ಇದರ ಬಗ್ಗೆ ಈ ರಾಜ್ಯ ಸರ್ಕಾರ ಕೇರಳ ಸರ್ಕಾರದವರ ಜೊತೆ ಮಾತುಕತೆಯಾಡಿ ಏನಾದರೂ ಕ್ರಮ ತೆಗೆದುಕೊಳ್ಳಬೇಕು. ಅಲ್ಲಿ ಏಕೆ ಹೀಗಾಗುತ್ತಿದೆ, ಅದಕ್ಕೇನು

ಪರಿಹಾರ ಮಾಡಬೇಕು ಎನ್ನುವ ಬಗ್ಗೆ ಯೋಚನೆ ಮಾಡುವುದು ಒಳ್ಳೆಯದು. ಅಲ್ಲಿನ ದುರಂತದಲ್ಲಿ ಕರ್ನಾಟಕದ ನೂರಾರು ಭಕ್ತರು ಸತ್ತಿದ್ದಾರೆ. ಅಲ್ಲಿ ಇದೇ ರೀತಿ ಪ್ರತಿ ವರ್ಷ ಆಗುತ್ತಿವೆ. ಇದನ್ನು ತಪ್ಪಿಸುವುದಕ್ಕೆ ಏನಾದರೂ ಪ್ರಯತ್ನವಾಗಬೇಕೆಂದು ಈ ಸಂದರ್ಭದಲ್ಲಿ ಹೇಳಿ, ಶಬರಿ ಮಲೆ ದುರಂತದಲ್ಲಿ ಪ್ರಾಣ ಕಳೆದುಕೊಂಡವರೆಲ್ಲರಿಗೂ ಚಿರ ಶಾಂತಿ ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

+**ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):** ಮಾನ್ಯ ಅಧ್ಯಕ್ಷರೆ, ಮಾಜಿ ಸಚಿವರಾಗಿದ್ದ ಮತ್ತು ಉಪ ಮುಖ್ಯಮಂತ್ರಿಯಾಗಿದ್ದ, ಹಿರಿಯರಾದ ಶ್ರೀ ಎಂ.ಪಿ. ಪ್ರಕಾಶ್‌ರವರು, ಪಿ. ತಿಮ್ಮಯ್ಯನವರು, ಮೊಹಮದ್ ಉಮರ್ ಅಬ್ದುಲ್ ರೆಹಮಾನ್‌ರವರು, ಭೀಮಸೇನ ಜೋಷಿರವರು, ಬಸವರಾಜ್ ಗುಡಿಗೇರಿಯವರು ಮತ್ತು ಶಬರಿಮಲೆ ಅರಣ್ಯದಲ್ಲಿ ಉಂಟಾದ ದುರಂತದಲ್ಲಿ ನೂರಾರು ಜನ ಸತ್ತಿದ್ದು ಅವರ ನಿಧನ ಕುರಿತಂತೆ ತಾವು ಮಂಡಿಸಿರುವ ಸಂತಾಪ ಸೂಚನಾ ನಿರ್ಣಯಕ್ಕೆ ನಾನು ನನ್ನ ಬೆಂಬಲ ಸೂಚಿಸುತ್ತೇನೆ. ಎಂ.ಪಿ. ಪ್ರಕಾಶ್ ರವರು ಒಬ್ಬ ಪ್ರಾಮಾಣಿಕ ರಾಜಕಾರಣಿ. ಅದರಲ್ಲೂ ಅವರು ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿಯಲ್ಲಿ ಕಾನೂನು ಪದವೀಧರರಾಗಿ, 1963ರಲ್ಲಿ ಹೊಸಪೇಟೆಯಲ್ಲಿ ವಕೀಲಿ ವೃತ್ತಿಯನ್ನಾರಂಭಿಸಿ, 1967ರಲ್ಲಿ ಸಮಾಜವಾದಿ ಚಳವಳಿಗೆ ಪಾದಾರ್ಪಣೆ ಮಾಡಿದ್ದರು. 1975ರಲ್ಲಿ ತುರ್ತು ಪರಿಸ್ಥಿತಿ ವಿರುದ್ಧ ಚಳವಳಿ ನಡೆಸಿ, 1983, 1985, 1994, 2004ರಲ್ಲಿ ಸತತವಾಗಿ 5 ಬಾರಿ ವಿಧಾನ ಸಭೆಯ ಸದಸ್ಯರಾಗಿ, ಮಂತ್ರಿಯಾಗಿ, ಉಪ ಮುಖ್ಯಮಂತ್ರಿಯಾಗಿ ಈ ರಾಜ್ಯದಲ್ಲಿ ಅವರದೇ ಆದಂಥ ಒಂದು ರಾಜಕೀಯದ ಕೊಡುಗೆಯನ್ನು ಕೊಟ್ಟಿದ್ದಾರೆ. ಅದರಲ್ಲೂ ಅವರು ನಮ್ಮ ಪಕ್ಷದ ಹಿರಿಯ ಮುಖಂಡರಾಗಿದ್ದರು. ಅವರ ಅಕಾಲಿಕ ನಿಧನಕ್ಕೆ ನಾನು ಸಂತಾಪ ಸಲ್ಲಿಸಿ ಅವರ ಕುಟುಂಬಕ್ಕೆ ಮತ್ತು ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಕೋರುತ್ತೇನೆ. ಇನ್ನು, ಪಿ. ತಿಪ್ಪಯ್ಯನವರು ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಸದಸ್ಯರಾಗಿ ಕೆಲಸ ಮಾಡಿದ್ದರು. ಅವರ ಕುಟುಂಬಕ್ಕೆ, ಅಬ್ದುಲ್ ರೆಹಮಾನ್‌ರವರ ಕುಟುಂಬಕ್ಕೆ ಮೃತರ ದುಃಖವನ್ನು ಭರಿಸುವ ಶಕ್ತಿ ನೀಡಲೆಂದು ಕೋರುತ್ತೇನೆ. ಇನ್ನು, ಭೀಮಸೇನ ಜೋಷಿರವರು ಧಾರವಾಡ ಜಿಲ್ಲೆಯ ಕುಂದಗೋಳದ ಪ್ರಸಿದ್ಧ ಗಾಯಕರಾದ ಸವಾಯಿ ಗಂಧರ್ವರ ಶಿಷ್ಯರಾಗಿದ್ದು, ಅವರ ಸೇವೆ ಮಾಡಿದ್ದಾರೆ. ಅವರ ಸಾವಿನ ದುಃಖವನ್ನು ಭರಿಸುವ ಶಕ್ತಿಯನ್ನು ದೇವರು ಅವರ ಕುಟುಂಬ

ವರ್ಗದವರಿಗೆ ನೀಡಲೆಂದು ಕೋರುತ್ತೇನೆ. ಇನ್ನು, ಬಸವರಾಜ್ ಗುಡಿಗೇರಿಯವರು ಮತ್ತು ಶಬರಿಮಲೆ ದುರಂತದಲ್ಲಿ ಈ ರಾಜ್ಯದ ನೂರಾರು ಜನ, ಗ್ರಾಮೀಣ ಪ್ರದೇಶದ ಜನ ಸತ್ತಿದ್ದಾರೆ. ಈ ಎಲ್ಲಾ ಮಹನೀಯರ ಕುಟುಂಬ ವರ್ಗದವರಿಗೆ ಮೃತರ ನಿಧನದ ದುಃಖವನ್ನು ಭರಿಸುವ ಶಕ್ತಿಯನ್ನು ದೇವರು ನೀಡಲೆಂದು ಕೋರುತ್ತೇನೆ, ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಹೇಳುತ್ತಾ, ತಾವು ಮಂಡಿಸಿರುವ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರುವ ಸಂತಾಪ ಸೂಚನಾ ನಿರ್ಣಯಕ್ಕೆ ನಾನು ಬೆಂಬಲ ನೀಡುತ್ತೇನೆ. ಮಾನ್ಯ ಎಂ.ಪಿ. ಪ್ರಕಾಶ್‌ರವರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಎಂ.ಪಿ. ಪ್ರಕಾಶ್‌ರವರ ಬಗ್ಗೆ ಹೇಳುವುದಾದರೆ, ಅವರೊಬ್ಬ ಸಜ್ಜನ ರಾಜಕಾರಣಿ ಮತ್ತು ರಾಜಕಾರಣದಲ್ಲಿದ್ದು ಒಬ್ಬ ಆದರ್ಶ ರಾಜಕಾರಣಿ ಹೇಗಿರಬೇಕೆನ್ನುವುದಕ್ಕೆ ಉದಾಹರಣೆ ಎಂದರೆ ಅವರು ಎಂ.ಪಿ. ಪ್ರಕಾಶ್. ಅವರನ್ನು ನಾವೆಲ್ಲರೂ ಬಹಳ ಹತ್ತಿರದಿಂದ ನೋಡಿದ್ದೇವೆ. ವಿಧಾನ ಸಭೆ, ವಿಧಾನ ಪರಿಷತ್ತಿನಲ್ಲಿರಬಹುದು, ಎಂ.ಪಿ. ಪ್ರಕಾಶ್‌ರವರ ಜೊತೆ ಎಲ್ಲರ ಒಡನಾಟವಿತ್ತು. ಅವರ ಭಾಷಣ, ಅವರ ಮಾತುಗಳನ್ನು ನಾವೆಲ್ಲರೂ ಕೇಳಿದ್ದೇವೆ. ಯಾವುದೇ ರಂಗ, ಇಲಾಖೆಯ ಬಗ್ಗೆ ಇರಬಹುದು, ಅದರ ಬಗ್ಗೆ ಆಳವಾಗಿ ಅಧ್ಯಯನ ಮಾಡಿಕೊಂಡು ಅವರಿಲ್ಲಿ ಮಾತನಾಡಿದ್ದು, ಡಿಬೇಟ್‌ನಲ್ಲಿ ಭಾಗವಹಿಸಿದ್ದನ್ನು ನಾವು ನೋಡಿದ್ದೇವೆ. ಅವರು ಬೇರೆ ಬೇರೆ ಇಲಾಖೆಗಳ ಮಂತ್ರಿಯಾಗಿ, ಬಹಳ ದಕ್ಷತೆಯಿಂದ ಕೆಲಸ ಮಾಡಿದ್ದಾರೆ. ಯಾವುದೇ ವಿಚಾರದ ಬಗ್ಗೆ ಅವರು ತೀಕ್ಷ್ಣವಾಗಿ ಮಾತುಕತೆ ಮಾಡುವಂಥದ್ದನ್ನು ಮತ್ತು ವಿಧಾನ ಸಭೆಯಲ್ಲಿ ಅವರು ಮಾತನಾಡುವಂಥದ್ದನ್ನು ನಾವು ಕೆಲಸ ಸಂದರ್ಭದಲ್ಲಿ ನೋಡಿದ್ದೇವೆ. ಕೆಲವು ಸಚಿವರು ಗೈರು ಹಾಜರಾದ ಸಂದರ್ಭದಲ್ಲಿ ಅವರ ಎಲ್ಲಾ ಪ್ರಶ್ನೆಗಳಿಗೂ ಸಹಿತ ಇವರೇ ಉತ್ತರ ಕೊಡುವಂಥದ್ದನ್ನು ನೋಡಿದ್ದೇವೆ. 4–5 ಇಲಾಖೆಗಳ ಪ್ರಶ್ನೆಗಳಿಗೆ ಎಂ.ಪಿ. ಪ್ರಕಾಶ್‌ರವರೇ ಒಂದು ದಿವಸದಲ್ಲಿ ಕನಿಷ್ಠ 15–20 ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದನ್ನು ನೋಡಿದ್ದೇನೆ. ಹೀಗಾಗಿ, ಆ ರೀತಿಯಾದ ಒಂದು ವ್ಯಕ್ತಿತ್ವ ಅವರದಾಗಿತ್ತು. ಈಗಾಗಲೇ ಸಿದ್ದರಾಮಯ್ಯನವರು ಹೇಳಿದ ಹಾಗೆ,

ಎಂ.ಪಿ. ಪ್ರಕಾಶ್‌ರವರು ಯಾವ ಯಾವಾಗ ವಿಧಾನ ಸಭೆಗೆ ಆರಿಸಿ ಬರುತ್ತಿದ್ದರೋ ಆಗ ಅವರು Ruling Party ಯಲ್ಲಿಯೇ ಇದ್ದರು. ಅಂದರೆ ಅವರ ಪಾರ್ಟಿ Ruling Party ಆಗಿರುತ್ತಿತ್ತು. ಉದಾಸಿಯವರು ಯಾವ ಯಾವಾಗ ವಿಧಾನ ಸಭೆಗೆ ಆರಿಸಿ ಬಂದಿದ್ದಾರೆ? ಉದಾಸಿಯವರು Ruling Party ಯಲ್ಲಿಯೇ ಇದ್ದಾರೆ ಮತ್ತು ಯಾವಾಗ ಅವರು defeat ಆಗಿದ್ದಾರೆ ಆಗ ಅವರ ಪಾರ್ಟಿ opposition ನಲ್ಲಿತ್ತು. ಎಂ.ಪಿ. ಪ್ರಕಾಶ್‌ರವರ ಪರಿಸ್ಥಿತಿ ಕೂಡ ಹಾಗೇ ಇತ್ತು. ಹೀಗಾಗಿ, 2004ರಲ್ಲಿ ನಾನು ಉದಾಸಿಯವರನ್ನು ಕೇಳಿದ್ದೆ. ಆಗ ನಮ್ಮ ಪಾರ್ಟಿಗೆ 79 ಸ್ಥಾನ ಬಂತು. ಉದಾಸಿಯವರು ಆರಿಸಿ ಬಂದರು. ಆಗ ಏಕೆ ನಮ್ಮದು Ruling Party ಆಗಲಿಲ್ಲವೆಂದು ಕೇಳಿದ್ದೆ. ಆದರೆ, ಮುಂದೆ ನಮ್ಮದು Ruling Party ಆಯಿತು. ಅದರಲ್ಲಿ ಮಾನ್ಯ ಯಡಿಯೂರಪ್ಪನವರು ಉಪಮುಖ್ಯಮಂತ್ರಿಯಾದರು. ಅಂದರೆ ಉದಾಸಿಯವರು ಆರಿಸಿ ಬಂದದ್ದು ಸಾರ್ಥಕವಾಯಿತು. ಹೀಗಾಗಿ, ಅವರದೇ ಆದ ವೈಶಿಷ್ಟ್ಯತೆ ಇರುತ್ತದೆ. ಹಾಗೆಯೇ, ಎಂ.ಪಿ. ಪ್ರಕಾಶ್‌ರವರೂ ಒಂದು ವೈಶಿಷ್ಟ್ಯತೆ ಇತ್ತು. ರಾಜಕಾರಣದಲ್ಲಿದ್ದು ಸಾಹಿತ್ಯಕವಾಗಿ ಚಿಂತನೆ ಮಾಡುವಂಥದ್ದು, ವೈಚಾರಿಕವಾಗಿ ಚಿಂತನೆ ಮಾಡುವಂಥದ್ದು, ರಂಗಾಯಣ ಸಂಸ್ಥೆಯನ್ನು ಕಟ್ಟಿಕೊಂಡು, ರಂಗಭೂಮಿ ಬಗ್ಗೆ ಚಿಂತನೆ ಮಾಡುವಂಥದ್ದು ಮತ್ತು ಸ್ವತಃ ಪಾತ್ರ ಮಾಡಿ, ಸ್ವತಃ ಅದರಲ್ಲಿ involve ಆಗಿ ಹಲವಾರು ನಾಟಕಗಳಲ್ಲಿ ಅವರು ಪಾತ್ರ ಮಾಡಿ, ಅದಕ್ಕೆ ಹೆಚ್ಚು ಮೆರುಗು ಕೊಟ್ಟಂಥ, ಆ ಕಲಾವಂತಿಕೆಗೆ ಹೆಚ್ಚು ಒತ್ತು ಕೊಟ್ಟಂಥ ವ್ಯಕ್ತಿ ಎಂದರೆ ಅದು ಶ್ರೀ ಎಂ.ಪಿ. ಪ್ರಕಾಶ್. ಹೀಗಾಗಿ, ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಅವರ ಆಳವಾದ ಅಧ್ಯಯನ ಏನಿತ್ತು ಅದನ್ನು ಇವತ್ತು ನಾವೆಲ್ಲರೂ ಅನುಕರಣೆ ಮಾಡಬೇಕು. ಅವರ reading habit ಹೇಗಿತ್ತು ಎಂದರೆ, ರೈಲಿನಲ್ಲಿ ಪ್ರವಾಸ ಮಾಡುವ ಸಂದರ್ಭದಲ್ಲಿ ಹಲವಾರು ಬಾರಿ ಅವರು ನಮಗೆ ಸಿಕ್ಕಿದ್ದರು. ಆಗ ಅವರ ಕೈಯಲ್ಲಿ ಖಾಯಂ ಆಗಿ ಸಾಹಿತ್ಯದ ಅಥವಾ ಅಧ್ಯಯನ ಮಾಡುವಂಥ ಯಾವುದಾದರೂ ಉತ್ತಮ ಪುಸ್ತಕ, ಗ್ರಂಥ ಇರುತ್ತಿತ್ತು. ರೈಲಿನ ಅವರ coupeಗೆ ಹೋಗಿ ನೋಡಿ ಮಾತನಾಡಿದರೆ ಅವರು ಪುಸ್ತಕ ಓದುತ್ತಾ ಕುಳಿತಿರುವುದನ್ನು ಕಾಣುತ್ತಿದ್ದೆವು. ಅಂದರೆ, ಅವರು ಒಟ್ಟಿನಲ್ಲಿ ಸಮಯವನ್ನು waste ಮಾಡುತ್ತಿರಲಿಲ್ಲ. ಆ ರೀತಿಯ ವ್ಯಕ್ತಿತ್ವ ಇದ್ದಂಥವರು ಎಂ.ಪಿ. ಪ್ರಕಾಶ್‌ರವರು. ಹೀಗಾಗಿ, ಅವರ ವ್ಯಕ್ತಿತ್ವ, ಸಜ್ಜನಿಕೆ ಅದು ಎಲ್ಲರಿಗೂ

ಆದರ್ಶಪ್ರಾಯವಾಗಲಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬೇರೆ ಬೇರೆ ಸಂದರ್ಭಗಳಲ್ಲಿ, ಅವರು ಸರ್ಕಾರದಲ್ಲಿ ಮಂತ್ರಿಯಾಗಿದ್ದಾಗ ಯಾವುದೇ ಸಮಸ್ಯೆ ಬಂದಾಗ trouble shooter ಅಂದರೆ ಅದನ್ನು ನಿವಾರಣೆ ಮಾಡಲಿಕ್ಕೆ ಅವರ ವ್ಯಕ್ತಿತ್ವವೇ ಕಾರಣವಾಗುತ್ತಿತ್ತು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರ ಅಗಲಿಕೆ ನಮ್ಮ ರಾಜಕೀಯ ರಂಗಕ್ಕೆ, ಸಾಹಿತ್ಯ ರಂಗಕ್ಕೆ ದೊಡ್ಡ ನಷ್ಟವೆಂದು ಹೇಳ ಬಯಸುತ್ತೇನೆ. ಆ ಕ್ಯಾನ್ಸರ್ ರೋಗದ ವಿರುದ್ಧ ಹೋರಾಡಿ ಅವರು ತಮ್ಮ ಜೀವನವನ್ನು ಉಳಿಸಿಕೊಳ್ಳಬೇಕೆನ್ನುವ ಹೋರಾಟವೇನಿತ್ತು, ಇಚ್ಛಾಶಕ್ತಿ ಏನಿತ್ತು, ಅದರಿಂದ ಅವರು ಬದುಕಿದ್ದರು. ಬಹುಶಃ ಅವರು ಇನ್ನೂ ಕೆಲವು ವರ್ಷ ಬದುಕಬಹುದೆನ್ನುವ ಆಶಯ ನಮ್ಮದಾಗಿತ್ತು. ಆದರೆ, ಇಂದು ಅವರು ನಮ್ಮನ್ನಗಲಿ ಹೋಗಿದ್ದಾರೆ. ಆ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ದೇವರು ದಯಪಾಲಿಸಲಿ, ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತೆನೆ. ಅದರ ಜೊತೆಗೆ, ಪಂಡಿತ್ ಭೀಮಸೇನ ಜೋಷಿಯವರು ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ, ಸಂಗೀತ ಲೋಕದಲ್ಲಿ ಪ್ರಸಿದ್ದರಾದ ವ್ಯಕ್ತಿಯಾಗಿದ್ದರು. ನಮ್ಮ ಗದಗ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿ ಅವರ ಜನನವಾಯಿತು. ಅವರ ಕರ್ಮಭೂಮಿ ಧಾರವಾಡ. ಅವರು ಗುರುಗಳಾದಂಥ ಸವಾಯಿ ಗಂಧರ್ವರು ಕುಂದಗೋಳದಲ್ಲಿದ್ದರು. ಕುಂದಗೋಳದ ಸಣ್ಣ ಪಟ್ಟಣದಲ್ಲಿ ಸವಾಯಿ ಗಂಧರ್ವರ ಆಶ್ರಯದಲ್ಲಿ ಅವರು ಸಂಗೀತವನ್ನು ಕಲಿತರು. ಡಾ: ಗಂಗೂಬಾಯಿ ಹಾನಗಲ್‌ರವರೂ ಸಹ ಸವಾಯಿ ಗಂಧರ್ವರ ಶಿಷ್ಯರಾಗಿ ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಯಾವ ರೀತಿಯಾಗಿ ಪ್ರಸಿದ್ಧರಾಗಿದ್ದರೋ ಅದೇ ರೀತಿ ಭೀಮಸೇನ ಜೋಷಿಯವರೂ ಸಹ ಹಿಂದೂಸ್ಥಾನಿ ಸಂಗೀತದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧರಾಗಿದ್ದರು. ಹೀಗಾಗಿ, ಭೀಮಸೇನ ಜೋಷಿಯವರು ಅಪಾರವಾದ ಶಿಷ್ಯ ಬಳಗವನ್ನು ಹೊಂದಿದ್ದರು. ಸವಾಯಿ ಗಂಧರ್ವರ ಜನ್ಮ ದಿನಾಚರಣೆ ಅಂಗವಾಗಿ ನಡೆಯುವಂಥ ಹಗಲು ಮತ್ತು ರಾತ್ರಿ ಸಂಗೀತ ಸೇವೆ ಏನಿತ್ತು ಅದರಲ್ಲಿ ಪ್ರತಿವರ್ಷ ಭೀಮಸೇನ ಜೋಷಿರವರು ಮತ್ತು ಡಾ: ಗಂಗೂಬಾಯಿ ಹಾನಗಲ್‌ರವರು ಪ್ರತಿವರ್ಷ ಕುಂದಗೋಳಕ್ಕೆ ಬಂದು ಆ ಸಂಗೀತ ಸಮಾವೇಶದಲ್ಲಿ ಭಾಗವಹಿಸುತ್ತಿದ್ದರು. ಅವರ ಆರೋಗ್ಯ ಕ್ಷೀಣವಾಗುವವರೆಗೂ ಅವರು ಕುಂದಗೋಳಕ್ಕೆ ಬಂದಿದ್ದರು. ಅಂಥ ಒಬ್ಬ ಸಂಗೀತದ ಧೀಮಂತ ವ್ಯಕ್ತಿ

ನಮ್ಮ ಮಧ್ಯೆ ಇಲ್ಲ. ಅವರ ನಿಧನದಿಂದ ನಮ್ಮ ಸಂಗೀತ ಲೋಕಕ್ಕೆ ದೊಡ್ಡ ನಷ್ಟವಾಗಿದೆ.

ಇನ್ನೊಬ್ಬ ರಂಗಭೂಮಿ ವ್ಯಕ್ತಿ ಎಂದರೆ ಎನ್. ಬಸವರಾಜ್, ಬಸವರಾಜ್ ಗುಡಿಗೇರಿ ಎಂದರೂ ಅವರನ್ನು ಯಾವಾಗಲೂ ಪ್ರಸಿದ್ಧವಾಗಿ ಕರೆಯುವುದು ಎನ್. ಬಸವರಾಜ್ ಎಂದರು. ಉತ್ತರ ಕರ್ನಾಟಕದ ರಂಗಭೂಮಿಯ ಒಬ್ಬ ಧೀಮಂತ ವ್ಯಕ್ತಿ ಎನ್. ಬಸವರಾಜ್‌ರವರು. ಆ ರಂಗಭೂಮಿಗೆ ಜೀವಂತಿಕೆ ಕೊಟ್ಟ ವ್ಯಕ್ತಿ ಬಸವರಾಜ್. ಏಕೆಂದರೆ, ಇತ್ತೀಚಿನ ದಿನಗಳಲ್ಲಿ ರಂಗಭೂಮಿ ಸಿನಿಮಾ ರಂಗದ ಪ್ರಭಾವ ಜಾಸ್ತಿಯಾಗಿ ಟಿ.ವಿ. ಮಾಧ್ಯಮದ ಪ್ರಭಾವ ಜಾಸ್ತಿಯಾದ ಮೇಲೆ ಬಹಳಷ್ಟು ಕ್ಷೀಣವಾಗುತ್ತಿದೆ. ಅದರಲ್ಲಿಯೂ ನಾಟಕ ಕಂಪನಿಗಳು ಬಹಳಷ್ಟು ಕ್ಷೀಣವಾಗುತ್ತಿವೆ. ಬಹುಶಃ ನಾಟಕ ಕಂಪನಿಗಳು ಮುಚ್ಚಿ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಂಥದ್ದರಲ್ಲಿ ನಾಟಕ ಕಂಪನಿಗಳನ್ನು ಕಟ್ಟಿ ಬೆಳೆಸಿ ಅದಕ್ಕಾಗಿ ಆ ಕಲಾವಿದರ ಬಗ್ಗೆ ಹೆಚ್ಚು ಕಾಳಜಿ ವಹಿಸಿದ ವ್ಯಕ್ತಿ ಬಸವರಾಜ್‌ರವರು. ನಾನು ಅವರನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. ಅವರು ಅವರ ಕೊನೆಯ ದಿನಗಳಲ್ಲಿ ನಮ್ಮ ಕಡೆ ಬರುತ್ತಿದ್ದರು, ಬಂದು ಸರ್ಕಾರದಿಂದ ಕಲಾವಿದರಿಗೆ, ರಂಗಭೂಮಿ ಕಲಾವಿದರಿಗೆ ನೆರವು ಕೊಡಿ, ಸೈಟ್ ಕೊಡಿ, ಅವರಿಗೆ ಇನ್ನಿತರ ಸೌಲಭ್ಯ ಕೊಡಿ ಎನ್ನುವ ಹೋರಾಟವನ್ನು ಕೊನೆಯ ಕ್ಷಣದವರೆಗೂ ಮಾಡಿದ್ದರೆನ್ನುವುದು ಇವತ್ತಿಗೂ ನನಗೆ ನೆನಪಿದೆ. ಎನ್. ಬಸವರಾಜ್‌ರವರ ರಂಗಭೂಮಿ ಸೇವೆ ಏನಿದೆ, ಅದನ್ನು ನಾವು ನೆನಪಿಡಬಹುದಾಗಿದೆ. ಅಂಥ ಒಬ್ಬ ಧೀಮಂತ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಈ ಎಲ್ಲಾ ಮಹನೀಯರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿ ಅವರ ಕುಟುಂಬ ವರ್ಗದವರಿಗೆ ಸಿಗಲಿ ಮತ್ತು ಮೃತರ ಆತ್ಮಕ್ಕೆ ಶಾಂತಿ ಕೋರಿ ನೀವು ಮಂಡಿಸಿರುವ ಸಂತಾಪ ಸೂಚನಾ ನಿರ್ಣಯಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತಿದ್ದೇನೆ.

+ಶ್ರೀ ಶ್ರೀನಿವಾಸ ಪ್ರಸಾದ್ ವಿ. (ನಂಜನಗೂಡು): ಮಾನ್ಯ ಅಧ್ಯಕ್ಷರೆ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ನಾಡಿನ ಗಣ್ಯರ ಅಗಲಿಕೆ, ಜೊತೆಗೆ ಶಬರಿಮಲೈ ದುರಂತದಲ್ಲಿ ದುರ್ಮರಣಕ್ಕೀಡಾದವರಿಗೆ ಮಂಡಿಸಿರುವ ಸಂತಾಪ ಸೂಚನೆ ನಿರ್ಣಯದಲ್ಲಿ ನಾನೂ ಕೂಡ ಭಾಗಿಯಾಗುತ್ತಿದ್ದೇನೆ. ಸದನದ ನಾಯಕರು ಮತ್ತು ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, ಎಂ.ಪಿ. ಪ್ರಕಾಶ್‌ರವರ ಜೊತೆಗಿನ ಒಡನಾಟ, ಅವರ ಆತ್ಮೀಯತೆ, ಅವರ ಪ್ರೀತಿ ವಿಶ್ವಾಸ

ಹೇಗಿತ್ತು ಎನ್ನುವ ಬಗ್ಗೆ ಹೇಳಿದರು. ಹುಟ್ಟು ಆಕಸ್ಮಿಕ, ಸಾವು ಖಚಿತ ಎನ್ನುವುದು ನಿಜ. 'Birth is an accident, death is certain' ಎನ್ನುತ್ತಾರೆ. ಸಾವು ಯಾವಾಗಲೂ ಕೂಡ ನಮ್ಮ ಬೆನ್ನು ಹಿಂದೆಯೇ ಇರುತ್ತದೆ. ಆದರೆ, ಪ್ರಕಾಶ್‌ರವರು ಒಂದು ತರಹದ ಅಕಾಲಿಕವಾದ ಸಾವು. On timely death ರೀತಿ ಅವರಿಗೆ ಸಾಯುವ ವಯಸ್ಸಾಗಿರಲಿಲ್ಲ. ಅವರು ಈ ನಾಡಿನ ಬಹಳ ಅಪರೂಪದ ಶ್ರೇಷ್ಠ ರಾಜಕಾಣಿಯಾಗಿದ್ದರು. ಅಜಾತಶತ್ರು ಆಗಿದ್ದರು. ಬಹುಮುಖ ಪ್ರತಿಭೆಯ ವ್ಯಕ್ತಿತ್ವದ ರಾಜಕಾರಣಿಯಾಗಿದ್ದರು. ಇನ್ನು ನಮಗೆ ಎಂ.ಪಿ. ಪ್ರಕಾಶ್‌ರವರು ಕೇವಲ ನೆನಪು ಮಾತ್ರ. ಪ್ರಕಾಶ್‌ರವರು ಮೂಲತಃ ಸ್ನೇಹಜೀವಿಯಾಗಿದ್ದರು. ನಾವು, ಅವರು ಒಟ್ಟಿಗೆ 1978ರ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿದ್ದೆವು. 'Tell your friends, I will tell who your are' ಎನ್ನುವ ಮಾತನ್ನು ಹೇಳುತ್ತೇವೆ. ನಿಮ್ಮ ಸ್ನೇಹಿತರು ಯಾರೆಂದು ಹೇಳು, ನಿಮಗೆ ಯಾವ ರೀತಿ ಗೌರ ಕೊಡಬೇಕು, ನಿಮ್ಮ ಬಗ್ಗೆ ಯಾವ ರೀತಿ ಗೌರವ ಬರುತ್ತದೆ ಎನ್ನುವ ಮಾತಿದೆ. ಅಂಥ ಅಪರೂಪದ ರಾಜಕಾರಣಿ, ಸ್ನೇಹಜೀವಿಯಾಗಿದ್ದರು. ಮಾನ್ಯ ಸಿದ್ದರಾಮಯ್ಯನವರು ಹೇಳಿದ ಹಾಗೆ, ಅವರು ಬಹುಮುಖ ಪ್ರತಿಭೆಯ ವ್ಯಕ್ತಿತ್ವವುಳ್ಳ ರಾಜಕಾರಣಿಯಾಗಿದ್ದರು. Multi-face personality ಎನ್ನುವ ಮಾತು ಹೇಳಬಹುದು. ಅವರು ಒಬ್ಬ ರಂಗಕರ್ಮಿಯಾಗಿದ್ದರು, ರಂಗಭೂಮಿ ಕಲಾವಿದರಾಗಿದ್ದರು, ಸ್ವತಃ ನಾಟಕ ರಚನೆ ಮಾಡಿದ್ದರು, ನಾಟಕಗಳಲ್ಲಿ ಸ್ವತಃ ಪಾತ್ರ ಮಾಡುತ್ತಿದ್ದರು, ಸಾಹಿತಿಗಳಾಗಿದ್ದರು, ಉತ್ತಮ ಸಾಹಿತ್ಯವನ್ನು ಕೂಡ ರಚನೆ ಮಾಡಿದ್ದರು. ಉತ್ತಮ ವಕೀಲರೂ ಸಹ ಆಗಿದ್ದರು, ಮೂಲತಃ ಸಮಾಜವಾದಿಯಾಗಿದ್ದರು. ಸಮಾಜವಾದಿಗಳಲ್ಲೂ ಕೂಡ ಲೋಹಿಯಾ ಸಮಾಜವಾದಿಯಾಗಿದ್ದರು. ಸಾತ್ವಿಕ ಸಮಾಜವಾದಿಯಾಗಿದ್ದರು. ಏಕೆಂದರೆ, ಸಮಾಜವಾದಿಗಳೆಂದರೆ, ಅವರು ಬಹಳ ವೈಯಕ್ತಿಕ ಪ್ರತಿಷ್ಠೆಯಿರುವವರು, ಅಹಂ ಇರುವವರು, ಸಮಾಜವಾದಿಗಳಲ್ಲಿ ಎಂದೂ ಹೊಂದಾಣಿಕೆ ಮಾಡಿಕೊಳ್ಳುವ ಸ್ವಭಾವವಿರಲಿಲ್ಲ. ಅದು electoral politics ಇರಬಹುದು, ಚುನಾವಣಾ ರಾಜಕೀಯದಲ್ಲಿರುಬಹುದು ಅಥವಾ ಜನಪರ ಸಂಘಟನೆ, ಜನಪರ ಹೋರಾಟ, ಚಳುವಳಿಗಳಲ್ಲಿರುವ ಸಮಾಜವಾದಿಗಳನ್ನೂ ಕೂಡ ನಮ್ಮ ರಾಜ್ಯದಲ್ಲಿ ಕಾಣುತ್ತೇವೆ. ಅದು ರಾಷ್ಟ್ರ ಮಟ್ಟ ಇರಬಹುದು ಅಥವಾ ರಾಜ್ಯ ಮಟ್ಟ ಇರಬಹುದು. ಆದರೆ, ಆ ವೈಯಕ್ತಿಕ ಪ್ರತಿಷ್ಠೆ, ಅಹಂನಿಂದ ದೂರವಿದ್ದವರು ಶ್ರೀ ಎಂ.ಪಿ. ಪ್ರಕಾಶ್ ರವರು. ಅವರೊಬ್ಬ ಸಾತ್ವಿಕ ಸಮಾಜವಾದಿಗಳಾಗಿದ್ದರು.

ಈ ವಿಧಾನಸಭೆಯಲ್ಲಿ ನೋಡಿದಾಗ 1972ರಲ್ಲಿ ವಿಧಾನಸಭೆ ಚುನಾವಣೆಯಾದ ನಂತರ ಬಹುಶಃ ಸಂಯುಕ್ತ ಸೋಶಿಯಲಿಸ್ಟ್ ಪಾರ್ಟಿಯಿಂದ 3 ಜನ ಆಯ್ಕೆಯಾಗಿ ಈ ಸದನದಲ್ಲಿದ್ದರು. ಆ 3 ಜನರಲ್ಲಿ ಯಾವು ಅವರ ಶಾಸಕಾಂಗ ಪಕ್ಷದ ನಾಯಕರಾಗಬೇಕೆಂಬ ಪ್ರಶ್ನೆ ಬಂತು. ಕಾಗೋಡು ತಿಮ್ಮಪ್ಪ, ಬಂಗಾರಪ್ಪ, ಕೋಣಂದೂರು ಲಿಂಗಪ್ಪನವರಲ್ಲಿ ಎರಡು ಪಾರ್ಟಿಯಾಯಿತು. ಅವರಲ್ಲಿ ಬಂಗಾರಪ್ಪನವರು 1967ರಲ್ಲಿ ನಾನು ಆಯ್ಕೆಯಾಗಿದ್ದವನು, ನಾನು ಶಾಸಕಾಂಗ ಪಕ್ಷದ ನಾಯಕನಾಗಬೇಕೆಂದು ಹೇಳಿದರು. ಆದರೆ, ಅವರ ಶಾಸಕಾಂಗದ ಪಕ್ಷದ ನಾಯಕನಾಗಿ ಕಾಗೋಡು ತಿಮ್ಮಪ್ಪ ಆಯ್ಕೆಯಾಗಬೇಕೆಂದಿತ್ತು. ನನಗಿಂತ ಅವರು ಚಿಕ್ಕವರು, ನಾನು ಆಯ್ಕೆಯಾದ ಮೇಲೆ ಆಯ್ಕೆಯಾದಂಥ ತಿಮ್ಮಪ್ಪನವರು ಶಾಸಕಾಂಗ ಪಕ್ಷದ ನಾಯಕ ಆಗುತ್ತಾರೆಂದಾಗ ಪಾರ್ಟಿಯೇ ಇಬ್ಭಾಗವಾಯಿತು. ಅಥವಾ ನಾವು ಹೊರಗಡೆ ನೋಡಿದಾಗ ಜನಪರ ಸಂಘಟನೆ ಚಳುವಳಿಗಳಲ್ಲಿ ಸಮಾಜವಾದಿಗಳಲ್ಲಿ ಯಾವ ರೀತಿ ವೈಯಕ್ತಿಕ ಪ್ರತಿಷ್ಠೆಯಿತ್ತು ಎಂದರೆ, ಆ ಸಮಾಜವಾದಿ ಯುವಜನ ಸಭಾ ಏನಿತ್ತು, ಡಾ:ರಾಮಮನೋಹರ ಲೋಹಿಯಾರವರ ಚಿಂತನೆಗಳು, ಹೋರಾಟ ಜನಪರ ಸಂಘಟನೆಗಳ ಹಿನ್ನೆಲೆಯಲ್ಲಿ ಬಂದಂಥವರೂ ಕೂಡ ಇಲ್ಲಿ ಒಂದಾಗಲಿಲ್ಲ. ಲಂಕೇಶ್ ಇರಬಹುದು, ಪ್ರೊ. ನಂಜುಂಡಸ್ವಾಮಿ ಇರಬಹುದು, ಪೂರ್ಣಚಂದ್ರ ತೇಜಸ್ವಿ ಇರಬಹುದು, ನಾನು ಈ ಹಿನ್ನೆಲೆಯಲ್ಲಿ ಹೇಳುತ್ತಿದ್ದೇನೆ. ಎಲ್ಲರಿಗಿಂತ ಎಂ.ಪಿ. ಪ್ರಕಾಶ್‌ರವರು ಬಹಳ ಸಾತ್ವಿಕ ವ್ಯಕ್ತಿಯಾಗಿದ್ದರು. ಸಿದ್ದರಾಮಯ್ಯನವರು ಹೇಳಿದ ಹಾಗೆ, ಅವರು ಎಲ್ಲರ ಜೊತೆಯಲ್ಲೂ ಕೂಡ ಹೊಂದಾಣಿಕೆ ಮಾಡಿಕೊಂಡು ಹೋಗುತ್ತಿದ್ದರು. ಬಹಳ ಸುಸಂಸ್ಕೃತ, ಅಹಂ ಇಲ್ಲದ, ಒಬ್ಬ ಅಜಾತಶತ್ರು ಶ್ರೇಷ್ಠ ರಾಜಕಾರಣಿ ಎಂದರೆ ಅವರು ಎಂ.ಪಿ. ಪ್ರಕಾಶ್‌ರವರು ಎನ್ನುವುದನ್ನು ತಾವು ಮಾತನಾಡುವ ಸಂದರ್ಭದಲ್ಲಿ ತಿಳಿಸಿ ಹೇಳಿದ್ದೀರಿ. ಈ ಸದನದಲ್ಲಿ ಅವರು 4 ಬಾರಿ ಆಯ್ಕೆಯಾಗಿದ್ದರು. ಒಂದು ಸಲ ವಿಧಾನಪರಿಷತ್ ಸದಸ್ಯರಾಗಿದ್ದರು. 6 ಜನ ಮುಖ್ಯಮಂತ್ರಿಗಳ ಸಂಪುಟದಲ್ಲಿ ಸಚಿವರಾಗಿದ್ದರು. ಸ್ವಲ್ಪ ಸಮಯ ಉಪಮುಖ್ಯಮಂತ್ರಿಯಾಗಿದ್ದರು. ಎಂ.ಪಿ. ಪ್ರಕಾಶ್‌ರವರು ಒಬ್ಬ ವೈಚಾರಿಕ ಪ್ರಜ್ಞೆಯ ರಾಜಕಾರಣಿಯಾಗಿದ್ದರು ಎನ್ನುವುದನ್ನು ನಾನು ಈ ಸದನದಲ್ಲಿ ಜ್ಞಾಪಿಸ ಬಯಸುತ್ತೇನೆ. ಆ ವೈಚಾರಿಕ ಪ್ರಜ್ಞೆಯ ಹಿನ್ನೆಲೆಯಲ್ಲಿ ಚಿಂತನೆಗಳನ್ನು ಮಾಡುತ್ತಿರುವಂಥ ಸಮಾಜಮುಖಿಯಾದ ಒಬ್ಬ ಸಮಾಜವಾದಿ ಚಿಂತಕರಾಗಿದ್ದವರು. ವೈಚಾರಿಕತೆ ಎಂದು ಏಕೆ ಹೇಳುತ್ತೇನೆಂದರೆ, ಇವತ್ತು

ಕರ್ನಾಟಕದಲ್ಲಿ ನಾವೆಲ್ಲರೂ ತಲೆತಗ್ಗಿಸುವ ರೀತಿಯಲ್ಲಿ ನಮ್ಮ ರಾಜಕಾರಣಿಗಳ ಹಾವ ಭಾವ ಬಹುಶಃ ಆ ರೀತಿಯಾದಂಥ ಚಿಂತನೆಗಳು ಇವತ್ತು ಬಂದಿವೆ. ಹೋಮ ಹವನ, ಯಜ್ಞ, ಮಾಟಮಂತ್ರ, ಈ ವಾಮಾಚಾರ ಎಲ್ಲಿಗೆ ಬಂದಿದೆ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಅದನ್ನು ನಾನು ಬಿಡಿಸಿ ಹೇಳುವುದಿಲ್ಲ. ಬಹುಳ ಅಸಹ್ಯಕರವಾದ ರಾಜಕೀಯ ಬೆಳವಣಿಗೆಗಳು, ಚಿಂತನೆಗಳು ನಮ್ಮಲ್ಲಿ ಬಂದಿರುವುದು ನಮ್ಮೆಲ್ಲರ ದೌರ್ಬಲ್ಯವಾಗಿದೆ. ಈ ಹಿನ್ನೆಲೆಯಲ್ಲಿ ಈ ಸದನದಲ್ಲಿ ನಾವು ಜ್ಞಾಪಿಸಿಕೊಳ್ಳಬೇಕಾಗಿರುವಂಥದ್ದು, ಆ ವೈಚಾರಿಕ ಪ್ರಜ್ಞೆ, ವೈಚಾರಿಕ ಚಿಂತನೆಯ ರಾಜಕಾರಣಿ ಪ್ರಕಾಶ್‌ರವರು ಆಗಿದ್ದರು. ಹಾಗಾಗಿ ಅವರೊಬ್ಬ ಕೇವಲ ಒಬ್ಬ ರಾಜಕಾರಣಿ, ಓಟಿನ ಚಿಂತನೆಗಳಿಂದ, ಅಧಿಕಾರ ದಾಹದಿಂದ ಬಂದವರಲ್ಲ. ಮೂಲತಃ ಸಮಾಜವಾದಿಯಾಗಿ ಜನಪರ ಚಿಂತನೆ, ಸಂಘಟನೆ ಜನಪರ ಹೋರಾಟಗಳ ಹಿನ್ನೆಲೆಯಲ್ಲಿ ಬಂದಂಥ ಒಬ್ಬ ರಾಜಕಾರಣಿಯಾದದ್ದರಿಂದ ಇವತ್ತು ನಾವು ಅವರನ್ನು ಸದಾ ನೆನಪಿಸಿಕೊಳ್ಳುವ ರೀತಿಯಲ್ಲಿ ಇದ್ದೇವೆ.

1.00 ಪಿಎಂ

ಅವರ ಮನಸಿಗೆ ತುಂಬಾ ನೋವಾಗಿರತಕ್ಕಂಥದ್ದು, ಇದಕ್ಕಿಂತ ಹಿಂದೆ ಇದ್ದಂಥ ವಿಧಾನ ಸಭೆಯ ಬೆಳವಣಿಗೆಯನ್ನು ತಾವೆಲ್ಲರೂ ಕೂಡ ನೋಡಿರತಕ್ಕಂಥದ್ದು. ಮಾನ್ಯ ಮುಖ್ಯಮಂತ್ರಿಗಳು ಕೂಡ ನೋಡಿ ಬಹಳ ನೊಂದು ಹೇಳಿದರು. ಅವರು ಇದ್ದಂಥ ಪಕ್ಷದಲ್ಲಿ ಅವರಿಗೆ ಆದಂಥ ಮಾನಸಿಕ ನೋವು ಇದೆಯಲ್ಲಾ ಬಹುಶಃ ನಾವು ಅದನ್ನು ಅರ್ಥ ಮಾಡಿಕೊಳ್ಳಬೇಕು. ಅವರು ಇದ್ದಂಥ ಪಕ್ಷದಲ್ಲಿ ಆ ಪಕ್ಷದ ಒಬ್ಬ ರಾಷ್ಟ್ರೀಯ ಅಧ್ಯಕ್ಷರೇ ರಾಜ್ಯಪಾಲರಿಗೆ ಪತ್ರ ಬರೆದು ಎಂ.ಪಿ. ಪ್ರಕಾಶ್‌ರವರು ನಮ್ಮ ಪಕ್ಷದ ಶಾಸಕಾಂಗ ಪಕ್ಷದ ನಾಯಕರಾಗಿದ್ದಾರೆನ್ನುವ ಪತ್ರವನ್ನು ಒಂದು ಕಡೆ ಬರೆಯುತ್ತಾರೆ. ಮತ್ತೊಂದು ಕಡೆ ಮತ್ತೊಬ್ಬರನ್ನು ಶಾಸಕಾಂಗ ಪಕ್ಷದ ನಾಯಕನೆಂದು ಹೇಳುತ್ತಾರೆ. ಅವರಿಗೆ ಕೊನೆಗೆ ಆದಂಥ ಮಾನಸಿಕ ನೋವು ಇದೆಯಲ್ಲಾ ಬಹುಶಃ ಸದನದಲ್ಲಿ ಅವರಿಗೆ ಆಗಿರತಕ್ಕಂಥ ನೋವನ್ನು ತೋಡಿಕೊಂಡಿದ್ದು ಇದೆಯಲ್ಲಾ ಆ ನೋವು ಯಾವ ರಾಜಕಾರಣಿಗೂ ಕೂಡ, ಅದರಲ್ಲೂ ಪ್ರಕಾಶ್‌ರಂಥ ಒಬ್ಬ ಸುಸಂಸ್ಕೃತ, ಸಾತ್ವಿಕ ರಾಜಕಾರಣಿಗೆ ಆ ನೋವು ಆಗಬಾರದಾಗಿತ್ತು ಎನ್ನುವುದು ಬಹುಶಃ ನನ್ನ ಮನಸ್ಸಿನಲ್ಲಿರುವ ಭಾವನೆ ಕೂಡ. ಹೀಗಾಗಿ ಕೊನೆಯಲ್ಲಿ ಎಲ್ಲರ ನೆನಪಿನಲ್ಲಿ ಉಳಿಯತಕ್ಕಂಥದ್ದು, ಅವರು

ಸಮಾಜವಾದಿ ಚಿಂತಕರಾಗಿ, ಲೋಹಿಯಾ ಸಮಾಜವಾದಿ ಚಿಂತಕರಾಗಿ ಬಹುಶಃ ಅವರ ಕನಸು ಏನಿತ್ತು "ಸರ್ವರಿಗೂ ಸಮಪಾಲು ಮತ್ತು ಸರ್ವರಿಗೂ ಸಮಬಾಳು" ಎನ್ನತಕ್ಕಂಥದ್ದನ್ನು ಕೂಡ ಅವರು ಪ್ರತಿಪಾದಿಸಿ ಯೋಚಿಸುತ್ತಿದ್ದರು. ಬಹುಶಃ ಆ ದಿಕ್ಕಿನಲ್ಲಿ ಇವತ್ತು ಆಡಳಿತ ನಡೆಸತಕ್ಕಂಥವರೂ ಕೂಡ ಯೋಚನೆ ಮಾಡಿದರೆ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎನ್ನತಕ್ಕಂಥ ರೀತಿಯಲ್ಲಿ ಕಾರ್ಯ ಪ್ರವೃತ್ತರಾಗಲು ಸಾಧ್ಯವಿದೆ. ಬಹುಶಃ ನಾವು ಆ ದಿಕ್ಕಿನಲ್ಲಿ ಒಂದು ಪ್ರಮಾಣಿಕವಾದಂಥ ಪ್ರಯತ್ನ ಕೂಡ ಮಾಡಿದರೆ ನಿಜವಾದ ರೀತಿಯಲ್ಲಿ ಕೂಡ ಎಂ.ಪಿ. ಪ್ರಕಾಶ್‌ರವರಿಗೆ ನಾವು ಶ್ರದ್ಧಾಂಜಲಿ ಅರ್ಪಿಸಿದ ಹಾಗೆ ಆಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಇದರ ಜೊತೆಯಲ್ಲಿ ಇತರ ಗಣ್ಯರೂ ಕೂಡ ಅದರಲ್ಲೂ ತಿಪ್ಪಯ್ಯನವರು ಒಂದು ಬಾರಿ ಶಾಸಕರಾಗಿದ್ದಂಥವರು, ಮೀಸಲು ಕ್ಷೇತ್ರದಿಂದ ಬಂದಂತವರು, ದಲಿತ ವರ್ಗದ ಹಿನ್ನೆಲೆಯಿಂದ ಬಂದಂತವರು, ಶೋಷಿತ ವರ್ಗದವರ ನೋವು ನಲಿವುಗಳ ಪ್ರತಿನಿಧಿಯಾಗಿ ಈ ಸದನದಲ್ಲಿ ಇದ್ದಂಥವರು. ಶ್ರೀಯುತರ ಆಕಾಲಿಕ ಮರಣದಿಂದಾಗಿ ಅವರ ಆತ್ಮಕ್ಕೆ ನಾನು ಈ ಸಂದರ್ಭದಲ್ಲಿ ಶ್ರದ್ಧಾಂಜಲಿ ಅರ್ಪಿಸುತ್ತೇನೆ. ಉಳಿದವರೂ ಕೂಡ ಅದರಲ್ಲೂ ಡಾ: ಭೀಮಸೇನ್ ಜೋಷಿಯವರು ಕೂಡ ನಮ್ಮ ನಾಡಿನ ಸಾಂಸ್ಕೃತಿಕ ರಾಯಬಾರಿಗಳಾಗಿ They are all image builders of the nation. ಅವರು ರಾಜ್ಯ ಹಾಗೂ ರಾಷ್ಟ್ರಮಟ್ಟದ ವರ್ಚಸ್ಸನ್ನು ವೃದ್ಧಿಸತಕ್ಕಂಥದ್ದು, ಒಂದು ಸಾಂಸ್ಕೃತಿಕ ರಾಯಭಾರಿಗಳಾಗಿದ್ದಂಥ ಭೀಮಸೇನ್ ಜೋಷಿಯವರ ಅಗಲಿಕೆಯಿಂದಕೂಡ ನಮಗೆ ತುಂಬಾ ನೋವಾಗಿದೆ. ಒಬ್ಬ ಶ್ರೇಷ್ಠ ಸಾಂಸ್ಕೃತಿಕ ರಾಯಬಾರಿಯನ್ನು ಕಳೆದುಕೊಂಡಂತಾಗಿದೆಯೆಂದು ಹೇಳಿ, ಅದೇ ರೀತಿಯಾಗಿ ಇತರರೂ ಕೂಡ ಈ ಸದನದಲ್ಲಿ ತಾವೇನು ಈ ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ ಅದರಲ್ಲಿ ಭಾಗಿಯಾಗಿ ನಾನು ಈ ನಾಡಿನ ಅಗಲಿದ ಗಣ್ಯರಿಗೆ ಕೂಡ ಭಾವಪೂರ್ವಕವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಇವತ್ತು ತಾವೇನು ಸಂತಾಪ ಸೂಚನೆಯನ್ನು ಇಲ್ಲಿ ಮಂಡನೆ ಮಾಡಿದ್ದೀರಿ ಆ ಕುರಿತು ಸನ್ಮಾನ್ಯ ಮುಖ್ಯಮಂತ್ರಿಗಳು, ಪ್ರತಿಪಕ್ಷದ ನಾಯಕರು, ಅನೇಕರು ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ನಾನೂ ಕೂಡ

ಈ ಸಂತಾಪ ಸೂಚನೆಗೆ ಬೆಂಬಲ ಸೂಚಿಸುತ್ತಾ ನನ್ನ ಕೆಲವು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಇವತ್ತು ಎಂ.ಪಿ. ಪ್ರಕಾಶ್‌ರವರ ಬಗ್ಗೆ ಅನೇಕರು ತಮ್ಮ ತಮ್ಮ ಸ್ನೇಹದ ಅನೇಕ ಮಾತುಗಳನ್ನು ಹೇಳಿದ್ದಾರೆ. ಎಂ.ಪಿ. ಪ್ರಕಾಶ್‌ರವರ ಬಗ್ಗೆ ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಮಾತನಾಡುತ್ತಾ, ಅವರು ಬಹಳ ಅಪರೂಪದ ವ್ಯಕ್ತಿ, ಸಮಾಜವಾದದಲ್ಲೂ ಕೂಡ ಯಾವ ರೀತಿ ವಿಶಿಷ್ಟವಾದ ಸಮಾಜವಾದಿ ಆಗಿದ್ದರು ಎನ್ನುವ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಪ್ರಾಯಶಃ ಅವರ ಬಗ್ಗೆ ಇವತ್ತು ಮಾತನಾಡುತ್ತಿರುವಾಗ ಇಂದಿನ ರಾಜಕಾರಣದ ಬಗ್ಗೆಗಿನ ಒಂದು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಕಾಲ ಬಂದಿದೆ ಎನ್ನುವುದು ನನ್ನ ಅನಿಸಿಕೆ. ಅನೇಕ ಮಾತುಗಳನ್ನು ಇಲ್ಲಿ ಹೇಳಿದ್ದಾರೆ. ಸಂಸದೀಯ ಪಟು ಎನ್ನುವ ಒಂದು ಮಾತನ್ನು ನಾವು ಎಲ್ಲರೂ ಇಲ್ಲಿ ಹೇಳಿದ್ದೇವೆ. ಆದರೆ, ಇವತ್ತು ಸಂಸದೀಯ ಪಟು ಎಂದರೆ ಏನು ಎನ್ನುವುದೇ ಬೇರೆ ರೀತಿಯಲ್ಲಿ ವಿಶ್ಲೇಷಣೆ ಮಾಡುವ ಸ್ಥಿತಿಗೆ ಬರುತ್ತಿದ್ದೇವೆ. ಸಂಸದೀಯ ಪಟು ಎಂದರೆ ಗರಡಿಪಟುನಾ ಎನ್ನುವ ಸ್ಥಿತಿಗೆ ನಾವು ಇವತ್ತು ಬರುತ್ತಿದ್ದೇನೆ. ವಿಶೇಷವಾಗಿ ಎಂ.ಪಿ. ಪ್ರಕಾಶ್‌ರವರ ಬಗ್ಗೆ ಅನೇಕ ವಿಶ್ಲೇಷಣೆಗಳನ್ನು ಉಪಯೋಗಿಸುತ್ತಾ ಹೋಗಬಹುದು. ಸವ್ಯಸಾಚಿ ಎಂದು ನಾವು ಸಾಮಾನ್ಯವಾಗಿ ಹೇಳುತ್ತೇವೆ. ಅವರು ಈಗಾಗಲೇ ಸಿದ್ದರಾಮಯ್ಯನವರು ಹೇಳಿದ ಹಾಗೆ, ಯಾವದೇ ವಿಚಾರದ ಬಗ್ಗೆ ಅಧಿಕೃತವಾಗಿ ಮಾತನಾಡಬಹುದಾದಷ್ಟು ಪ್ರಭುತ್ವವನ್ನು ಸಂಪಾದಿಸಿದ್ದರು. ಮಾನ್ಯ ಸಿದ್ದರಾಮಯ್ಯನವರು ಬಹಳ ಚೆನ್ನಾಗಿ ಹೇಳಿದರು. ಸುಬ್ಬುರಾಯನಕೆರೆ ಭಾಷಣ ಅವರು ಯಾವತ್ತೂ ಮಾಡುತ್ತಿರಲಿಲ್ಲ. ಅವರ ಮಾತನ್ನು ವಿರೋಧಿಗಳು ಒಪ್ಪದಿದ್ದರೂ ಕೂಡ ಆಲಿಸುವ ರೀತಿಯಲ್ಲಿ ಅವರು ಮಾತನಾಡುತ್ತಿದ್ದರು. ಒಂದು ರೀತಿ ಒಪ್ಪಿಸುವ ಪ್ರಯತ್ನ ಅವರು ಮಾಡುತ್ತಿದ್ದರು. ಎಂ.ಪಿ. ಪ್ರಕಾಶ್‌ರವರ ಬಗ್ಗೆ ಎಲ್ಲರೂ ಮಾತನಾಡುವಾಗ ನನಗೆ ಅನ್ನಿಸಿರುವುದು, plato ಕಾಲದ, ಪಾಲಿಟಿಕ್ಸ್ ಬಗ್ಗೆ, ಪಾಲಿಟಿಕ್ಸ್‌ಗೆ ಎಂಥ ವ್ಯಕ್ತಿಗಳು ಬರಬೇಕು ಎನ್ನುವುದರ ಬಗ್ಗೆ ಒಂದು ಚಿಂತನೆಯಿತ್ತು. ಆ ಚಿಂತನೆಗೆ ಸೂಕ್ತವಾದ ವ್ಯಕ್ತಿ ಎಂ.ಪಿ. ಪ್ರಕಾಶ್ ಎಂದು ನನಗೆ ಅನಿಸುತ್ತದೆ. ಆ ವೈಚಾರಿಕತೆ ಬಗ್ಗೆ ತಾವು ಹೇಳಿದಿರಿ. ಎಲ್ಲಾದರ ಬಗ್ಗೆ ಮಾಹಿತಿ ತೆಗೆದುಕೊಂಡು ಮಾತನಾಡುತ್ತಿದ್ದುದ್ದು, ಮತ್ತೆ ಸ್ನೇಹ ಜೀವಿ, ಸಮಾಜದ ಬಗ್ಗೆ ಕಳಕಳಿ, ಎಲ್ಲವನ್ನೂ ಸಮ್ಮಿಳನಗೊಳಿಸಿದ ಒಬ್ಬ ವ್ಯಕ್ತಿ ಎಂ.ಪಿ. ಪ್ರಕಾಶ್ ಆಗಿದ್ದರು. ಅಜಾತಶತ್ರು ಎನ್ನುವ ಮಾತನ್ನು ಕೂಡ ನಾವು ಕೇಳುತ್ತಿದ್ದೇವೆ. ಇವತ್ತು

ಬಹಲಷ್ಟು ಕಡೆ ನೋಡಿದರೆ ರಾಜಕಾರಣಿಗಳು ಅಜಾತಮಿತ್ರರಾಗುತ್ತಿದ್ದಾರೆಯೇ ಎಂದು ಅನ್ನಿಸುತ್ತದೆ. ಅಜಾತಶತ್ರು ಬಹಳ ಕಡಿಮೆ, ಅಜಾತಮಿತ್ರರು ಬಹಳ ಜನ ಆಗುತ್ತಿದ್ದಾರೆ ಎನ್ನುವುದು ಅನಿಸಿಕೆ. ಏಕೆಂದರೆ, ರಾಜಕಾರಣದ ಬಗ್ಗೆ ಮತ್ತು ರಾಜಕಾರಣಿಗಳ ಬಗ್ಗೆ ಸಮಾಜ ನೋಡುತ್ತಿರುವುದು ಮತ್ತು ಮಾಧ್ಯಮಗಳು ಕೂಡ ಬಿಂಬಿಸುತ್ತಿರುವುದು, ಯಾರಿಗೂ ಗೌರವ ತರುವ ರೀತಿಯಲ್ಲಿ ನಾವು ನಡೆದುಕೊಳ್ಳುತ್ತಿಲ್ಲ. ಎಂ.ಪಿ. ಪ್ರಕಾಶ್‌ರವರ ಈ ಸದನದ ನಡವಳಿಕೆಯನ್ನು ನೋಡಿದಾಗ ನನಗೆ ಇನ್ನೊಬ್ಬ ವ್ಯಕ್ತಿ ಈಗ ಜ್ಞಾಪಕ ಬರುವುದು, ಕೇಂದ್ರದಲ್ಲಿ ಸಚಿವರಾಗಿರುವ ಪ್ರಣಬ್ ಮುಖರ್ಜಿಯವರು. ವಿರೋಧಿ ಪಕ್ಷಗಳಿಂದಲೂ ಕೂಡ ಮನ್ನಣೆಗಳಿಸಿ ಒಂದು ಹಂತದಲ್ಲಿ ಐವತ್ತೈದು ಗ್ರೂಪ್ ಆಫ್ ಮಿನಿಸ್ಟರ್ಸ್‌ಗೆ ಛೇರ್ಮನ್ ಆಗಿದ್ದರು. ಅಷ್ಟು ಪ್ರತಿಭೆ, ಅಷ್ಟು ಗೌರವ, ಆ ರೀತಿ ಕರ್ನಾಟಕ ಸದನದ ಒಬ್ಬ ಪ್ರಣಬ್ ಮುಖರ್ಜಿಯಾಗಿ ಅವರು ನಡೆದುಕೊಂಡರು ಎಂದು ಹೇಳುವುದಕ್ಕೆ ನಾನು ನನ್ನ ಮನಸ್ಸಿನಲ್ಲಿ ಬಂದಿರುವ ಭಾವನೆಯನ್ನು ಇಲ್ಲಿ ವ್ಯಕ್ತಪಡಿಸುತ್ತೇನೆ. ಪ್ರಾಯಶಃ ಎಂ.ಪಿ. ಪ್ರಕಾಶ್‌ರವರು ರಾಜ್ಯದ ಮುಖ್ಯಮಂತ್ರಿಯಾಗುವುದಕ್ಕೆ ಎಲ್ಲಾ ಅರ್ಹತೆ ಇದ್ದ ಒಬ್ಬ ವ್ಯಕ್ತಿ. The one right man who unfortunately did not become the Chief Minsiter of this State. ಎಲ್ಲಾ ಅರ್ಹತೆಯಿದ್ದು ಆ ಒಂದು ಸ್ಥಾನದಿಂದ ಮಾರ್ಗದರ್ಶನ ಮಾಡುವಂಥ ಸಂಗತಿಯಿತ್ತು. ಕೊನೆಯ ದಿನಗಳಲ್ಲಿ ಅವರಿಗೆ ಏನಾಯಿತು ಎಂಬುದನ್ನು ತಾವು ಸ್ಪಷ್ಟವಾದ ಮಾತುಗಳಲ್ಲಿ ಹೇಳಿದಿರಿ. ಎಂ.ಪಿ. ಪ್ರಕಾಶ್ ರವರಂಥವರು ಇದ್ದರು ಅಂಥ ಹೇಳಿದರೆ ಇನ್ನು ಐದು-ಹತ್ತು ವರ್ಷಗಳಲ್ಲಿ ಜನ ನಂಬುತ್ತಾರೆಯೇ? ಈ ರೀತಿಯಾದ ಒಬ್ಬ ವ್ಯಕ್ತಿ ರಾಜಕಾರಣದಲ್ಲಿ ಮೇಧಾವಿ ಎಲ್ಲರನ್ನೂ ಗೌರವದಿಂದ ಕಾಣುತ್ತಿದ್ದ ವ್ಯಕ್ತಿ ಇದ್ದರೆ ಎಂದು ಕೇಳುವ ಪರಿಸ್ಥಿತಿ ಬಂದರೂ ಆಶ್ಚರ್ಯಪಡಬೇಕಾಗಿಲ್ಲ. ನಾನು ಈಗಾಗಲೇ ಹೇಳಿದ ಹಾಗೆ, ಇತ್ತೀಚೆಗೆ ಡಾ: ಯು.ಆರ್. ಅನಂತಮೂರ್ತಿಯವರ ಲೇಖನವನ್ನು ಓದುತ್ತಿದ್ದೆ. ಲೇಖನದಲ್ಲಿ ಅವರು, ಇಂದಿನ ರಾಜಕಾರಣದಲ್ಲಿ ಅಭಿಮಾನಿಗಳು ಕಡಿಮೆ ಯಾಗುತ್ತಿದ್ದಾರೆ ಅನುಯಾಯಿಗಳು ಜಾಸ್ತಿಯಾಗುತ್ತಿದ್ದಾರೆಂದು ಬರೆದಿದ್ದಾರೆ. ಎಂ.ಪಿ. ಪ್ರಕಾಶ್‌ರವರಿಗೆ ಇದ್ದ ಒಂದು ಸಮಸ್ಯೆ ಏನೆಂದರೆ ಅವರಿಗೆ ಅನುಯಾಯಿಗಳು ಇರಲಿಲ್ಲ. ಅಭಿಮಾನಿಗಳು ಬಹಳಷ್ಟು ಜನ ಇದ್ದರು. ನೀವು ಒಂದು ಮಾತು ಹೇಳಿದಿರಿ. 'Tell me about your friends, I will tell you who you are and what you are' ಅದೇ ರೀತಿ ಇನ್ನೊಂದು ಮಾತು, ದೇವರು

ಯಾರನ್ನಾದರೂ ಹಾಳು ಮಾಡಬೇಕೆಂದು ತೀರ್ಮಾನ ಮಾಡಿದರೆ ಇನ್ನೇನು ಮಾಡುವುದಿಲ್ಲವಂತೆ, ಎಂಟು ಹತ್ತು ಜನ ಅನುಯಾಯಿಗಳನ್ನು ಸೃಷ್ಟಿ ಮಾಡುತ್ತಾನಂತೆ. They will do the needful ಅಂತ. ಈ ಹಂತದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಅಭಿಮಾನಿಗಳನ್ನು ಇಟ್ಟುಕೊಂಡು ಗೌರವವನ್ನು ಸಂಪಾದಿಸಿದ್ದ ಎಂ.ಪಿ. ಪ್ರಕಾಶ್‌ರವರು ನಮ್ಮಿಂದ ದೂರವಾಗಿದ್ದಾರೆ. ಅನೇಕ ಗುಣಗಳನ್ನು ಅನೇಕ ರೀತಿಯ ಬಹುಮುಖ ವ್ಯಕ್ತಿತ್ವ ಎಂದೇನು ಹೇಳುತ್ತೇವೆ ಅದನ್ನು ಇಟ್ಟುಕೊಂಡಂಥ ಎಂ.ಪಿ. ಪ್ರಕಾಶ್‌ರವರು ನಮ್ಮಿಂದ ದೂರವಾಗಿದ್ದಾರೆ.

ಇನ್ನೂ ಸಂಗೀತ ಕ್ಷೇತ್ರದಲ್ಲಿ ಹಿಮಾಲಯ ಪರ್ವತವೆಂದು ನಾವು ಹೇಳಬಹುದಾದ ಹೆಸರೆಂದರೆ ಭೀಮಸೇನ್ ಜೋಷಿಯವರು. ಭೀಮಸೇನ್ ಜೋಷಿಯವರಿಗೆ ಕರ್ನಾಟಕ ರತ್ನ ಪ್ರಶಸ್ತಿ ಬಂದ ಸಂದರ್ಭದಲ್ಲಿ ರಾಜ್ಯದ ವತಿಯಿಂದ ಸನ್ಮಾನ ಮಾಡಬೇಕೆಂದು 2009ನೇ ಇಸವಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ನಮಗೆ ಆದೇಶಿಸಿ ಕಳುಹಿಸಿದರು. ನಾವು ಅಲ್ಲಿಗೆ ಹೋಗಿದ್ದಾಗ ಭೀಮಸೇನ್ ಜೋಷಿಯವರು ಮಾತನಾಡುವ ಪರಿಸ್ಥಿತಿಯಲ್ಲಿರಲಿಲ್ಲ. ಅವರಿಗೆ ಗೌರವ ಸಮರ್ಪಿಸಿ ಬಂದ ಒಂದು ಭಾವ ನನ್ನಲಿದೆ. ಭೀಮಸೇನ್ ಜೋಷಿಯವರು ಒಬ್ಬ ನಿಜವಾದ ಸಾಧಕ. ಗದಗಿನ ರೋಣ ಜಿಲ್ಲೆಯ ಒಬ್ಬ ಹುಡುಗ ಇಡೀ ರಾಷ್ಟ್ರದಲ್ಲೇ ಸಂಗೀತ ಕ್ಷೇತ್ರದ ಸಾಮ್ರಾಟನಾಗಿ ಸಾಧನೆಗೈದಿರುವುದು ನಮ್ಮೆಲ್ಲರಿಗೂ ಕೂಡ ಒಂದು ಹೆಮ್ಮೆ ಹಾಗೂ ಗೌರವವನ್ನು ತರುತ್ತಿದೆ.

ಅಂಥ ಒಬ್ಬ ಪಂಡಿತ್ ಭೀಮ್‌ಸೇನ್ ಜೋಶಿರವರನ್ನು ಮತ್ತು ಶ್ರೀ ಎಂ.ಪಿ. ಪ್ರಕಾಶ್‌ರವರನ್ನು ಹಾಗೂ ಇನ್ನೂ ಹಲವಾರು ಮಹನೀಯರುಗಳನ್ನು ನಾವು ಕಳೆದುಕೊಂಡಿದ್ದೇವೆ. ಶಬರಿಮಲೆಯಲ್ಲಿ ಈ ರೀತಿಯಾದ ದುರಂತ ಪ್ರತಿ ವರ್ಷ ಏಕೆ ಆಗುತ್ತಿದೆ ಎಂದು ಮಾನ್ಯ ಸಿದ್ಧರಾಮಯ್ಯರವರು ಪ್ರಸ್ತಾಪ ಮಾಡಿದರು. ಸರ್ಕಾರದ ಕಡೆಯಿಂದ ನಮ್ಮ ಸಚಿವರಾಗಿರುವ ಶೋಭಾ ಕರಂದ್ಲಾಜೆರವರು ಕೇರಳ ರಾಜ್ಯಕ್ಕೆ ಹೋಗಿ ದುರಂತದ ಸಮಯದಲ್ಲಿ ಅಲ್ಲಿನ ಪರಿಹಾರ ಕಾರ್ಯದಲ್ಲಿ ಕೂಡ ಪಾಲ್ಗೊಂಡಿದ್ದರು. ಮತ್ತೆ ಕೇರಳ ಸರ್ಕಾರ ಅಲ್ಲಿ ಇನ್ನು ಏನು ಮಾಡಬಹುದಾಗಿತ್ತೆಂಬುದರ ಬಗ್ಗೆ ಕೇರಳ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದಾರೆ. ತಾವು ಹೇಳಿದ ಹಾಗೆ, ದೇವರ ದರ್ಶನ ಪಡೆಯುವುದಕ್ಕೆ ಹೋದವರು, ದೇವರ ಸನ್ನಿಧಿಯನ್ನು ಸೇರುವುದು ಯಾರಿಗೂ ಕೂಡ ಒಂದು ಸಮಾಧಾನದ

ಸಂಗತಿಯಲ್ಲ. ಇವರೆಲ್ಲರಿಗೂ ಕೂಡ ತಮ್ಮ ಜೊತೆ ನನ್ನ ಶ್ರದ್ಧಾಂಜಲಿಯನ್ನರ್ಪಿಸುತ್ತಾ ನಾವು ಇವರ ಜೀವನದ ಒಳ್ಳೆಯ ಅಂಶಗಳನ್ನು ಮುಂದಿನ ದಿನಗಳಲ್ಲಿ ಅನುಕರಿಸಬೇಕಾದ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ಡಾ: ಎ.ಬಿ. ಮಾಲಕರೆಡ್ಡಿ (ಯಾದಗಿರಿ): ಮಾನ್ಯ ಅಧ್ಯಕ್ಷರೆ, ನಮ್ಮಿಂದ ಅಗಲಿ ಹೋದ ಅನೇಕ ಧುರೀಣರ ಬಗ್ಗೆ ತಾವು ಸಂತಾಪವನ್ನು ಸೂಚಿಸಿದ್ದೀರಿ. ಇವರುಗಳಲ್ಲಿ ರಾಜಕೀಯ ಕ್ಷೇತ್ರದಲ್ಲಿ ಬಹಳ ದೀರ್ಘ ಕಾಲ ಕೆಲಸ ಮಾಡಿದಂಥ ಶ್ರೀ ಎಂ.ಪಿ. ಪ್ರಕಾಶ್‌ರವರು, ಎಲ್ಲರ ಮೆಚ್ಚುಗೆಯನ್ನು ಪಡೆದು ಇವತ್ತು ನಮ್ಮೆಲ್ಲರನ್ನು ಬಿಟ್ಟು ಅಗಲಿದ್ದಾರೆ. ಕರ್ನಾಟಕ ರಾಜಕೀಯ ಕ್ಷೇತ್ರದಲ್ಲಿ ಅತ್ಯಂತ ಅಪರೂಪದ ವ್ಯಕ್ತಿಯೆಂದು ಎಲ್ಲರೂ ಬಣಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಹಾಗೂ ಮಾನ್ಯ ಸಿದ್ದರಾಮಯ್ಯರವರು ಶ್ರೀಯುತರ ಬಗ್ಗೆ ಬಹಳ ಉತ್ತಮವಾದಂಥ ಪದ ಪ್ರಯೋಗ ಮಾಡಿ ಅವರ ಗುಣಗಾನವನ್ನು ಮಾಡಿದ್ದಾರೆ. ಅವರ ಬಗ್ಗೆ ವಿಶೇಷವಾಗಿ ಹೇಳತಕ್ಕಂಥದ್ದು ಹೆಚ್ಚು ಇಲ್ಲದಿದ್ದರೂ ಕೂಡ ವೈಯಕ್ತಿಕವಾಗಿ ಅವರಿಗೆ ತುಂಬು ಹೃದಯದಿಂದ ಶ್ರದ್ಧಾಂಜಲಿ ಯನ್ನರ್ಪಿಸುತ್ತೇನೆ. ಅವರು ಬಳ್ಳಾರಿ ಕ್ಷೇತ್ರದಿಂದ ಬಂದವರಾಗಿದ್ದರೂ ಕೂಡ ಇಡೀ ಕರ್ನಾಟಕಕ್ಕೆ ಅವರು ಮಾಡಿದ ಸೇವೆ ಮತ್ತು ಕೆಲಸದಿಂದ ಬಹಳ ಪ್ರಸಿದ್ಧಿಯನ್ನು ಪಡೆದಿದ್ದರು. ಶ್ರೀಯುತರು ಬಳ್ಳಾರಿಯನ್ನು ಕೇವಲ ಕರ್ನಾಟಕ ಮಟ್ಟದಲ್ಲಿಯಲ್ಲದೇ ಇಡೀ ರಾಷ್ಟ್ರ ಮಟ್ಟದಲ್ಲಿ ಬಳ್ಳಾರಿಯ ಕೀರ್ತಿಯನ್ನು ಹೆಚ್ಚಿಸಿದರು ಎಂದು ಅವರ ನಿಧನದ ವಾರ್ತೆಯನ್ನು ಮಾನ್ಯ ಜನಾರ್ಧನರೆಡ್ಡಿಯವರು ಕೇಳಿದ ಮೇಲೆ ಅವರಿಗೆ ಸಂತಾಪ ಹೇಳುವ ಸಂದರ್ಭದಲ್ಲಿ ಈ ಒಂದು ಮಾತನ್ನು ಹೇಳಿದರು. ಇದಕ್ಕಿಂತ ಹೆಚ್ಚು ಪ್ರಶಂಸೆ ಬೇರೆ ಯಾವುದೂ ಕೂಡ ಇರಲಾರದೆಂದು ನಾನು ತಿಳಿದುಕೊಂಡಿದ್ದೇನೆ. ಅವರು ತಮ್ಮ ಗುಣ ವಿಶೇಷಗಳಿಂದ ಕರ್ನಾಟಕ ಸೀಮೆಯನ್ನು ದಾಟಿ ಇಡೀ ಭಾರತದ ದೇಶದಲ್ಲಿ ಪ್ರಜ್ವಲಿಸುತ್ತಾ ಒಳ್ಳೆಯ ವ್ಯಕ್ತಿತ್ವವನ್ನು ಹೊಂದಿದ್ದರು. ಹಾಗೆಯೇ ಅನೇಕ ಕ್ಷೇತ್ರಗಳಲ್ಲಿ ತಮ್ಮದೇ ಆದಂಥ ಛಾಪನ್ನು ಅವರು ಮೂಡಿಸಿದ್ದರು. ಅದರಲ್ಲಿಯೂ ವಿಶೇಷವಾಗಿ ರಾಜಕೀಯ ಕ್ಷೇತ್ರದಲ್ಲಿ ಇಷ್ಟೊಂದು ನಯ-ವಿನಯ, ವಿನಮ್ರ ಭಾವ ಹೊಂದಿದಂಥ ವ್ಯಕ್ತಿ ಇಷ್ಟೊಂದು ಎತ್ತರಕ್ಕೆ ಹೋಗಿರುವ ಬಗ್ಗೆ ಯಾವುದಾದರೊಂದು ಉದಾಹರಣೆ ಇದ್ದರೆ ಅದು ಶ್ರೀ ಎಂ.ಪಿ. ಪ್ರಕಾಶ್‌ರವರು ಎಂದು ಹೇಳಬಹುದಾಗಿದೆ. The meek shall

inherit the earth, ಎಂದು ಏಸುಕ್ರಿಸ್ತ ಹೇಳಿರುವಂಥ ಈ ಒಂದು ವಾಕ್ಯ ಬೈಬಲ್‌ನಲ್ಲಿ ಎರಡು-ಮೂರು ಸಾರಿ ಬರುತ್ತದೆ. ಅಂದರೆ ಈ ಜಗತ್ತಿನ ಕೊನೆಯ ವಾರಸುದಾರರು ಯಾರೆಂದರೆ, ಸಭ್ಯ ಜನರು, ಸುಸಂಸ್ಕೃತ ಜನರು ಮತ್ತು ಎಲ್ಲರೊಂದಿಗೆ ಸಹೋದರತ್ವ ಮತ್ತು ಮಿತ್ರತ್ವ ಭಾವನೆಯಿಂದ ನಡೆದುಕೊಂಡಂಥ ಜನರಿಗೆ ಜಗತ್ತಿನಲ್ಲಿ ಒಂದು ಶಾಶ್ವತವಾದ ಸ್ಥಾನ ಅವರಿಗೆ ಇರುತ್ತದೆಂದು ಬೈಬಲ್‌ನಲ್ಲಿ ಹೇಳಿದ್ದಾರೆ. ಇವತ್ತಿನವರೆಗೆ ಅನೇಕ ಸಾಮ್ರಾಜ್ಯಗಳ ಸಾಮ್ರಾಟರು ಬಂದು ದೇಶವನ್ನು ಆಳಿ ಹೋಗಿದ್ದಾರೆ. ಅದರೆ, ಅವರ ನೆನಪು ಇವತ್ತಿನ ದಿವಸ ಇಲ್ಲ. ಆದರೆ, ಶ್ರೀ ಎಂ.ಪಿ. ಪ್ರಕಾಶ್‌ರವರು ಸಾಧಿಸಿದ ಸಾಧನೆ ಮತ್ತು ಎಲ್ಲಕ್ಕಿಂಥ ಹೆಚ್ಚಾಗಿ ಸರಳ ಸಜ್ಜನಿಕೆ ಹಾಗೂ ಎಂಥೆಂಥ ಗಹನ ಪ್ರಸಂಗಳು ಮತ್ತು ರಾಜಕೀಯ ಬಿಕ್ಕಟ್ಟುಗಳು ಬಂದರೂ ಕೂಡ ತನ್ನ ಮಾನಸಿಕ ಸ್ಥಿಮತೆಯನ್ನು ಕಳೆದುಕೊಳ್ಳದೆ, ಎಲ್ಲರಿಗೂ ಬೇಕಾಗುವಂಥ ರೀತಿಯಲ್ಲಿ ಅಂದರೆ, ಎಲ್ಲರಿಗೂ ಒಪ್ಪಿಗೆ ಆಗುವಂಥ ಸೂತ್ರವನ್ನು ರಚಿಸುತ್ತಿದ್ದರು. ಶ್ರೀಯುತರು ಅನೇಕ ಜಟಿಲ ಸಮಸ್ಯೆಗಳನ್ನು ಬಿಡಿಸುವಂಥದ್ದರಲ್ಲಿ ಪರಿಣಿತರಾಗಿದ್ದರು. ಈ ಒಂದು ಉದ್ದೇಶಕ್ಕಾಗಿ ಮಾನ್ಯ ರಾಮಕೃಷ್ಣಹೆಗಡೆಯವರು ಯಾವಾಗಲೂ ಕೂಡ ಅವರನ್ನು ತಮ್ಮ ಸಮೀಪದಲ್ಲಿಯೇ ಇಟ್ಟುಕೊಂಡಿದ್ದರು. ಜನತಾ ದಳ ಪಾರ್ಟಿಯಲ್ಲಿ ಎರಡು ಸಲ ಅಧ್ಯಕ್ಷರಾಗಿದ್ದರು. ಒಂದು ಸಾರಿ ಜನತಾ ದಳದಲ್ಲಿ ಮತ್ತೊಂದು ಸಾರಿ ಜನತಾ ಪಕ್ಷದಲ್ಲಿದರು. ಅವರು ಎಲ್ಲ ಜನರ ವಿಶ್ವಾಸವನ್ನು ಗಳಿಸಿದ್ದರು. ಅಂಥ ವ್ಯಕ್ತಿ ಇವತ್ತಿನ ದಿವಸ ಕರ್ನಾಟಕಕ್ಕೆ ಬೇಕಾಗಿದೆ. ಅವರು ಬಹಳ ಸ್ಥಿತಪ್ರಜ್ಞರಾಗಿದ್ದರೆಂದು ನಾವು ಅನೇಕ ಸಲ ಹೇಳುತ್ತಿದ್ದೇವು. "ಸಿದ್ದಿ ಸಿದ್ಯೋ ಸಮೋಭೂತ್ವಾ ಸಮತ್ವಂ ಯೋಗಂ ಉಚ್ಚತೆ" ಎಂದು ಏನು ಹೇಳುತ್ತಾರೆ, ಆ ಪ್ರಕಾರ ಜಯ ಇರಲಿ ಅಥವಾ ಅಪಜಯ ಇರಲಿ, ಅವರ ಕೆಲಸ ಈಡೇರಲಿ ಅಥವಾ ಈಡೇರದೆ ಇರಲಿ, ಆದರೆ, ಅವರು ತಮ್ಮ ಸಮತ್ವ ಹಾಗೂ ಮಿತ್ರತ್ವ ಭಾವನೆಯನ್ನು ಎಂದು ಕಳೆದುಕೊಂಡವರಲ್ಲ. ದೇವ ಲೋಕ ಮಿಥ್ಯ ಲೋಕ ಎಂಬುದು ಕರ್ತಾರನ ಕಮ್ಮಟವಯ್ಯಾ ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವವರೆಂದು ಬಸವಣ್ಣರವರು ಹೇಳಿದ್ದಾರೆ. ನಾವುಗಳು ಇಲ್ಲಿಂದ ಹೋದ ಮೇಲೆ ಎಲ್ಲೆಲ್ಲಿ ಇರುತ್ತೇವೆಯೋ ಗೊತ್ತಿಲ್ಲ. ಆದರೆ, ಶ್ರೀ ಎಂ.ಪಿ. ಪ್ರಕಾಶ್‌ರವರ ಸ್ಥಾನ ಮಾತ್ರ ದೇವಲೋಕದಲ್ಲಿ ಶಾಶ್ವತವಾಗಿರುತ್ತದೆ. ಏಕೆಂದರೆ, ಅವರು ಇಲ್ಲಿ ಎಲ್ಲರಿಗೂ ಬೇಕಾಗಿದ್ದರು. ಅದಕ್ಕಾಗಿ ಭಗವಂತನಿಗೂ ಕೂಡ ಅವರು ಬೇಕಾಗಿದ್ದಾರೆ. ಶ್ರೀಯುತರು ತರುಣ ಶಾಸಕರಿಗೆ ಮತ್ತು ಇತರೇ

ರಾಜಕಾರಣಿಗಳಿಗೆ ಒಂದು ಒಳ್ಳೆಯ ಮಾಡಲ್ ಆಗಿದ್ದರೆಂದು ಮಾನ್ಯ ಸಿದ್ದರಾಮಯ್ಯರವರು ಮಾತನಾಡುವಂಥ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದರು. ಇವತ್ತಿನ ದಿವಸ ಅಂಥ ಒಬ್ಬ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಅವರ ಮಾರ್ಗದರ್ಶನ ನಮ್ಮೆಲ್ಲರಿಗೂ ಇನ್ನು ಬಹಳ ದಿವಸ ಬೇಕಾಗಿತ್ತು. ಶ್ರೀಯುತರಿಗೆ ಅಷ್ಟೇನು ವಯಸ್ಸಾಗಿರಲಿಲ್ಲ. ನನಗಿಂಥಲೂ 5 ವರ್ಷ ಚಿಕ್ಕವರಾಗಿದ್ದರು. ಅದರೂ ಕೂಡ The vicissitudes of time take their own toe so, shell to the decease. ಅಂಥ ಒಬ್ಬ ವ್ಯಕ್ತಿ ಇವತ್ತಿನ ದಿವಸ ನಮ್ಮೆಲ್ಲರಿಂದ ಅಗಲಿದ್ದಾರೆ. ಸಾಹಿತ್ಯ ಮತ್ತು ಕಲೆ ಅವರಿಗೆ ಎಲ್ಲದಕ್ಕಿಂತಲೂ ದೊಡ್ಡ ಸಾಮ್ರಾಜ್ಯವಾಗಿತ್ತು. ಇವತ್ತಿನ ದಿವಸ ಎಷ್ಟೋ ಬಹುತೇಕ ಸಾಮ್ರಾಜ್ಯಗಳು ಹಾಳಾಗಿ ಹೋಗಿವೆ. ಇವತ್ತಿನ ದಿವಸ ರೋಮ್ ಎಂಪೋರಿಯಂ ಮತ್ತು ಮೊಗಲ್ ಎಂಪೋರಿಯಂ ಕೂಡ ಬಿದ್ದು ಹೋಗಿದ್ದು, ಇದರ ಯಾವುದೇ ಒಂದು ಲವಶೇಷ ಕೂಡ ಇಲ್ಲ. ನಾನು ರೋಮ್‌ಗೆ ಹೋಗಿ ನೋಡಿದ್ದೇನೆ. Roman empire rome city the spiders wear viewly web there. ಇವತ್ತಿನ ದಿವಸ ಅಲ್ಲಿ ಯಾವುದೇ ಈ ರೀತಿಯ ಲಕ್ಷಣಗಳು ಕಾಣುತ್ತಿಲ್ಲ. ಆದರೆ, ಸಾಹಿತ್ಯಕ್ಕೆ ಮಾತ್ರ It is not the subject to decay and death ಸಾಹಿತ್ಯ ಸಾಮ್ರಾಜ್ಯ, ಕಲಾ ಸಾಮ್ರಾಜ್ಯ ಯಾವಗಲೂ ಕೂಡ ಶಾಶ್ವತವಾಗಿರುತ್ತವೆ. ಮತ್ತೆ ಶಾಶ್ವತವಾಗಿ ಜನರಿಗೆ ಸ್ಫೂರ್ತಿಯನ್ನು ಕೊಡುವುದರ ಜೊತೆಗೆ ಉಪಯೋಗವಾಗುತ್ತವೆ. ಅವರು ಸಾಹಿತ್ಯದಲ್ಲಿ ರಂಗಕರ್ಮಿಯಾಗಿ ಎಲ್ಲಾ ಕ್ಷೇತ್ರದಲ್ಲಿ ಕೂಡ ತಮ್ಮದೇ ಆದ ಒಂದು ವಿಶೇಷವಾದಂಥ ಚಾಪನ್ನು ಅವರು ಬಿಟ್ಟು ಹೋಗಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ನಮಗೆ ಬಿಡುವೇ ಇರುವುದಿಲ್ಲ, ಕೆಲಸವೇ ಇರುವುದಿಲ್ಲ ಮತ್ತೆ ಪುಸ್ತಕಗಳನ್ನು ಓದುವುದಕ್ಕೆ ಪುರಸೋತ್ತು ಇರುವುದಿಲ್ಲವೆಂದು ನಾವುಗಳು ಅನೇಕ ಸಲ ಅನೇಕ ನೆಪಗಳನ್ನು ಒಡ್ಡುತ್ತಿರುತ್ತೇವೆ. ಆದರೆ, ಶ್ರೀಯುತರು ದೊಡ್ಡ ಮಟ್ಟದಲ್ಲಿ ರಾಜಕಾರಣ ಮಾಡಿ ಇವೆಲ್ಲವನ್ನು ಉಳಿಸಿ, ಬೆಳೆಸಿಕೊಂಡು ಇವತ್ತಿನ ದಿವಸ ತಮ್ಮದೇ ಆದಂಥ ಒಂದು ವ್ಯಕ್ತಿತ್ವವನ್ನು ಅವರು ತೋರಿಸಿದ್ದಾರೆ. ನೋಬಲ್ ಪಾರಿತೋಷಕವನ್ನು ಪಡೆದಂಥ ನೈಪಾಲ್ ರವರು ಕೂಡ ತಮ್ಮ ಒಂದು Autobiographyಯಲ್ಲಿ ಶ್ರೀ ಎಂ.ಪಿ. ಪ್ರಕಾಶ್‌ರವರ ಬಗ್ಗೆ ಬರೆದಿದ್ದಾರೆಂದು ಯಾರೋ ಒಬ್ಬರು ನನಗೆ ಹೇಳಿದರು. ಭಾರತ ದೇಶದಲ್ಲಿ ಅನೇಕ ವರ್ಗದ ರಾಜಕಾರಣಿಗಳಿದ್ದಾರೆ. ಆದರೆ ಮಾನ್ಯ ಎಂ.ಪಿ. ಪ್ರಕಾಶ್‌ರವರು ಒಂದು ವಿಶೇಷ ತರಗತಿಯ, ಅಂತಸ್ತಿನ ವ್ಯಕ್ತಿ ಎಂದು ಅವರ ಲೇಖನದಲ್ಲಿ ಬರೆದಿದ್ದಾರೆಂದು

ನನಗೊಬ್ಬರು ಹೇಳಿದರು. ಮತ್ತೆ ಅವರು ಮೊಟ್ಟ ಮೊದಲು ಅಸೆಂಬ್ಲಿಗೆ ಬಂದು ಸಚಿವರಾಗಿದ್ದಾಗ ನಾನು ಮೇಲ್ಮನೆಯಲ್ಲಿ ಉಪ ಸಭಾಪತಿಯಾಗಿದ್ದೆ. ಆಡಳಿತ ಪಕ್ಷದ ಅನೇಕ ಜನರು ಮೊಟ್ಟ ಮೊದಲನೆ ಸಲ ಸಚಿವರಾಗಿದ್ದರು. ಆದರೆ, ಸರಿಯಾಗಿ, ಸಮರ್ಪಕವಾಗಿ ಉತ್ತರ ಕೊಡುವುದಕ್ಕೆ ಬರುತ್ತಿರಲಿಲ್ಲ. ದೊಡ್ಡ ದೊಡ್ಡ ಸಚಿವರು ಮೇಲ್ಮನೆಯಲ್ಲಿ ಉತ್ತರ ಕೊಡಬೇಕಾದರೆ ನಡುಗತ್ತಿದ್ದರು. ಏಕೆಂದರೆ, ನಾನು ಉಪ ಸಭಾಪತಿಯಾಗಿದ್ದಾಗ ಮಾನ್ಯ ಎ.ಕೆ. ಸುಬ್ಬಯ್ಯ, ಮಾನ್ಯ ಹಾವನೂರ್, ಮಾನ್ಯ ಕಾಗೋಡು ತಿಮ್ಮಪ್ಪರವರು ಅಲ್ಲಿ ವಿರೋಧ ಪಕ್ಷದಲ್ಲಿ ಕೆಲಸ ಮಾಡುತ್ತಿದ್ದರು. ಕೆಲವು ಸಚಿವರು ಉತ್ತರ ಕೊಡುವುದಕ್ಕೆ ಹೆದರುತ್ತಿದ್ದಾಗ 10 ವರ್ಷಗಳಿಂದ ಸಚಿವರಾಗಿ ಕೆಲಸ ಮಾಡಿ ಅನುಭವ ಇರುವಂತೆ ಮಾನ್ಯ ಎಂ.ಪಿ. ಪ್ರಕಾಶ್‌ರವರು Minister of State ಆಗಿದ್ದರೂ ಕೂಡ ಎದ್ದು ನಿಂತು ಬಹಳ ಸುಲಲಿತವಾಗಿ, ಬಹಳ ನಿರರ್ಗಳವಾಗಿ ಉತ್ತರ ಕೊಡುತ್ತಿದ್ದರು. ಯಾವುದೇ ಇಲಾಖೆಯ ಪ್ರಶ್ನೆ ಬಂದರೂ ಕೂಡ ಅವರು ಎದ್ದು ನಿಂತು ಅಧಿಕಾರ ಪೂರ್ಣವಾಗಿ ಉತ್ತರ ಕೊಡತಕ್ಕಂಥ ಸಾಮರ್ಥ್ಯ ಮತ್ತು ಪರಿಣತಿಯನ್ನು ಹೊಂದಿದವರಾಗಿದ್ದರು. ಇಂತಹ ಒಬ್ಬ ವ್ಯಕ್ತಿ ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ಇವತ್ತು ಕರ್ನಾಟಕ ರಾಜಕೀಯ ಕ್ಷೇತ್ರ ಬಡವಾಗಿದೆ. ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ. ನಾನು ಹುಬ್ಬಳ್ಳಿಯಲ್ಲಿ 12 ವರ್ಷ ವಿದ್ಯಾಭ್ಯಾಸವನ್ನು ಮಾಡಿದ್ದೇನೆ ಮತ್ತು ಸ್ಟಾಫ್ ಮೆಂಬರ್ ಕೂಡ ಆಗಿದ್ದೆ. ಶ್ರೀ ಭೀಮಸೇನ್ ಜೋಶಿಯವರ ಗಾಯನ ಎರಡು ವರ್ಷಕ್ಕೆ ಒಂದು ಸಲವಾದರೂ ಕೇಳುವಂಥ ಒಂದು ಅವಕಾಶ ನಮಗೆ ಸಿಗುತ್ತಿತ್ತು. ಅವರನ್ನು ಸಂಗೀತ ಸಾಮ್ರಾಟ್ ಎಂದು ಹೇಳುತ್ತಿದ್ದರು. ಈ ಹೆಸರು ಅವರಿಗೆ ಅನ್ವರ್ಥಕವಾಗಿದೆ. ಈಗಾಗಲೇ ನಾನು ಮೊದಲೇ ಹೇಳಿದಂತೆ ಅವರು ಶಾಶ್ವತವಾಗಿ ಜನರ ಹೃದಯದಲ್ಲಿ ದೊಡ್ಡ ಸಾಮ್ರಾಟರಾಗಿದ್ದರು. ಎಲ್ಲದಕ್ಕಿಂತ ದೊಡ್ಡ ಸಾಮ್ರಾಜ್ಯ ಯಾವುದು ಎಂದರೆ ಜನರ ಹೃದಯದಲ್ಲಿರುವುದು, ಅದೇ ಒಂದು ದೊಡ್ಡ ಸಾಮ್ರಾಜ್ಯ. ಅವರು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರ ಮಧುರವಾಣಿಯನ್ನು ನಮ್ಮ ಹೃದಯದಲ್ಲಿ ಬಿಟ್ಟು ಹೋಗಿದ್ದಾರೆ. ಅವರ ಗಾಯನವನ್ನು ಕೇಳಿದಾಗ ಮನಸ್ಸಿಗೆ ಆನಂದವಾಗುತ್ತದೆ. ಅಂತಹ ಒಬ್ಬ ವ್ಯಕ್ತಿಯ ಜೊತೆಯಲ್ಲಿ ಅನೇಕ ಗಣ್ಯರು ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ಅನೇಕ ಜನರು ಶಬರಿಮಲೆಯಲ್ಲಿ ದುರ್ಮರಣಕ್ಕೀಡಾಗಿದ್ದಾರೆ. ಅವರೆಲ್ಲರಿಗೂ

ಭಗವಂತನು ಶಾಂತಿಯನ್ನು ಕೊಡಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು): ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚನೆಗೆ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಮಾನ್ಯ ಎಂ.ಪಿ. ಪ್ರಕಾಶ್ ರವರು ನಾಡುಕಂಡ ಅಪ್ರತಿಮ ರಾಜಕಾರಣಿಗಳಲ್ಲಿ ಅವರು ಒಬ್ಬರು. ಎಂ.ಪಿ. ಪ್ರಕಾಶ್‌ರವರನ್ನು ಜನತಾ ಪರಿವಾರದಲ್ಲಿ ಸುಮಾರು 20 ವರ್ಷಗಳ ಕಾಲ ನಾನು ಅವರ ಜೊತೆಯಲ್ಲಿ ಒಡನಾಟವನ್ನು ಮಾಡಿದ್ದೇನೆ. ಅವರು ನನ್ನಂಥ ನೂರಾರು ಯುವ ರಾಜಕಾರಣಿಗಳಿಗೆ ರೋಲ್ ಮಾಡೆಲ್ ಆಗಿದ್ದರು, ಸ್ಫೂರ್ತಿದಾಯಕರಾಗಿದ್ದರು. ಅವರನ್ನು ನಾನು ಹತ್ತಿರದಿಂದ ಬಲ್ಲೆ. ಚರ್ಚೆ ಮಾಡುವಾಗ ಅವರು ವಿಷಯವನ್ನು ಎಷ್ಟು ಆಳವಾಗಿ ಅರ್ಥ ಮಾಡಿಕೊಂಡಿದ್ದರು ಎಷ್ಟು ಗಂಭೀರತೆಯಿಂದ ಇರುತ್ತಿದ್ದರು ಎನ್ನುವುದನ್ನು ನಾವು ಕಂಡಿದ್ದೇವೆ. ಎಂ.ಪಿ. ಪ್ರಕಾಶ್‌ರವರು 4 ಸಾರಿ ವಿಧಾನಸಭೆಗೆ ಆಯ್ಕೆಯಾಗಿದ್ದರು. ಅವರು ಯಾವಾಗ ಗೆದ್ದಿದ್ದಾರೆ ಆಗಾಗ ಸರ್ಕಾರ ರಚನೆಯಾಗುತ್ತಿತ್ತು. ನಾನು ಹೋದಾಗ ಅವರು ಒಂದು ಸಾರಿ ಹೇಳುತ್ತಿದ್ದರು. ನಿಮ್ಮ ಸಿಂಧನೂರ ಕ್ಷೇತ್ರ ಗೆದ್ದಾಗ ನಮ್ಮ ಪಕ್ಷದ ಸರ್ಕಾರ ಬರುವುದಿಲ್ಲವೆಂದು ಹೇಳುತ್ತಿದ್ದರು. ಎಂ.ಪಿ. ಪ್ರಕಾಶ್‌ರವರು ಗೆದ್ದಾಗ ಸರ್ಕಾರ ರಚನೆಯಾಗುತ್ತಿತ್ತು. ಅವರು ಸೋತಿದ್ದರು ಕೂಡ ಎಂದು ನಿರಾಶೆಯಾಗುತ್ತಿರಲಿಲ್ಲ. ಒಂದೊಂದು ಸಲ ನಾವು ಮಾತನಾಡುತ್ತಿರುತ್ತೇವೆ. ಎಂ.ಪಿ. ಪ್ರಕಾಶ್‌ರಂಥವರನ್ನು ಕೂಡ ಜನರು ಸೋಲಿಸುತ್ತಾರಲ್ಲಾ ಹೇಗೆ? ಅವರು ತಮ್ಮ ಕ್ಷೇತ್ರಕ್ಕೆ ಮಾಡಿರುವ ಕೆಲಸಗಳನ್ನು ನೋಡಿದರೆ ಅವರು ಸೋಲುವುದೇ ಇಲ್ಲವೆಂದು ಭಾವಿಸುತ್ತಿದ್ದೆವು. ಆದರೂ ಕೂಡ ಎರಡು-ಮೂರು ಸಲ ಅವರು ಚುನಾವಣೆಯಲ್ಲಿ ಸೋತಿದ್ದರು. ಅವರು ಮಾತನಾಡುವುದನ್ನು ಕೇಳಿದರೆ ಎಲ್ಲರಿಗೂ ಇನ್ನು ಕೇಳಬೇಕು ಎನ್ನುವಂಥ ಆಸಕ್ತಿ ಬರುತ್ತಿತ್ತು, ಅಷ್ಟು ಆಳವಾಗಿ ಅಷ್ಟು ಅರ್ಥಗರ್ಭಿತವಾಗಿ ಮಾತನಾಡುತ್ತಿದ್ದರು. ಅವರು ಕೇವಲ ಒಬ್ಬ ರಾಜಕಾರಣಿ ಆಗಿರದೇ ವಿವಿಧ ಕ್ಷೇತ್ರಗಳಲ್ಲಿ ಲೇಖಕರಾಗಿ, ನಾಟಕಕಾರರಾಗಿ, ಕಲಾವಿದರಾಗಿ ತಮ್ಮ ಅಮೂಲ್ಯವಾದ ಸೇವೆಯನ್ನು ಈ ನಾಡಿಗೆ ಕೊಟ್ಟು ಹೋಗಿದ್ದಾರೆ. ಅವರ ಮನೆಗೆ ಹೋದರೆ ರಾಜಕಾರಣಿಗಳು ಅಷ್ಟೆ ಇರುತ್ತಿರಲಿಲ್ಲ. ಸಾಹಿತಿಗಳು, ಕಲಾವಿದರು ರಾಜಕಾರಣಿಗಳಿಗಿಂತ ಹೆಚ್ಚು ಜನ ಅವರ ಮನೆಯಲ್ಲಿ ಇರುತ್ತಿದ್ದರು. ಅವರು ನಮಗಿಂತ ಹೆಚ್ಚು ಸಮಯವನ್ನು ಅವರಿಗೆ ಕೊಡುತ್ತಿದ್ದರು. ಹೆಚ್ಚು ಸಮಯವನ್ನು ಅವರ ಜೊತೆಯಲ್ಲಿ

ಕಳೆಯುತ್ತಿದ್ದರು. ನಾವು ಅವರ ಜೊತೆಯಲ್ಲಿ ಚರ್ಚೆ ಮಾಡುತ್ತಿದ್ದೆವು. ಏನ್ ಸರ್ ನಮಗೆ ನೀವು ಮಾತನಾಡುವುದಕ್ಕೆ ಟೈಮ್ ಕೊಡುವುದಿಲ್ಲವೆಂದು ಕೇಳಿದಾಗ, ಇಲ್ಲಾ ನಿಮ್ಮ ಜೊತೆಯಲ್ಲಿ ಯಾವಾಗಲೂ ಮಾತನಾಡುತ್ತಿರುತ್ತೇನೆ, ಅವರ ಜೊತೆಯಲ್ಲಿ ಸ್ವಲ್ಪ ಮಾತನಾಡಬೇಕೆಂದು ಹೇಳಿ ನಮ್ಮನ್ನು ಕೂಡಿಸುತ್ತಿದ್ದರು. ಅಷ್ಟು ಸಂಪರ್ಕವನ್ನು ಅವರು ಅವರ ಜೊತೆಯಲ್ಲಿ ಇಟ್ಟುಕೊಂಡಿದ್ದರು. ಆ ಕ್ಷೇತ್ರದಲ್ಲಿ ಕೂಡ ಅವರು ತಮ್ಮದೆ ಆದ ಛಾಪನ್ನು ಬಿಟ್ಟು ಹೋದರು. ನಾನು ಈ ಸಲ ಮೊದಲ ಬಾರಿಗೆ ವಿಧಾನಸಭೆಗೆ ಸ್ಪರ್ಧಿಸಿದಾಗ ಅವರು ಕೂಡ ಆರಿಸಿ ಬರುತ್ತಾರೆಂದು ಆಶಾಭಾವನೆಯಿಂದ ಇದ್ದೆ. ಅವರ ಜೊತೆಯಲ್ಲಿ ಪಕ್ಷದ ಹುದ್ದೆಯಲ್ಲಿ ಬಹಳಷ್ಟು ಸಲ ಕೆಲಸ ಮಾಡಿದ್ದರೂ ಕೂಡ, ಈ ಸಲ ಶಾಸಕನಾಗಿ ಅವರ ಜೊತೆಯಲ್ಲಿ ಕೆಲಸ ಮಾಡುವ ಭಾಗ್ಯ ನನಗೆ ಸಿಗುತ್ತದೆಂದು ಭಾವಿಸಿದ್ದೆ. ಆದರೆ ದುರ್ದೈವ ಅವರ ಜೊತೆಯಲ್ಲಿ ಶಾಸಕನಾಗಿ ಕೆಲಸ ಮಾಡುವ ಒಂದು ಭಾಗ್ಯ ನನಗೆ ಲಭಿಸಲಿಲ್ಲವೆನ್ನುವ ನೋವು ನನ್ನ ಮನದಾಳದಲ್ಲಿದೆ. ಇವತ್ತು ಅವರು ನಮ್ಮನ್ನು ಅಗಲಿ ಹೋಗಿದ್ದರೂ ಕೂಡ ಅವರು ಏನು ಬಿಟ್ಟು ಹೋಗಿದ್ದಾರೆ ಅದು ಶಾಶ್ವತವಾಗಿ ನಮ್ಮ ಮನದಲ್ಲಿ ಉಳಿದಿದೆ. ನಾನು ಬಹಳ ಸಲ ನೋಡುತ್ತಿದ್ದೆ, ಅವರು ಯಾವುದೇ ಕ್ಷೇತ್ರಕ್ಕೆ ಅಥವಾ ಊರಿಗೆ ಹೋದರು ಕಾರ್ಯಕರ್ತರ ಹೆಸರನ್ನು ಕರೆಯುತ್ತಿದ್ದರು. ಒಂದು ಕ್ಷೇತ್ರದಲ್ಲಿ ಹೋದರೆ ನಾಲ್ಕೈದು ಜನ ಕಾರ್ಯಕರ್ತರನ್ನು ಗುರುತಿಸಿ ಹೆಸರಿನ್ನಿಟ್ಟು ಕರೆಯತಕ್ಕಂಥ ನಾಯಕರನ್ನು ಬಹಳ ವಿರಳವಾಗಿ ಕಾಣುತ್ತೇವೆ. ಅವರು ಅಷ್ಟೊಂದು ಜ್ಞಾಪಕಶಕ್ತಿಯನ್ನು ಇಟ್ಟು ಕೊಂಡಿದ್ದರು. ಎಲ್ಲೆ ಭೇಟಿಯಾದರೂ ನಮ್ಮನ್ನು ಮತ್ತು ಕಾರ್ಯಕರ್ತರನ್ನು ಗುರುತಿಸತಕ್ಕಂಥ ಶಕ್ತಿ ಅವರಲ್ಲಿತ್ತು. ಹಾಗಾಗಿ ಅವರು ಜನರ ಜೊತೆಯಲ್ಲಿ ಬಹಳ ಸರಳವಾಗಿ ಬೆರೆಯುತ್ತಿದ್ದರು. ಅಂತಹ ಒಬ್ಬ ರಾಜಕಾರಣಿಯನ್ನು ನಾವು ಕಳೆದುಕೊಂಡಿರುವುದರಿಂದ ಕೇವಲ ರಾಜಕೀಯರಿಗೆ ಅಷ್ಟೆ ಅಲ್ಲ, ಕಲಾರಂಗ, ನಾಟಕರಂಗ, ಲೇಖಕರಂಗ, ಸಾಹಿತಿರಂಗ ಕೂಡ ಬಡವಾಗಿದೆ ಎನ್ನುವುದನ್ನು ಎಲ್ಲರೂ ಕೂಡ ಒಪ್ಪಬೇಕಾಗುತ್ತದೆ. ಅವರ ಅಗಲಿಕೆಯ ನೋವು ಇಡಿ ನಾಡಿನಲ್ಲಿದೆ. ಅವರ ನೋವನ್ನು ಭರಿಸತಕ್ಕಂಥ ಶಕ್ತಿ ಅವರ ಕುಟುಂಬಕ್ಕೆ ಆ ಭಗವಂಥ ದಯಪಾಲಿಸಲಿ ಎಂದು ಹೇಳಿ ಪ್ರಾರ್ಥಿಸುತ್ತೇನೆ. ಇನ್ನು ಪಿ. ತಿಪ್ಪಯ್ಯನವರು ಮತ್ತು ಮೊಯಮದ್ ಉಮರ್ ಅಬ್ದುಲ್ ರೆಹಮಾನ್ ರವರು ನನ್ನ ಜಿಲ್ಲೆಯ ಶಾಸಕರಾಗಿದ್ದವರು. ರಾಯಚೂರಿನ ಎಂಟನೇ ವಿಧಾನಸಭೆಗೆ ಪ್ರತಿನಿಧಿಸಿದ್ದರು. ನಾವೆಲ್ಲರೂ

ಮೊಹಮದ್ ಉಮರ್ ಅಬ್ದುಲ್ ರೆಹಮಾನ್‌ರವರನ್ನು ಉಮರ್‌ಬಾಯಿ ಎಂದು ಅವರನ್ನು ಗುರ್ತಿಸುತ್ತಿದ್ದೆವು. ಅವರು ಕೂಡ ರಾಯಚೂರಿನಲ್ಲಿ ನಮ್ಮ ಜೊತೆ ಇದ್ದು ರಾಜಕಾರಣವನ್ನು ಮಾಡಿ ದಿನಾಂಕ 31-1-2011ರಂದು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಕೂಡ ಆ ಭಗವಂತ ಶಾಂತಿಯನ್ನು ಕೊಡಲಿ. ಮತ್ತು ಪಂಡಿತ್ ಭೀಮ್‌ಸೇನ್ ಜೋಶಿ ಇವರು ನಾಡುಕಂಡ ಅತ್ಯಂತ ಶ್ರೇಷ್ಠ ಸಂಗೀತ ಕಲಾವಿದರು. ಅವರು ಪಡೆದಿರತಕ್ಕಂಥ ಪ್ರಶಸ್ತಿಗಳು, ಪದ್ಮಶ್ರೀ, ಕರ್ನಾಟಕ ಸಂಗೀತ ಅಕಾಡೆಮಿಯ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಪದ್ಮವಿಭೂಷಣ, ಕರ್ನಾಟಕ ರತ್ನ ಹಾಗೂ ಭಾರತ ರತ್ನ ಪ್ರಶಸ್ತಿಗಳ ಜೊತೆಯಲ್ಲಿ ಹತ್ತು-ಹಲವು ಪ್ರಶಸ್ತಿಗಳನ್ನು ಪಡೆದು ಅವರ ಅಗಲಿಕೆಯಿಂದ ಸಂಗೀತ ಕ್ಷೇತ್ರ ಬಡವಾಗಿದೆ.

ಶ್ರೀ ಬಸವರಾಜ್ ಗುಡಿಗೇರಿಯವರು ನಮ್ಮ ಭಾಗದವರು, ನಮ್ಮ ಭಾಗದಲ್ಲಿ ಗುಡಿಗೇರಿ ನಾಟಕ ಕಂಪನಿ ಎಂದರೆ ಬಹಳ ಫೇಮಸ್ಸು. ಅವರು ನಾಟಕ ಕಲಾವಿದರಾಗಿ ಮೊದಲ ಬಾರಿಗೆ ಸಿನೆಮಾ ಕಲಾವಿದರನ್ನು ನಾಟಕ ರಂಗಕ್ಕೆ ತಂದ ಕೀರ್ತಿ ಬಸವರಾಜ್ ಗುಡಿಗೇರಿಯವರಿಗೆ ಹೋಗುತ್ತದೆ. ನಮ್ಮ ಗ್ರಾಮೀಣ ಜನ ಇವರ ನಾಟಕಗಳನ್ನು ಬಹಳ ಮೆಚ್ಚಿ ನೋಡುತ್ತಿದ್ದರು. ಅವರ ಅಗಲುವಿಕೆಯಿಂದ ನಾಟಕರಂಗ ಬಡವಾಗಿದೆ ಎಂದು ಭಾವಿಸುತ್ತೇನೆ. ಇನ್ನು ಶಬರಿಮಲೆ ದುರಂತದಲ್ಲಿ ನೂರಾರು ಜನ ಭಕ್ತರು ಮರಣವಾಯಿತು ಅದರಲ್ಲಿ ನನ್ನ ಕ್ಷೇತ್ರದ ಒಬ್ಬ ಭಕ್ತ ಕೂಡ ನಮ್ಮನ್ನು ಅಗಲಿದ್ದಾನೆ. ಅವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರಿ ತಮ್ಮ ಸಂತಾಪ ಸೂಚನೆಗೆ ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+**ಶ್ರೀ ಜಿ. ಜನಾರ್ಧನ ರೆಡ್ಡಿ (ಮಾನ್ಯ ಪ್ರವಾಸೋದ್ಯಮ ಮತ್ತು ಯುವಜನಸೇವಾ ಸಚಿವರ)** ಮಾನ್ಯ ಅಧ್ಯಕ್ಷರೆ, ನಮ್ಮ ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರ ಬಗ್ಗೆ ಎಲ್ಲರೂ ಕೂಡ ಅವರ ಆತ್ಮಕ್ಕೆ ಶಾಂತಿ ಸಿಗಬೇಕೆಂದು ಆ ಭಗವಂತನಲ್ಲಿ ಕೇಳಿದ್ದಾರೆ. ಇವತ್ತು ವಿಶೇಷವಾಗಿ ಬಳ್ಳಾರಿಯಿಂದ ಇಡೀ ನಮ್ಮ ಕರ್ನಾಟಕ ರಾಜ್ಯಕ್ಕೆ, ಇಡೀ ರಾಷ್ಟ್ರದಲ್ಲಿಯೇ ಒಂದು ಹೆಸರುವಾಸಿಯಾದ ಬಳ್ಳಾರಿಯ ಕೀರ್ತಿಯನ್ನು ಇಡೀ ದೇಶಾದ್ಯಂತ ಒಬ್ಬ ಬಹಳ ಉತ್ತಮವಾದ ರಾಜಕಾರಣಿ ಎನ್ನುವಂಥ ರೀತಿಯಲ್ಲಿ ಅವರು ಹೆಸರನ್ನು ಮಾಡಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ನಾನು ಕಳೆದ ಎರಡು-ಮೂರು ವರ್ಷಗಳಲ್ಲಿ ದೂರ ಮತ್ತು ಸ್ವಲ್ಪ ವ್ಯತ್ಯಾಸವಾಯಿತು ವಿನಃ ಕಳೆದ 20 ವರ್ಷಗಳಿಂದ ಅಂದರೆ ಮಾನ್ಯ

ಶ್ರೀರಾಮಲುರವರು ತಮ್ಮ 17ನೇ ವಯಸ್ಸಿನವರು ಇರುವಾಗ ಬಳ್ಳಾರಿಯಲ್ಲಿ ಶ್ರೀಮಾನ್ ಎಂ.ಪಿ. ಪ್ರಕಾಶ್‌ರವರು ಶ್ರೀರಾಮಲುರವರನ್ನು ಕಂಡ ತಕ್ಷಣ ಅವರ ಕ್ವಾಲಿಟಿ ನೋಡಿ ನನಗೆ ಒಂದು ಮಾತನ್ನು ಹೇಳಿದ್ದರು. ಖಂಡಿತವಾಗಿಯೂ ಒಬ್ಬ ಒಳ್ಳೆಯ ಉತ್ತಮ ನಾಯಕನಾಗಿ ಬೆಳೆಯುವಂಥ ಎಲ್ಲಾ ಲಕ್ಷಣಗಳು ಶ್ರೀರಾಮುಲು ಅವರಿಗಿದೆ. ನಾವೆಲ್ಲರೂ ಕೂಡ ಶ್ರೀರಾಮುಲುಗೆ ಪ್ರೋತ್ಸಾಹ ಕೊಡಬೇಕು ಎನ್ನುವಂಥ ಒಂದು ಮಾತನ್ನು ಹೇಳಿದ್ದರು. ಆ ಸಂದರ್ಭದಲ್ಲಿ ನಮ್ಮ ಬಳ್ಳಾರಿ ನಗರದಲ್ಲಿ ಕುಟುಂಬ ರಾಜಕಾರಣ ಏನಿತ್ತು. ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೇಳುತ್ತಿದ್ದರು. ಶ್ರೀಮತಿ ಬಸವರಾಜೇಶ್ವರಿಯವರಿಂದ ಹಿಡಿದು ಅಲ್ಲಮ್ ವೀರಭದ್ರಪ್ಪನವರ ಕುಟುಂಬದಿಂದ ಹಿಡಿದು ನಾವೆಲ್ಲರೂ ಏನೇ ಪ್ರಯತ್ನಗಳನ್ನು ಮಾಡಿದರೂ ಕೂಡ ಆಗದೇ ಇರುವುದನ್ನು ಮೊದಲ ಬಾರಿಗೆ ಬಳ್ಳಾರಿ ನಗರಸಭೆ ಚುನಾವಣೆಯಲ್ಲಿ ನಮ್ಮ ಭಾರತೀಯ ಜನತಾ ಪಕ್ಷ ಅಧಿಕಾರಕ್ಕೆ ಬಂದ ಕೂಡಲೆ ಅವರ ಪಕ್ಷದಿಂದ ಇಬ್ಬರು ಸದಸ್ಯರು ಗೆದಿದ್ದರು, ತಕ್ಷಣ ಸ್ವತಃ ಎಂ.ಪಿ. ಪ್ರಕಾಶ್‌ರವರು ಬಳ್ಳಾರಿಗೆ ಬಂದು ಆ ಇಬ್ಬರು ಸದಸ್ಯರು ಗೆದ್ದಿದ್ದರು, ತಕ್ಷಣ ಸ್ವತಃ ಎಂ.ಪಿ. ಪ್ರಕಾಶ್‌ರವರು ಬಳ್ಳಾರಿಗೆ ಬಂದು ಆ ಇಬ್ಬರು ಸದಸ್ಯರನ್ನು ನಮಗೆ ಸಪೋರ್ಟ್ ಮಾಡುವುದಕ್ಕೆ ಹೇಳಿದರು. ಶ್ರೀರಾಮುಲುರವರ ಹೋರಾಟದಿಂದ ಈ ಒಂದು ಮಟ್ಟಕ್ಕೆ ಏನು ಬಂದಿದೆ ಇನ್ನು ಬೆಳೆಯಬೇಕು ಎನ್ನುವ ರೀತಿಯಲ್ಲಿ ಅವರು ಸಪೋರ್ಟ್ ಮಾಡಿ ಅಷ್ಟೊಂದು ದೊಡ್ಡ ಗುಣ ತೋರಿಸುವುದು ಇವತ್ತು ರಾಜಕಾರಣದಲ್ಲಿ ಸಾಧ್ಯವಿಲ್ಲ. ಇನ್ನೂ ಮುಂದೆ ಬೆಳೆಯಬೇಕೆನ್ನುವಂತಹ ರೀತಿಯಲ್ಲಿ ಅವರು support ಮಾಡಿ ಎಷ್ಟೊಂದು ದೊಡ್ಡಗುಣವೆಂದರೆ ಅದನ್ನು ನಾವು ಜೀವನದಲ್ಲಿ ಮರೆಯುವುದಕ್ಕೆ ಸಾಧ್ಯವಿಲ್ಲ. ನಾನು ವ್ಯಾಪಾರ ವ್ಯವಹಾರದಲ್ಲಿ ಇರುವಂತಹ ಸಂದರ್ಭದಲ್ಲಿ, ಒಂದು ದಿನ ಪತ್ರಿಕೆಯನ್ನು ಪ್ರಾರಂಭ ಮಾಡಿದಾಗಯೂ ಕೂಡ ಒಬ್ಬ ಮಂತ್ರಿಯಾಗಿ ಬಂದು ಉದ್ಘಾಟನೆಯ ವಿಷಯವಾಗಿರಬಹುದು, ನಮ್ಮನ್ನು ಬಹಳ ಹೃದಯತುಂಬಿ ಮಾತನಾಡಿಸುತ್ತಿದ್ದರು. ನಮ್ಮನ್ನು ಅವರು open ಆಗಿ ಮೆಚ್ಚಿಕೊಳ್ಳುತ್ತಿದ್ದರು. ನಮಗೆ ತುಂಬಾ encourage ಮಾಡುತ್ತಿದ್ದರು. ಇಡೀ ಬಳ್ಳಾರಿ ಜಿಲ್ಲೆಯಲ್ಲಿ, particular ಆಗಿ ಒಂದು ಸಿದ್ಧಾಂತವನ್ನು ಇಟ್ಟುಕೊಂಡು ನಮ್ಮ ಶ್ರೀನಿವಾಸ ಪ್ರಸಾದ್‌ರವರು ಸೇರಿದಂತೆ ಹಿರಿಯ ಸದಸ್ಯರಲ್ಲರೂ ಕೂಡ ಮಾತನಾಡಿದ್ದಾರೆ. ಒಂದು ಸಿದ್ಧಾಂತಕ್ಕೆ, ಹೋರಾಟ ಮಾಡಿದರೆ ಹೇಗಿರಬೇಕು, ನಾನು ಕಳೆದ ಅಸೆಂಬ್ಲಿಯಲ್ಲಿ ಆಗಿರಬಹುದು, ಕೆಲವೊಂದು ನಮ್ಮ

ಮಾತುಗಳಿಂದ ಹಾಗೂ ನಡವಳಿಕೆಗಳಿಂದ ಆಗಿರಬಹುದು, ಕೆಲವರು ಹೀಗೆಲ್ಲಾ ನಡೆದುಕೊಳ್ಳಬಾರದು ಎಂದು ಹೇಳಿ ಏನೆಲ್ಲಾ ಮಾತನಾಡಿದ್ದಾರೆ. ಆ ಸಮಯದಲ್ಲಿ ನಾನು ನಿಜವಾಗಿಯೂ ಶ್ರೀ ಎಂ.ಪಿ. ಪ್ರಕಾಶ್‌ರವರನ್ನು ನೆನೆಸಿಕೊಳ್ಳುತ್ತೇನೆ. ಅವರ ಹಾಗೆ ನಾವು ರೂಢಿಸಿಕೊಳ್ಳಬೇಕು. ಅವರು ಹೇಗೆ ಅಜಾತಶತ್ರುವಾಗಿದ್ದರು, ಅಜಾತಮಿತ್ರ ಆಗುವಂತಹ ಪರಿಸ್ಥಿತ ಆಗಬಾರದು. ಅವರ ಹಾಗೆ ನಾವು ನಡೆದುಕೊಳ್ಳಬೇಕು, ಅವರ ಹಾಗೆ ನಾವು ಮಾತನಾಡಬೇಕು. ಅವರ ಹಾಗೆ ನಾವು ಕಲಿಯಬೇಕು. ಅವರ ಹಾಗೆ ಭಾಷಣವನ್ನು ಮಾಡಬೇಕು. ಅವರ ಹಾಗೆಯೇ ನಾವು ಜನರ ಜೊತೆಯಲ್ಲಿ ಬೆರೆಯಬೇಕೆಂದು ಸಾಕಷ್ಟು ಸಲ ಅಂದುಕೊಳ್ಳುತ್ತಲೇ ಕೆಲವೊಂದು ತಪ್ಪುಗಳನ್ನು ಮಾಡುತ್ತಲೇ ಬಂದಿದ್ದೇವೆ. ಅವರು ಅನಾರೋಗ್ಯದಿಂದ ಬಳಲುತ್ತಿರುವ ಸಂದರ್ಭದಲ್ಲಿ ನಾನು ಕೂಡ ಅಲ್ಲಿಗೆ ಹೋಗಿದ್ದೆ. ನಾನು ಅಲ್ಲಿಗೆ ಹೋಗಿದ್ದಾಗ ಕಳೆದ 20 ವರ್ಷಗಳ ಅವರ ಅನುಭವಗಳನ್ನು ನಮಗೆ ಹೇಳಿದ್ದರು. ಅವರು ನಮ್ಮನ್ನು ಬಹಳ ಸಣ್ಣ ಹಂತದಿಂದ ನೋಡಿದ್ದಾರೆ. ನಮ್ಮನ್ನು ಚಿಕ್ಕವಯಸ್ಸಿನಿಂದಲೂ ನೋಡಿದ್ದಾರೆ, ನಾವು ಬಹಳ ಚಿಕ್ಕಮಟ್ಟದಲ್ಲಿ ಏನಿದ್ದೇವೆ, ಈ ಮಟ್ಟಕ್ಕೆ ಬೆಳೆಯುವುದಕ್ಕೆ ಮುಂಚೆ ನಾವೆಲ್ಲರೂ ಹೇಗಿದ್ದೇವೆ ಎನ್ನುವುದನ್ನು ಅವರು ಕಣ್ಣಾರೆ ಬಹಳ ಹತ್ತಿರದಿಂದ ಕಂಡಿದ್ದಾರೆ. ಆ ಕಾರಣದಿಂದ ಅವರು ಒಬ್ಬ ಮಂತ್ರಿಯಾಗಿ ನಮ್ಮ ಮನೆಗೆ ಬರುತ್ತಿದ್ದರೆ ಇಡೀ ನಮ್ಮ ಬಳ್ಳಾರಿ ನಗರದಲ್ಲಿ ಶ್ರೀ ಜನಾರ್ಧನರೆಡ್ಡಿಯವರ ಹಾಗೂ ಶ್ರೀ ಶ್ರೀರಾಮುಲುರವರ ಮನೆಗೆ ಒಬ್ಬ ಮಂತ್ರಿ ಹೋಗಿದ್ದಾರೆಂದ ತಕ್ಷಣ ಅಲ್ಲಿ ನಮಗೆ ಒಂದು ಧೈರ್ಯ, ನಮಗೊಂದು ಉತ್ಸಾಹ. ನಮ್ಮ ಎಲ್ಲಾ followersಗಳಲ್ಲಿ ನಮಗೆ ಒಬ್ಬ ಹಿರಿಯ ವ್ಯಕ್ತಿ ಇದ್ದಾರೆ ಎಂದು ಎಲ್ಲಾ ಧೈರ್ಯವು ನಮಗೆ ಇರುತ್ತಿತ್ತು. ಆ ಧೈರ್ಯವನ್ನು ಕೊಡುವುದಕ್ಕೆ ಅವರು ವಿಶೇಷವಾಗಿ ಬಳ್ಳಾರಿಗೆ ಬಂದ ತಕ್ಷಣ ನನಗಾಗಲಿ ಅಥವಾ ಶ್ರೀರಾಮುಲುರವರಿಗಾಗಲಿ ಅವರ followers ಮುಖಾಂತರ phone ಮಾಡಿ ನಾವು ಇದ್ದೇವೆಂದರೆ ನಮ್ಮ ಮನೆಗೆ ಬರುವುದು breakfastಗಾಗಲಿ, ಟೀಗಾಗಲಿ ಅಥವಾ ನಮ್ಮನ್ನು ಐ.ಬಿ.ಗೆ ಕರೆಸಿಕೊಂಡು ಮಾತನಾಡುವುದು ನಮಗೆ ಧೈರ್ಯ ತುಂಬುವುದು. ನೀವು ಯಾವುದೇ ಕಾರಣಕ್ಕೂ ಕೂಡ ಧೈರ್ಯವನ್ನು ಕಳೆದುಕೊಳ್ಳಬಾರದು, ನೀವು ಹೋರಾಟವನ್ನು ಮಾಡುತ್ತಲೆ ಇರಬೇಕು ಎಂದು ಹೇಳುತ್ತಲೇ ಬಂದಿದ್ದರು. ಹಾಗಾಗಿ ಮೊನ್ನೆ ಆ ಒಂದು ಸಮಾಧಿ ಸ್ಥಳಕ್ಕೆ ಹೋದಾಗಿಯೂ ಕೂಡ ಮಾನ್ಯ ಮುಖ್ಯಮಂತ್ರಿಯವರು ನಮ್ಮಗಳ ಜೊತೆಯಲ್ಲಿ

ಅಲ್ಲಿಗೆ ಬಂದಿದ್ದರು. ಇವತ್ತು ಒಂದು ಕೋಟಿ ರೂಪಾಯಿಗಳಷ್ಟು ಹಣವನ್ನು ಅವರು ಅದಕ್ಕೆ ಘೋಷಣೆಯನ್ನು ಮಾಡಿದ್ದಾರೆ. ಅದನ್ನು ಒಂದು ಪ್ರವಾಸಿ ತಾಣವನ್ನಾಗಿ ಮಾಡಬೇಕಾಗುತ್ತದೆ. ಹಂಪಿ ಉತ್ಸವ ಎಂದರೆ ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯ ಸಾರ್‌ರವರು ಹೇಳಿದ ಹಾಗೆ ನಿಜವಾಗಿಯೂ ಹಂಪಿ ಉತ್ಸವವನ್ನು ಪ್ರಾರಂಭ ಮಾಡಿರುವುದು ಶ್ರೀ ಎಂ.ಪಿ. ಪ್ರಕಾಶ್‌ರವರಾಗಿದ್ದಾರೆ. ಎಂ.ಪಿ. ಪ್ರಕಾಶ್‌ರವರೆಂದರೆ ಹಂಪಿ ಪ್ರಕಾಶ್‌ರವರೆಂದು ಹೇಳುವಂತಹ ಸಂದರ್ಭ ಇತ್ತು. ಅವರು ಏನು ಬುನಾದಿಗಳನ್ನು ಹಾಕಿಕೊಂಡು ಬಂದಿದ್ದಾರೆ, ಇವತ್ತು ಏನು ಒಂದು ಸುಸಂಸ್ಕೃತರಾಗಿ ಮತ್ತು heritage ಅಂದರೆ ಒಂದು ಐತಿಹಾಸಿಕ ಹಂಪಿಯನ್ನು ವಿಶ್ವಪ್ರಸಿದ್ಧ ಸ್ಥಳವನ್ನಾಗಿ ಮಾಡುವಂತಹ ಒಂದು ಪ್ರಾಮಾಣಿಕವಾದ ಪ್ರಯತ್ನ ಮಾಡಿ ಅವರು ಬುನಾದಿಯನ್ನು ಹಾಕಿದ್ದಾರೆ, ಅದರ ಮೇಲೆ ಇವತ್ತು ನಾನು ಏನಾದರೂ ಕಟ್ಟುತ್ತಿದ್ದೇನೆಯೇ ವಿನಃ ಅವರು ತುಂಬಾ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ನಾನು ಮೊನ್ನೆ ದಿನ ಅಲ್ಲಿಗೆ ಹೋದ ತಕ್ಷಣ ಅಂದು ಕೊಂಡೆ ಅವರೆಲ್ಲರನ್ನು ನಾನು ನೆನಸಿಕೊಂಡೆ. ನನ್ನ ಮನಸ್ಸಿನಲ್ಲಿ ಇವತ್ತು ನಾನು ಅಂದುಕೊಂಡಿರುವುದು ಇವತ್ತು ನಾನು ಸದನದಲ್ಲಿ ಹೇಳುತ್ತಿರುವುದೇನೆಂದರೆ, ಬಳ್ಳಾರಿಯ ಹೆಸರನ್ನು ಅವರು ಯಾವ ರೀತಿಯಾಗಿ ರಾಜ್ಯದಲ್ಲಿ ಇಡೀ ದೇಶದಲ್ಲಿ ಒಬ್ಬ ಒಳ್ಳೆಯ ವ್ಯಕ್ತಿಯಾಗಿ ಇಡೀ ರಾಜಕೀಯ ಜೀವನದಲ್ಲಿ ಅವರು ಮಾಡಿದ್ದಾರೆ. ನಾನು ಆ ಕ್ಷಣದಲ್ಲಿ ಅಂದುಕೊಂಡೆ, ಅವರ ಹಾಗೆ ನಾನು ಕೂಡ ಬದಲಾಗಲೇಬೇಕು, ಏಕೇ ಆಗುವುದಿಲ್ಲ. ನಾನು ಇನ್ನು 20–30 ವರ್ಷ ನಮ್ಮ ರಾಜಕೀಯ ಜೀವನದಲ್ಲಿ ಮುಂದೆ ಬರುವಂತಹ ದಿನಗಳಲ್ಲಿ ಎಂ.ಪಿ. ಪ್ರಕಾಶ್‌ರವರ ತರಹ ಜನಾರ್ಧನರೆಡ್ಡಿಯವರಾಗಲಿ, ಶ್ರೀರಾಮುಲುರವರಾಗಲಿ ನಾವೆಲ್ಲರೂ ಕೂಡ ಇದ್ದೇವೆ. ಅವರ ರೀತಿಯಲ್ಲಿ ಅವರ ಹೆಸರನ್ನು ಉಳಿಸಿದ್ದಾರೆನ್ನುವಂತಹ ರೀತಿಯಲ್ಲಿ ನಡೆದುಕೊಳ್ಳಬೇಕೆಂಬ ಸಂಕಲ್ಪವನ್ನು ಕೂಡ ನಾನು ಮೊನ್ನೆ ದಿನ ಮಾಡಿದ್ದೇನೆ. ಹಾಗಾಗಿ ಆ ರೀತಿಯಾಗಿ ನಡೆದುಕೊಳ್ಳುವಂತಹ ಪ್ರಾಮಾಣಿಕವಾದಂತಹ ಪ್ರಯತ್ನದಲ್ಲಿಯೂ ಕೂಡ ನಾವು ಮುಂದೆ ಹೋಗುತ್ತೇವೆ. ಅವರ ಬಗ್ಗೆ ನಾವು ಏನೇ ಹೇಳಿದರೂ ಯಾವತ್ತಿಗೂ ಕೂಡ ಅವರು ಹೆಚ್ಚು ಕಡಿಮೆ ನಮ್ಮ ಜೊತೆಯಲ್ಲಿಯೇ ಬಂದಿದ್ದರೂ ಕೂಡ ಇವತ್ತು ಅವರು ನಿಜವಾಗಿಯೂ ಕೂಡ ಚೆನ್ನಾಗಿರುತ್ತಿದ್ದರು. ಅವರು ಕೊನೆ ಘಳಿಗೆಯಲ್ಲಿ ಅವರು ರಾಜಕೀಯದಲ್ಲಿ ಏನೆಲ್ಲಾ ಸಾಧಿಸಬೇಕಾಗಿತ್ತೊ ಅವೆಲ್ಲವೂ

ಕೂಡ ಆಗುತ್ತಿತ್ತು. ಒಬ್ಬ ಮುಖ್ಯಮಂತ್ರಿಯಾಗಿ ಖಂಡಿತವಾಗಿಯೂ ಎಂ.ಪಿ. ಪ್ರಕಾಶ್‌ರವರು ಆಗಿಯೇ ಬಿಡುತ್ತಾರೆಂದು ಹೇಳಿ ನನ್ನ ಬಾಯಲ್ಲಿಯೂ ಕೂಡ ಎಷ್ಟೋ ಜನರ ಜೊತೆಯಲ್ಲಿ ನಾನು ಹೇಳಿದ್ದೇನೆ. ಖಂಡಿತವಾಗಿಯೂ ಅವರು ಆಗೇ ಆಗುತ್ತಾರೆ ಎನ್ನುವಂತಹ ಸಂತೋಷವು ಕೂಡ ಇತ್ತು. ಕೊನೆಯಲ್ಲಿ ರಾಜಕೀಯವಾಗಿ ನಿರ್ಣಯವನ್ನು ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಕೆಲವೊಂದು ಏರುಪೇರುಗಳಾದವು. ಶ್ರೀನಿವಾಸಪ್ರಸಾದ್‌ರವರ ಮನಸ್ಸಿಗೆ ಯಾವ ರೀತಿಯಾಗಿ ನೋವಾಯಿತೋ ಅದನ್ನು ಕೂಡ ಅವರು ನನ್ನ ಜೊತೆಯಲ್ಲಿ ಹೇಳಿ, ರಾಜಕೀಯವು ಹೇಗೆ ಇರುತ್ತದೆ ಅದನ್ನು ನಾವು ಯಾವ ರೀತಿಯಾಗಿ ಅರ್ಥ ಮಾಡಿಕೊಳ್ಳಬೇಕು ಎನ್ನುವಂತಹ ವಿಷಯಗಳನ್ನು ಅವರು ನಮಗೆ ಹೇಳಿದ್ದರು. ಹಾಗಾಗಿ ಅವರ ಹೆಸರು ಶಾಶ್ವವಾಗಿ ಉಳಿಯಬೇಕು, ಬಳ್ಳಾರಿ ಅಂದರೆ ಎಂ.ಪಿ. ಪ್ರಕಾಶ್‌ರವರು, ಅವರ ನಂತರ ಇವರು ಕೂಡ ಅದೇ ರೀತಿಯಾಗಿ ನಡೆದುಕೊಳ್ಳುತ್ತಿದ್ದಾರೆನ್ನುವಂತಹ ಕೆಲಸವನ್ನು ಮಾಡುವುದರಿಂದ ಅವರ ಆತ್ಮಕ್ಕೆ ಕೂಡ ಒಂದು ತೃಪ್ತಿಯಾಗುತ್ತದೆ ಎನ್ನುವಂತಹ ಮಾತನ್ನು ಹೇಳುತ್ತಾ ಈ ನನ್ನ ಎರಡು ಮಾತುಗಳನ್ನು ನಾನು ಮುಕ್ತಾಯ ಮಾಡುತ್ತೇನೆ.

+ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಗುಂಡ್ಲುಪೇಟೆ): ಮಾನ್ಯ ಸಭಾಧ್ಯಕ್ಷರೆ, ತಾವು ಮಂಡಿಸಿರತಕ್ಕಂತಹ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸುತ್ತಾ ವಿಶೇಷವಾಗಿ ಎಂ.ಪಿ. ಪ್ರಕಾಶ್‌ರವರ ಬಗ್ಗೆ ಈಗಾಗಲೇ ಸಭಾನಾಯಕರು, ವಿರೋಧ ಪಕ್ಷದ ನಾಯಕರು ಇತರ ಎಲ್ಲಾ ಹಿರಿಯ ಸದಸ್ಯರುಗಳು ಮಾತನಾಡಿದ್ದಾರೆ. ಎಂ.ಪಿ. ಪ್ರಕಾಶ್‌ರವರು ಒಬ್ಬ ಅಜಾತಶತ್ರು ಎಂದು ಹೇಳುವುದರಲ್ಲಿ ಎರಡನೇಯ ಮಾತಿಲ್ಲ. ಅಂತಹ ಒಬ್ಬ ಧೀಮಂತ ಮತ್ತು ಬಹುಮುಖ ವ್ಯಕ್ತಿತ್ವವುಳ್ಳ ಒಬ್ಬ ಸುಸಂಸ್ಕೃತ ರಾಜಕಾರಣಿಗಳನ್ನು ಕರ್ನಾಟಕದ ರಾಜಕಾರಣದಲ್ಲಿ ನೋಡುವುದು ಬಹಳ ವಿರಳ. ಅದರಲ್ಲೂ "ಆಡು ಮುಟ್ಟದ ಸೊಪ್ಪಿಲ್ಲ" ಎಂದು ಹೇಳುವಂತಹ ರೀತಿಯಲ್ಲಿ ಪ್ರಕಾಶ್‌ರವರು ಕೈಹಾಕದೆ ಇರುವಂತಹ ಕ್ಷೇತ್ರವಿಲ್ಲ, ಅವರು ರಾಜಕೀಯ ಕ್ಷೇತ್ರವೊಂದೇ ಅಲ್ಲ, ಎಲ್ಲಾ ರೀತಿಯ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಏನೇನು ಬರುತ್ತವೆಯೋ ಅವರೆಲ್ಲದರಲ್ಲಿಯೂ ಪಾಲ್ಗೊಂಡಿದ್ದರು. ಸಾಹಿತ್ಯ ಕಲೆ, ನಾಟಕ, ರಂಗಭೂಮಿ, ಬರವಣಿಗೆ, ಅಂಕಣಕಾರ, ಅನುವಾದ ಮಾಡುವಂಥಹದ್ದು. ಈ ರೀತಿಯಾದಂತಹ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡವ ರಾಗಿದ್ದರು. ಬಹುಶಃ ರಾಜಕೀಯಕ್ಕೆ ಒಂದು ಸಲ ಪಾದಾರ್ಪಣೆ ಮಾಡಿದ

ಮೇಲೆ ಅವರುಗಳು ಇತರ ಹವ್ಯಾಸಗಳಲ್ಲಿ ಭಾಗಿಯಾಗುವಂತಹದ್ದು ಬಹಳ ಕಡಿಮೆ. ಆದರೆ ಮಾನ್ಯ ಪ್ರಕಾಶ್‌ರವರಲ್ಲಿ ಆ ಒಂದು ವಿಶೇಷತೆ ಏನೆಂದರೆ, ಅವರು ರಾಜಕೀಯದ ಜೊತೆಜೊತೆಯಲ್ಲಿಯೇ ತಮ್ಮ ಎಲ್ಲಾ ಹವ್ಯಾಸಗಳನ್ನು ಮತ್ತು ಸಂಪರ್ಕಗಳನ್ನು ಮೈಗೂಡಿಸಿಕೊಂಡು ಅದನ್ನು ಜೊತೆಜೊತೆಯಲ್ಲಿಯೇ ಕರೆದುಕೊಂಡು ಹೋಗುವಂತಹ ಒಂದು ಸಾಮರ್ಥ್ಯ ಅವರಲ್ಲಿ ಇದ್ದಂತಹದ್ದನ್ನು ನಾವೆಲ್ಲರೂ ಗಮನಿಸಿದ್ದೇವೆ. ಅದೇ ರೀತಿಯಾಗಿ ಅವರು ವಿಧಾನಸಭೆ ಚುನಾವಣೆಗಳಲ್ಲಿ ಅವರು ಗೆದ್ದಿದ್ದಾರೆ ಮತ್ತು ಸೋತಿದ್ದಾರೆ, ಈಗಾಗಲೇ ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿದ ರೀತಿಯಲ್ಲಿ ಅವರು ಚುನಾವಣೆಯಲ್ಲಿ ಗೆದ್ದಂತಹ ಸಂದರ್ಭದಲ್ಲಿಯೂ ಕೂಡ ಅವರು ಸರ್ಕಾರದಲ್ಲಿ ಮಂತ್ರಿಗಳಾಗಿ ಕೆಲಸವನ್ನು ಮಾಡಿದ್ದಾರೆ. ಕೊನೆಗೆ ಉಪಮುಖ್ಯಮಂತ್ರಿಗಳಾಗಿಯೂ ಕೂಡ ಕೆಲಸವನ್ನು ಮಾಡುವಂತಹ ಅವಕಾಶ ಅವರಿಗೆ ದೊರಕಿತ್ತು. ಸುಮಾರು 18 ಇಲಾಖೆಗಳ ನಿರ್ವಹಣೆಯನ್ನು ಮಾಡಿದಂತಹ ಕೀರ್ತಿ ಮಾನ್ಯ ಪ್ರಕಾಶ್‌ರವರಿಗೆ ಸಲ್ಲುತ್ತದೆ. ಅದೇ ರೀತಿಯಾಗಿ ಸದನದಲ್ಲಿ 12 ಇಲಾಖೆಗಳಿಗೆ ಏಕಕಾಲಕ್ಕೆ ಒಂದೇ ದಿನ ಉತ್ತರವನ್ನು ನೀಡಿದಂತಹ ಒಂದು ಕೀರ್ತಿ ಕೂಡ ಇವರಿಗೆ ಸಲ್ಲುತ್ತದೆ. ಹಾಗಾಗಿ ಅವರು ಮಾನ್ಯ ಜನಾರ್ಧನರೆಡ್ಡಿಯವರು ಹೇಳಿದ ರಈತಿಯಲ್ಲಿ ಅವರು ಮುಖ್ಯಮಂತ್ರಿಯಾಗುವಂತಹ ಒಂದು ಸಾಮರ್ಥ್ಯ ಮತ್ತು ಎಲ್ಲಾ ಪ್ರತಿಭೆಗಳು ಎಲ್ಲವೂ ಇದ್ದರೂ ಕೂಡ ಅವರು ಅದನ್ನು ಆಗುವಂತಹ ಒಂದು ಸಂದರ್ಭ ಒದಗಿಬರಲಿಲ್ಲ. ಬಹುಶಃ ನಾನು 1985ನೇ ಇಸವಿಯಿಂದಲೂ ಕೂಡ ಅವರ ಜೊತೆಯಲ್ಲಿ ನಿಕಟವಾದಂತಹ ಸಂಪರ್ಕವನ್ನು ಹೊಂದಿರುವಂತಹ ಹಿನ್ನೆಲೆಯಲ್ಲಿ ಹೇಳುವುದಾದರೆ ಅವರಲ್ಲಿರುವ ಸಂಕೋಚ ಸ್ವಭಾವದಿಂದಾಗಿ ಅವರು ಆ ಸ್ಥಾನವನ್ನುಅಲಂಕರಿಸುವುದಕ್ಕೆ ಅವರಿಗೆ ಸಾಧ್ಯವಾಗಲಿಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ. ಬಹುಶಃ ಮಾಜಿ ಮುಖ್ಯಮಂತ್ರಿಯವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ರಾಜೀನಾಮೆಯನ್ನು ಕೊಟ್ಟಂತಹ ತರುವಾಯದಲ್ಲಿ ವಿಧಾನಸಭೆಯು ವಿಸರ್ಜನೆಯಾಗಿರಲಿಲ್ಲ. ಪಾರ್ಲಿಮೆಂಟ್‌ನಲ್ಲಿ ಅನುಮೋದನೆಯಾಗದೆಯೇ ವಿಧಾನಸಭೆ ವಿಸರ್ಜನೆಯಾಗುವಂತಹ ಸಂದರ್ಭ ಇರಲಿಲ್ಲ. ಆಗ ಏನಾದರೂ ಪರ್ಯಾಯವಾದ ಸರ್ಕಾರ ರಾಜ್ಯದಲ್ಲಿ ರಚನೆಯನ್ನು ಮಾಡಬೇಕೆನ್ನುವ ಒತ್ತಾಯವನ್ನು ನಾವು ಆಗ ಇದ್ದಂತಹ ಜನತಾದಳದ ಪಕ್ಷದಲ್ಲಿ ಬಂದು ಆಗ ಎಂ.ಪಿ. ಪ್ರಕಾಶ್‌ರವರ ಮುಖಾಂತರ ಹೇಗಾದರೂ ಮಾಡಿ ರಾಜ್ಯದಲ್ಲಿ ಒಂದು ಸರ್ಕಾರವನನು ಅಸ್ತಿತ್ವಕ್ಕೆ ತರಬೇಕೆಂಬ

ಪ್ರಯತ್ನವು ಬಹಳ ಗಂಭೀರವಾಗಿ ನಡೆದಂತಹ ಸಂದರ್ಭದಲ್ಲಿ, ಇನ್ನೇನು ಅದು ಕೈಗೂಡಿ ಒಂದು ಸರ್ಕಾರ ರಚನೆಯಾಗುತ್ತದೆ ಎಂದು ಆಗಿನ ಕೇಂದ್ರ ಸಚಿವರಾಗಿದ್ದಂತಹ ಶ್ರೀ ಶಿವರಾಜ್ ಪಾಟೀಲ್‌ರವರನ್ನು ಭೇಟಿ ಮಾಡಿದಂತಹ ಸಂದರ್ಭದಲ್ಲಿ ನಾನೂ ಕೂಡ ಅವರ ಜೊತೆಯಲ್ಲಿ ಹೋಗಿದ್ದೆ. ಬಹುಶಃ ನಾನು ಅಲ್ಲಿಗೆ ಹೋಗುವವರೆಗೂ ಶಿವರಾಜ್ ಪಾಟೀಲ್‌ರವರಿಗೂ ಮತ್ತು ಇವರಿಗೂ ಅಷ್ಟೊಂದು ಸಂಪರ್ಕ ಇದೆ ಎಂದು ಅನಿಸಿರಲಿಲ್ಲ. ಅಲ್ಲಿಗೆ ಹೋದಾಗ ಅವರು ಬಾಂಬೆಯಲ್ಲಿ ಲಾ ನಲ್ಲಿ ಒಟ್ಟಿಗೆ ಒಂದೇ roommates ಆಗಿ ವಿದ್ಯಾಭ್ಯಾಸ ಮಾಡುತ್ತಿದ್ದೇವೆಂದು ಶಿವರಾಜ್ ಪಾಟೀಲ್‌ರವರು ಹೇಳಿದ ಮೇಲೆ ನಮಗೆ ಗೊತ್ತಾಯಿತು. ಅಂದರೆ ಪ್ರಕಾಶ್‌ರವರು ತಮಗೆ ಇಂತಿಂತಹ ಉನ್ನತವಾದಂತಹ ಸಂಪರ್ಕಗಳು ಇದ್ದರೂ ಕೂಡ ಸ್ನೇಹಿತರೂ ಇದ್ದರೂ ಕೂಡ ಅವರು ಅದನ್ನು ಯಾವತ್ತು ರಾಜಕೀಯವಾಗಿ ಬಳಸಿಕೊಳ್ಳುವಂತಹ ಪ್ರಯತ್ನವನ್ನು ಮಾಡಲಿಲ್ಲ. ಆಗ ಅವರು ನೀವೇನಾದರೂ ಕರ್ನಾಟಕದಲ್ಲಿ ಈ ರೀತಿಯಾದಂತಹ ಒಂದು ಪ್ರಯತ್ನವನ್ನು ಮಾಡಿದರೆ ಅದಕ್ಕೆ ನಾವು ಕೂಡ ಕೇಂದ್ರದಲ್ಲಿ ನಮ್ಮ ಕಾಂಗ್ರೆಸ್ ಪಕ್ಷದಿಂದ ವಿಚಾರವನ್ನು ಮಾಡಬಹುದು ಎಂದು ಅವರು ಸಲಹೆಯನ್ನು ಕೊಟ್ಟ ಮೇಲೆ ಅದರ ಪ್ರಯತ್ನವನ್ನು ಕೂಡ ಇಲ್ಲಿ ಕರ್ನಾಟಕದಲ್ಲಿ ಬಂದು ಮಾಡಿದರು. ಆದರೆ ಅದು ಕೈಗೂಡುವಂತಹ ಸಂದರ್ಭದಲ್ಲಿ ಬೇರೆ ಬೇರೆ ರಾಜಕೀಯ ವಿದ್ಯಮಾನಗಳಾಗಿ, ಆ ಪ್ರಯತ್ನವು ವಿಫಲವಾಯಿತು. ಮತ್ತೆ 7 ದಿನಗಳ ಕಾಲ ಮಾನ್ಯ ಯಡಿಯೂರಪ್ಪನವರೆ ಮುಖ್ಯಮಂತ್ರಿಗಳಾಗಿ ಮತ್ತೆ ಪ್ರಮಾಣ ವಚನವನ್ನು ಸ್ವೀಕರಿಸಿ 7 ದಿನಗಳ ಒಂದು ಸರ್ಕಾರವನ್ನು ಅಸ್ತಿತ್ವಕ್ಕೆ ಬಂತು. ಮಾನ್ಯ ಯಡಿಯೂರಪ್ಪನವರೇ ಮತ್ತೆ ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿ ಏಳು ದಿನಗಳ ಕಾಲ ಸರ್ಕಾರ ಮತ್ತೆ ಅಸ್ತಿತ್ವಕ್ಕೆ ಬಂದಿತು. ಆ ಸಂದರ್ಭದಲ್ಲಿ ಬಹುಶಃ ರಾಜಕೀಯ ಸನ್ನಿವೇಶಗಳು ಪೂರಕವಾಗಿ ನಡೆದಿದ್ದರೆ ಪ್ರಕಾಶ್‌ರವರು ಕೂಡ ಈ ರಾಜ್ಯದಲ್ಲಿ ಮುಖ್ಯಮಂತ್ರಿಗಳಾಗಿ ಒಂದಷ್ಟು ದಿವಸಗಳ ಕಾಲ ಅವರ ಅನುಭವಗಳನ್ನು ಪ್ರಯೋಗ ಮಾಡುವಂಥ ಅವಕಾಶಗಳು ಇರುತ್ತಿತ್ತು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಪ್ರಕಾಶ್‌ರವರು ಬಹಳ ವರ್ಷಗಳ ಕಾಲ ಕಾಂಗ್ರೆಸ್‌ನ ವಿರೋಧ ಪಕ್ಷದ ಪಾಳೆಯದಲ್ಲಿದ್ದಂಥವರು, ಜನತಾದಳದಲ್ಲಿದ್ದಂಥವರು ಈ ಕಾರಣಗಳಿಂದಲೇ ಅವರು ಜನತಾದಳವನ್ನು ತ್ಯಜಿಸಬೇಕಾಗಿ ಬಂದಿತು. ಅಂಥ ಸಂದರ್ಭದಲ್ಲಿ ಅವರು ಮುಂದೆ ಯಾವ ಪಕ್ಷವನ್ನು ಆಯ್ಕೆ ಮಾಡಬೇಕೆನ್ನುವಾಗ, ಅವರು

ಬಹಳ ವರ್ಷಗಳಿಂದ ಸಮಾಜವಾದಿ ಪಕ್ಷದ ಹಿನ್ನೆಲೆಯಿಂದ ಬಂದಿದ್ದರು ಮತ್ತು ಜಾತ್ಯಾತೀತ ನಿಲುವನ್ನು ಮೈಗೂಡಿಸಿಕೊಂಡಿದ್ದರು ಮತ್ತು ಎಲ್ಲಾ ವರ್ಗದ ಜನರ ಏಳಿಗೆಗಾಗಿ ತುಂಬಾ ಕಳಕಳಿಯನ್ನು ಹೊಂದಿದ್ದರೋ ಆ ಕಾರಣದಿಂದಲೇ ಕಾಂಗ್ರೆಸ್ ಪಕ್ಷವನ್ನು ಸೇರಬೇಕೆನ್ನುವಂಥ ನಿರ್ಧಾರವನ್ನು ಕೈಗೊಂಡರು. ಅದರಂತೆ ನಾವು ಕೂಡ ಅವರನ್ನು ಹಿಂಬಾಲಿಸಿ ಕಾಂಗ್ರೆಸ್ ಪಕ್ಷ ಸೇರಿ ಶಾಸನಸಭೆಯಲ್ಲಿ ಬಂದು ನಿಂತಿದ್ದೇವೆ. ಬಹುಶಃ ಇವತ್ತು ಅವರ ನಿಧನಕ್ಕೆ ಸಂತಾಪ ಮಂಡಿಸತಕ್ಕಂಥ ಮಾತನ್ನು ಆಡಬೇಕಾದರೆ ನಮಗೆ ಬಹಳ ನೋವಾಗುತ್ತಿದೆ. ಏಕೆಂದರೆ ನಾವು ಅವರು ಜೊತೆಜೊತೆಯಲ್ಲಿ ಬಂದಂಥವರು. ಬಹುಶಃ ಅವರು ಒಂದೂವರೆ ವರ್ಷಗಳ ಕಾಲ ಕ್ಯಾನ್ಸರ್ ಕಾಯಿಲೆಯಿಂದ ಅನುಭವಿಸಿದಂಥ ಒಂದು ವೇದನೆ ಏನಿದೆ ಅದನ್ನು ಅವರು ಯಾವತ್ತಿಗೂ ಯಾರೊಂದಿಗೂ ಅವರ ಆರೋಗ್ಯ ವಿಚಾರಿಸಲು ಹೋದವರ ಜೊತೆಯಲ್ಲಿ ತಮ್ಮ ಕಾಯಿಲೆಯ ಬಗ್ಗೆ ಒಂದು ದಿವಸವೂ ಪ್ರಸ್ತಾಪ ಮಾಡುತ್ತಿರಲಿಲ್ಲ, ಏಕೆಂದರೆ ಅವರು ತಮ್ಮ ನೋವನ್ನು ಇನ್ನೊಬ್ಬರ ಹತ್ತಿರ ಹಂಚಿಕೊಳ್ಳುವಂಥ ಸ್ವಭಾವವನ್ನು ಹೊಂದಿರಲಿಲ್ಲ. ಹಾಗಾಗಿ ಅವರ ನೋವನ್ನು ಅವರೇ ನುಂಗಿ ತಮ್ಮ ಯೋಗಕ್ಷೇಮ ವಿಚಾರಿಸಲು ಬಂದವರ ಯೋಗ ಕ್ಷೇಮವನ್ನು ವಿಚಾರಿಸುವಂಥ ದೊಡ್ಡ ಗುಣ ಎಂ.ಪಿ. ಪ್ರಕಾಶ್‌ರವರಲ್ಲಿತ್ತು. ಈ ಸಾಂಸ್ಕೃತಿಕ ಕ್ಷೇತ್ರಕ್ಕೂ, ರಾಜಕೀಯಕ್ಕೂ, ಸರ್ಕಾರಕ್ಕೂ ಒಂದು ಕೊಂಡಿಯಾಗಿ ಎಂ.ಪಿ. ಪ್ರಕಾಶ್‌ರವರು ಕಾರ್ಯನಿರ್ವಹಿಸಿದ್ದರು ಎಂದು ಹೇಳಿದರೆ ತಪ್ಪಾಗಲಾರದು. ಶ್ರೀ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ರಂಗಾಯಣ ಸಂಸ್ಥೆ ಸ್ಥಾಪನೆಯಾಗಲಿಕ್ಕೆ ಅವರು ಮೂಲ ಕಾರಣಕರ್ತರಾಗಿದ್ದರು. ಸಿಂಗಟನೂರು ಏತ ನೀರಾವರಿ ಚಾಲನೆ ಕೊಟ್ಟಂಥವರು. ಹಂಪಿ ಉತ್ಸವ ಪ್ರಾರಂಭವಾಗುವುದಕ್ಕೆ ಮೂಲ ಕಾರಣಕರ್ತರು ಪ್ರಕಾಶ್‌ರವರು ಆಗಿದ್ದರು ಮತ್ತು ಅಲ್ಲಿರತಕ್ಕಂಥ ಒಂದೊಂದು ಬಂಡೆಗೂ ಒಂದೊಂದು ಇತಿಹಾಸವನ್ನು ಸೃಷ್ಟಿ ಮಾಡುವಂಥ ಕೆಲಸವನ್ನು ಅವರು ಮಾಡಿದ್ದರು. ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಲಿಕ್ಕೂ ಸಹ ಪ್ರಕಾಶ್‌ರವರ ತೀವ್ರಾಸಕ್ತಿಯೂ ಕಾರಣವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಹಡಗಲಿಯಲ್ಲಿ ಅಪೂರ್ಣಗೊಂಡಿರುವ ರಂಗಮಂದಿರಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ಎಂ.ಪಿ. ಪ್ರಕಾಶ್‌ರವರನ್ನು ಕೇವಲ ಬಳ್ಳಾರಿ ಜಿಲ್ಲೆ ಅಥವಾ ಹಡಗಲಿ ಜಿಲ್ಲೆಗಳಾಗಲಿ

ಸೀಮಿತಗೊಳಿಸುವುದು ಸೂಕ್ತವಲ್ಲ ಅವರು ಇಡೀ ಉತ್ತರ ಕರ್ನಾಟಕ ಹಾಗೂ ನಮ್ಮ ಮೈಸೂರು ಭಾಗಕ್ಕೆ ಒಂದು ಕೊಂಡಿಯಾಗಿದ್ದರು. ಎಲ್ಲಾ ವಿಚಾರಗಳಲ್ಲಿಯೂ ಸಹ ಅಂದರೆ ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ವಿಚಾರಗಳಿರಲಿ ಎಲ್ಲದರಲ್ಲಿಯೂ ಕೂಡ ನಮ್ಮ ಹಳೆ ಮೈಸೂರು ಭಾಗದಲ್ಲಿ ಪ್ರತಿ ತಾಲ್ಲೂಕಿನಲ್ಲಿಯೂ 50–100 ಜನರ ಹೆಸರು ಹಿಡಿದು ಮಾತನಾಡಿಸುವಂಥ ಒಂದು ಸಂಬಂಧ ಪ್ರಕಾಶರವರದ್ದಾಗಿತ್ತು. ಹಾಗಾಗಿ ರಾಜ್ಯ ಮಟ್ಟದಲ್ಲಿ ಅವರ ಹೆಸರಿನಲ್ಲಿ ಯಾವುದಾದರೊಂದು ಶಾಶ್ವತವಾದ ಪ್ರಶಸ್ತಿಯನ್ನಾಗಲಿ ಅಥವಾ ಕಾರ್ಯಕ್ರಮವನ್ನಾಗಲಿ ಮಾಡುವುದಕ್ಕೆ ಸರ್ಕಾರ ಚಿಂತನೆ ಮಾಡಬೇಕು. ಅವರ ಒಂದು ಕನಸಿನ ಕೂಸು ರಂಗಭಾರತಿ. ಅವರ ಜೊತೆಯಲ್ಲಿ ರಂಗಭಾರತಿ ಎನ್ನುವ ಸಂಸ್ಥೆಯನ್ನು ಹುಟ್ಟು ಹಾಕಿಕೊಂಡು ತಮ್ಮ ಇತಿಮಿತಿಯಲ್ಲಿ ಅದನ್ನು ನಡೆಸಿಕೊಂಡು, ನಾಟಕಗಳನ್ನು ನಡೆಸತಕ್ಕಂಥ ಕೆಲಸಗಳನ್ನು ಮಾಡಿಕೊಂಡು ಈಗಲೂ ಕೂಡ ಹಡಗಲಿಯಲ್ಲಿ ಆ ಸಂಸ್ಥೆಯನ್ನು ಮಾಡಿದ್ದಾರೆ, ಈಗ ಅದನ್ನು ಅವರ ಮಗ ಅದರ ಅಧ್ಯಕ್ಷರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಆ ರಂಗಭಾರತಿಗೆ ಒಂದು ಶಾಶ್ವತ ಅನುದಾನ ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ತಿಳಿಸಲಿಕ್ಕೆ ಬಯಸುವುದೇನೆಂದರೆ ಯಾವ ರೀತಿ ಈ ಶಿವಸಂಚಾರಿಕೆ, ನೀನಾಸಂ ಈ ರೀತಿಯ ಅಕಾಡೆಮಿಗಳಿಗೆ ಪ್ರತಿ ವರ್ಷ ವಾರ್ಷಿಕ ಅನುದಾನವನ್ನು ಕೊಡುತ್ತೀರಿ, ಆ ರೀತಿಯಲ್ಲಿ ಈ ರಂಗಭಾರತಿಗೂ ಕೂಡ ಶಾಶ್ವತವಾಗಿ 15–20 ಲಕ್ಷ ರೂಪಾಯಿಗಳನ್ನು ಕೊಡುವಂಥ ಕೆಲಸವನ್ನು ಮಾಡಿ ಅವರ ಸಂಸ್ಥೆ ನಾಟಕ ಇನ್ನಿತರ ಸಾಂಸ್ಕೃತಿಕ ಚಟುವಟಿಕೆಯಲ್ಲಿ ನಿರಂತರವಾಗಿ ತೊಡಗುವಂಥ ಕೆಲಸವನ್ನು ಮಾಡಬೇಕು ಇಲ್ಲವಾದಲ್ಲಿ ಅವರ ಜೊತೆಯಲ್ಲಿ ಆ ಸಂಸ್ಥೆ ಮಾಯವಾಗುವಂಥ ಸಂದರ್ಭ ಆಗಬಾರದು ಎಂದು ಹೇಳುವುದಕ್ಕೆ ಬಯಸುತ್ತೇನೆ. ಪ್ರತಿ ವರ್ಷ ಹಂಪಿ ಉತ್ಸವ ನಡೆಯುತ್ತದೆ. ಆ ಸಂದರ್ಭದಲ್ಲಿ ಪ್ರಕಾಶ್‌ರವರ ವೇದಿಕೆಯನ್ನು ನಿರ್ಮಾಣ ಮಾಡಿ ರಂಗಭೂಮಿ ಅಥವಾ ಸಾಂಸ್ಕೃತಿಕ ಕ್ಷೇತ್ರದಲ್ಲಿ ವಿಶೇಷ ಕೊಡುಗೆ ನೀಡಿದಂಥವರನ್ನು ಗುರುತಿಸಿ ಎಂ.ಪಿ. ಪ್ರಕಾಶ್ ಪ್ರಶಸ್ತಿ ಎನ್ನುವ ಹೆಸರಿನಲ್ಲಿ ಹಂಪಿ ಉತ್ಸವದಲ್ಲಿ ನೀಡುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು ಆಗ ಅವರನ್ನು ನೆನಪಿಸಲಿಕ್ಕೆ ಅಲ್ಲದೆ ಅವರು ಇಷ್ಟೆಲ್ಲಾ ಸೇವೆಯನ್ನು ಸಲ್ಲಿಸಿದ್ದಕ್ಕೆ ಸಾರ್ಥಕತೆ ಬರುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಅವರ ಒಂದು ಆಳವಾದ ಅಧ್ಯಯನದ ಬಗ್ಗೆ ಹೇಳುವುದಾದರೆ ಅವರು ಸದಾ ಪುಸ್ತಕ ಪ್ರೇಮಿಯಾಗಿರುತ್ತಿದ್ದರು.

ನಿಜಲಿಂಗಪ್ಪನವರ ಬಯೋಗ್ರಾಫಿಯನ್ನು ಕನ್ನಡಕ್ಕೆ ಅನುವಾದ ಮಾಡಿರುವಂಥ ಜನಪ್ರಿಯ ಕೃತಿಯನ್ನು ಅವರು ರಚಿಸಿದ್ದಾರೆ. ಅದಲ್ಲದೆ ಅನೇಕ ಕೃತಿಗಳನ್ನು ಅವರು ರಚಿಸಿದ್ದಾರೆ. ಹಲವಾರು ಗ್ರಂಥಗಳ ಅನುವಾದಗಳನ್ನು ಮಾಡಿದ್ದಾರೆ. ಅವುಗಳನ್ನೆಲ್ಲಾ ನಮ್ಮ ಗ್ರಂಥಾಲಯ ಇಲಾಖೆಯ ಮೂಲಕ ಖರೀದಿಸಿ ಎಲ್ಲಾ ಗ್ರಂಥಾಲಯಗಳಲ್ಲಿ ಅದು ನಮ್ಮ ಮುಂದಿನ ಪೀಳಿಗೆಗೆ ಲಭ್ಯವಾಗುವಂಥ ಕ್ರಮ ಕೈಗೊಳ್ಳಬೇಕೆಂಬ ಮಾತನ್ನು ಹೇಳಿ ಅವರ ಕುಟುಂಬಕ್ಕೆ ಅವರ ನಿಧನದಿಂದ ಉಂಟಾಗಿರುವ ನಷ್ಟವನ್ನು ಭರಿಸುವಂಥ ಶಕ್ತಿ ನೀಡಲು ಎಂದು ಹೇಳಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಶ್ರೀ ಚಂದ್ರ ನಾಯ್ಕ ಮಾತನಾಡಿ.

ಶ್ರೀ ಬಿ. ಚಂದ್ರ ನಾಯ್ಕ (ಹಡಗಲಿ): ಮಾನ್ಯ ಸಭಾಧ್ಯಕ್ಷರೆ, ಈ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸುತ್ತಾ ಇತ್ತೀಚೆಗೆ ನಿಧನರಾದ ಮಾಜಿ ಉಪ ಮುಖ್ಯಮಂತ್ರಿಗಳು ಹಾಗೂ ಮಾಜಿ ಸಚಿವರಾಗಿದ್ದ ದಿವಂಗತ ಶ್ರೀ ಎಂ.ಪಿ. ಪ್ರಕಾಶ್‌ರವರು ರಾಜ್ಯ ಕಂಡ ಅಪರೂಪದ ವ್ಯಕ್ತಿಯಾಗಿದ್ದರು. ನಾನು ಪ್ರತಿನಿಧಿಸುತ್ತಿರುವ ಹೂವಿನ ಹಡಗಲಿ ಕ್ಷೇತ್ರದಿಂದ ಹಲವಾರು ಬಾರಿ ಶಾಸಕರಾಗಿ ಆಯ್ಕೆಯಾಗಿ ಹಲವಾರು ಅಭಿವೃದ್ಧಿಯ ಕಾರ್ಯಗಳನ್ನು ಕ್ಷೇತ್ರಗಳಲ್ಲಿ ಕೈಗೊಂಡು ಕ್ಷೇತ್ರದ ಜನಸಾಮಾನ್ಯರಲ್ಲಿ ಇಂದಿಗೂ ಚಿರಋಣಿಯಾಗಿದ್ದಾರೆ. ಸೋಲು ಗೆಲುವನ್ನು ಸಮಚಿತ್ತದಿಂದ ಸ್ವೀಕರಿಸುತ್ತಿದ್ದ ದಿವಂಗತರು ಗೆದ್ದಾಗ ಕ್ಷೇತ್ರದ ಅಭಿವೃದ್ಧಿಯ ಕಡೆಗೆ ಹೆಚ್ಚಿನ ಗಮನವನ್ನು ಹರಿಸುತ್ತಾ ಸೋತಾಗಲೂ ಸಹ ಕ್ಷೇತ್ರದ ಅಭಿವೃದ್ಧಿಯ ಜೊತೆ ಜೊತೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಸರಳ ಜೀವನ ನಡೆಸುತ್ತಾ ಯಾವಾಗಲೂ ಜನಸಾಮಾನ್ಯರ ಹಿತವನ್ನೇ ಬಯಸುತ್ತಿದ್ದ ದಿವಂಗತ ಎಂ.ಪಿ. ಪ್ರಕಾಶ್‌ರವರ ಸಾವು ರಾಜಕೀಯ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. ಮೃತರ ಆತ್ಮಕ್ಕೆ ದೇವರು ಚಿರಶಾಂತಿಯನ್ನು ನೀಡಲೆಂದು ಹಾಗೂ ಅವರ ಕುಟುಂಬ ವರ್ಗದವರಿಗೆ ನೋವನ್ನು ಭರಿಸುವಂಥ ಶಕ್ತಿಯನ್ನು ನೀಡಲೆಂದು ಆ ದೇವರಲ್ಲಿ ಪ್ರಾರ್ಥಿಸುತ್ತೇನೆ ಹಾಗೂ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕಲ್ಪಿಸಿ ಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರಗಳು.

ಅಧ್ಯಕ್ಷರು: ಶ್ರೀ ಕರಡಿ ಸಂಗಣ್ಣ ಅಮರಪ್ಪ ಮಾತನಾಡಿ.

+ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ): ಇಂದಿನ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಮಾನ್ಯ ಎಂ.ಪಿ. ಪ್ರಕಾಶ್‌ರವರು ಒಬ್ಬ ಮೇಧಾವಿ ರಾಜಕಾರಣಿಗಳು. ಇವರು ಮೇರು ಪರ್ವತದಂತೆ ಬೆಳೆದಿರುವಂಥ ವ್ಯಕ್ತಿ. ಪ್ರಕಾಶ್‌ರವರ ನಿಧನದಿಂದ ನಮ್ಮ ಕನ್ನಡ ನಾಡಾದ ಕರ್ನಾಟಕ ಬಡವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹಾಗೆ ಅವರು ಒಬ್ಬ ಅತ್ಯುತ್ತಮ ಸುಸಂಸ್ಕೃತ ರಾಜಕಾರಣಿಗಳಾಗಿದ್ದರು ಮತ್ತು ಸಮಾಜವಾದ ಚಿಂತಕರು ಆಗಿದ್ದರು. ಬಹಳ ಸರಳ, ಸಜ್ಜನ ವ್ಯಕ್ತಿಯಾಗಿದ್ದರು. ಅನೇಕ ರಾಜ್ಯಗಳಲ್ಲಿ ಅನೇಕ ಜನ ಅಭಿಮಾನಿಗಳನ್ನು ಗಳಿಸಿಕೊಂಡಿರುವಂಥ ವ್ಯಕ್ತಿಯಾಗಿದ್ದರು. ಇವತ್ತು ರಂಗ ಕಲಾವಿದರ ಬಳಗ ಇವರ ಅಭಿಮಾನಿಗಳ ಬಳಗ, ಸಾಹಿತ್ಯದಲ್ಲಿಯೂ ಕೂಡ ಅವರ ಅಭಿಮಾನ ಬಳಗವನ್ನು ನೋಡಿದ್ದೇವೆ. ರಾಜಕಾರಣದಲ್ಲಿಯೂ ಕೂಡ ಅವರ ಅಭಿಮಾನಿ ಬಳಗವನ್ನು ಮತ್ತು ಇನ್ನಿತರ ಬುದ್ಧಿ ಜೀವಿಗಳಲ್ಲಿಯೂ ಅವರ ಅಭಿಮಾನಿ ಬಳಗವನ್ನು ನೋಡಿದ್ದೇವೆ. ಕರ್ನಾಟಕದಲ್ಲಿ ಅತ್ಯಂತ ಚಿರಪರಿಚಿತ ವ್ಯಕ್ತಿ ಯಾರಾದರೂ ಇದ್ದರೆ ಮಾನ್ಯ ಪ್ರಕಾಶ್‌ರವರು ಎಂದು ನಾವು ಭಾವಿಸಬೇಕು. ಅವರ ಅಧ್ಯಯನಶೀಲತೆಯನ್ನು ನೋಡಿದಾಗ ಅವರನ್ನು ಸರ್ವಜ್ಞನ ಸಾಲಿಗೆ ಸೇರಿಸುವಂಥದ್ದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯ. ಅಂಥ ಜ್ಞಾನ ಸಂಪನ್ನತೆಯನ್ನು ಪಡೆದುಕೊಂಡಿರುವಂಥ ಒಬ್ಬ ವ್ಯಕ್ತಿಯಾಗಿದ್ದರು. ಇವತ್ತು ಇರತಕ್ಕಂಥ ಯುವ ಪೀಳಿಗೆ ಅವರ ಮಾರ್ಗದರ್ಶನ, ತತ್ವಗಳ ವಿಚಾರಗಳು ಅವರು ನಾಡಿಗೆ ಕೊಟ್ಟಿರುವ ಕೊಡುಗೆ, ಆ ಕೊಡುಗೆಯ ಹಿನ್ನೆಲೆಯಲ್ಲಿ ಅವರು ನಡೆದು ಬಂದ ಹಾದಿಯನ್ನು ಮೆಲುಕು ಹಾಕಬೇಕಾಗುತ್ತದೆ.

ಅವರು ನಡೆದು ಬಂದ ಹಾದಿಯನ್ನು ಇವತ್ತು ನಾವೆಲ್ಲರೂ ಕೂಡ ಮೆಲುಕು ಹಾಕಬೇಕಾಗುತ್ತದೆ. ಅದಲ್ಲದೇ ಅವರ ಬಗ್ಗೆ ಒಂದು ಮಾತನ್ನು ಹೇಳುವುದಾದರೆ ಇವತ್ತು ಹಂಪಿಯ ವಿಜಯನಗರದ ವೈಭವವನ್ನು ಇಡೀ ಜಗತ್ತೇ ಮೆಲುಕು ಹಾಕುವಂತಹ ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಒಬ್ಬ ವ್ಯಕ್ತಿ ಅವರು. ಹಂಪಿ ಉತ್ಸವದಿಂದ ನಮ್ಮ ನಾಡಿನ ಹಿರಿಮೆಯನ್ನು, ಈ ರಾಜ್ಯದ ವೈಭವವನ್ನು ಮತ್ತೆ ಮರುಕಳಿಸುವಂತೆ ಹಂಪಿ ಉತ್ಸವದ ಮೂಲಕ ನಮ್ಮ ನಾಡಿನ ಹಿರಿಮೆಯನ್ನು ಎತ್ತಿ ಹಿಡಿಯತಕ್ಕಂತಹ ಒಬ್ಬ ನಾಯಕ ಎಂದರೆ ತಪ್ಪಾಗಲಿಕ್ಕಿಲ್ಲ ಎಂದು ಈ ಸಂದರ್ಭದಲ್ಲಿ ನಾನು ಭಾವಿಸುತ್ತೇನೆ. ದೇವರು ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡುವುದರ ಜೊತೆಗೆ ಅವರ ಕುಟುಂಬಕ್ಕೆ

ಕೂಡ ದುಃಖವನ್ನು ಭರಿಸತಕ್ಕ ಶಕ್ತಿಯನ್ನು ದಯಪಾಲಿಸಲಿ ಎಂದು ಈ ಸಂದರ್ಭದಲ್ಲಿ ಹಾರೈಸುತ್ತೇನೆ. ಅದರ ಜೊತೆಗೆ ಇವತ್ತು ಅನೇಕ ನಾಯಕರು ನಮ್ಮನ್ನು ಅಗಲಿದ್ದಾರೆ. ಇವತ್ತು ಪಂಡಿತ್ ಭೀಮ್‌ಸೇನ್ ಜೋಷಿಯವರು ಇರಬಹುದು, ಮೊಹಮದ್ ಉಮರ್ ಅಬ್ದುಲ್ ರೆಹಮಾನ್ ಇರಬಹುದು. ಹಾಗೂ ಬಸವರಾಜ್ ಗುಡಿಗೇರಿಯವರು ಕೂಡ ಒಬ್ಬ ಕಲಾವಿದರಾಗಿದ್ದರು. ಅವರು ತಮ್ಮದೇ ಆದಂತಹ ನಾಟಕ ರಂಗಭೂಮಿಯಲ್ಲಿ ಒಂದು ಕಂಪನಿಯನ್ನು ಕಟ್ಟಿ ಅನೇಕ ಕಲಾವಿದರನ್ನೊಳಗೊಂಡು ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ನಾಟಕ ಕಾರ್ಯಕ್ರಮಗಳನ್ನು ಏರ್ಪಡಿಸಿ ಇಡೀ ಸಮಾಜದಲ್ಲಿ ಇವತ್ತು ನೀತಿ ಕನ್ನಡಿ ಅಥವಾ ಕೈಗನ್ನಡಿಯಾಗಿ ನಾಟಕ ರಂಗದಲ್ಲಿ ಅನೇಕ ಬೆಳವಣಿಗೆಗಳನ್ನು ಕಂಡಿರತಕ್ಕಂತಹ ಒಬ್ಬ ವ್ಯಕ್ತಿಯನ್ನು ನಾವು ಕಳೆದು ಕೊಂಡಿದ್ದೇವೆ. ಅವರೆಲ್ಲರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ನಾನು ಆಶಿಸುತ್ತೇನೆ.

ಶಬರಿಮಲೆ ಅರಣ್ಯದಲ್ಲಿ ಉಂಟಾದ ದುರಂತದಲ್ಲಿ ನೂರಕ್ಕೂ ಹೆಚ್ಚು ಜನ ಇವತ್ತು ನಮ್ಮನ್ನು ಅಗಲಿದ್ದಾರೆ. ನಮ್ಮ ಕರ್ನಾಟಕ ರಾಜ್ಯದ ಮಂತ್ರಿಗಳಾದ ಸಹೋದರಿ ಶೋಭಾ ಕರಂದ್ಲಾಜೆಯವರು ಕೂಡ ಆ ಸ್ಥಳಕ್ಕೆ ಹೋಗಿ ಸಹಾಯ ಮಾಡುವುದರ ಜೊತೆಗೆ ಆ ಕಷ್ಟದಲ್ಲಿ ಭಾಗಿಯಾಗಿದ್ದಾರೆ. ಸರ್ಕಾರ ಕೂಡ ಮೆಚ್ಚುಗೆ ಕೆಲಸವನ್ನು ಆ ಸಂದರ್ಭದಲ್ಲಿ ಮಾಡಿದೆ. ಮಾನ್ಯ ಜನಾರ್ಧನ ರೆಡ್ಡಿಯವರು ಸಹ ಹಂಪಿ ಉತ್ಸವದಲ್ಲಿ ಅವರ ಹಾದಿಯಲ್ಲಿ ನಡೆಯುತ್ತಿದ್ದಾರೆ. ಇನ್ನೂ ಅಲ್ಲಿ ನಡೆದು ಬರತಕ್ಕಂತಹ ಹೆಚ್ಚು ಕಾರ್ಯಕ್ರಮಗಳನ್ನು ಸಂಘಟಿಸಲಿ ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

+**ಡಾ: ಹೆಚ್.ಸಿ. ಮಹದೇವಪ್ಪ (ಟಿ. ನರಸೀಪುರ):** ಸನ್ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚನೆಯನ್ನು ಬೆಂಬಲಿಸುತ್ತಾ, ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರು, ಪಿ. ತಿಪ್ಪಯ್ಯನವರು, ಮೊಹಮದ್ ಉಮರ್ ಅಬ್ದುಲ್ ರೆಹಮಾನ್‌ರವರು, ಹಿಂದೂಸ್ಥಾನಿ ಸಂಗೀತದ ಖ್ಯಾತ ಗಾಯಕ ಪಂಡಿತ್ ಭೀಮ್‌ಸೇನ್ ಜೋಶಿ, ರಂಗಭೂಮಿ ಹಿರಿಯ ನಟ ಶ್ರೀ ಬಸವರಾಜ್ ಗುಡಿಗೇರಿ ಮತ್ತು ಶಬರಿಮಲೆ ಅರಣ್ಯದಲ್ಲಿ ಉಂಟಾದ ದುರಂತದಲ್ಲಿ ನೂರಕ್ಕೂ ಹೆಚ್ಚು ಜನ ನಿಧನ ಹೊಂದಿದರು. ಅವರನ್ನು ಕಳೆದುಕೊಂಡ ಅವರ ಕುಟುಂಬದ ಸದಸ್ಯರಿಗೆ

ಭಗವಂತ ಧೈರ್ಯವನ್ನು ಶಕ್ತಿಯನ್ನು ತುಂಬಲಿ ಎಂದು ಹೇಳಿ ಈ ಸಂತಾಪ ಸೂಚನೆಯನ್ನು ಬೆಂಬಲಿಸುತ್ತಾ ನಾನು ನನ್ನ ಒಂದೆರಡು ಅಭಿಪ್ರಾಯಗಳನ್ನು ಹಂಚಿಕೊಳ್ಳುವುದಕ್ಕೆ ಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರು ಮತ್ತು ಇನ್ನಿತರ ಅಗಲಿದ ಮುಖಂಡರ ಬಗ್ಗೆ ಸದನದ ನಾಯಕರು ಮುಖ್ಯಮಂತ್ರಿಗಳು ಮತ್ತು ವಿರೋಧ ಪಕ್ಷದ ನಾಯಕರು, ಇನ್ನಿತರ ಹಿರಿಯ ಮುಖಂಡರುಗಳು, ಸನ್ಮಾನ್ಯ ಸದಸ್ಯರುಗಳು ತಮ್ಮ ಸಂತಾಪ ಸೂಚನೆಯ ಮಾತುಗಳಲ್ಲಿ ಅವರನ್ನು ಹಾಡಿ ಹೊಗಳಿದ್ದಾರೆ. ಮನುಷ್ಯನ ಸ್ವಾಭಾವ ಹೇಗಿರುತ್ತದೆ ಎಂದರೆ, ಒಬ್ಬ ವ್ಯಕ್ತಿ ನಮ್ಮ ಮುಂದೆ ಬದುಕಿದ್ದಾಗ ಅವರ ಬಗ್ಗೆ ಇರತಕ್ಕಂತಹ ಅಭಿಪ್ರಾಯಗಳು ಒಂದು ರೀತಿಯಲ್ಲಿ ಇರುತ್ತವೆ ಮತ್ತು ಅವರು ನಮ್ಮನ್ನು ಅಗಲಿದಾಗ ಅವರನ್ನು ಹಾಡಿ ಹೊಗಳುವುದು ಮತ್ತೊಂದು ಇರುತ್ತದೆ. ಇದು ಮನುಷ್ಯನ ಸ್ವಭಾವ. ಕೆಲವು ಸತ್ಯ ಇರುತ್ತದೆ, ಕೆಲವು ಮಿತ್ಯ ಇರುತ್ತದೆ ಹಾಗೂ ಕೆಲವು ಮಿಶ್ರಣ ಇರುತ್ತದೆ. ಆದರೆ, ಸಂತಾಪ ಸೂಚಕ ವಿಷಯಗಳು ಬಂದಾಗ ಯಾವುದೇ ಭಿನ್ನಾಭಿಪ್ರಾಯ ಹಾಗೂ ವ್ಯತ್ಯಾಸಗಳಿದ್ದರೂ ಕೂಡ ಅವರಲ್ಲಿರತಕ್ಕಂತಹ ಗುಣಗಳನ್ನು ಗುಣಗಾನ ಮಾಡಿ ಅವರು ನಮ್ಮನ್ನು ಅಗಲಿದ್ದಾರೆ ಎನ್ನುವ ಕಾರಣಕ್ಕೆ ನಾವು ಅವರನ್ನು ಮೆಚ್ಚಿಸುವಂತಹ, ಅವರ ಕುಟುಂಬಕ್ಕೆ ಶಕ್ತಿಯನ್ನು ತುಂಬುವಂತಹ ಪ್ರಯತ್ನವನ್ನೇ ಮಾಡಿಕೊಂಡು ಬಂದಿರುವುದು ಮನುಷ್ಯನಲ್ಲಿರತಕ್ಕಂತಹ ಒಂದು ಸ್ವಾಭಾವಿಕ ಗುಣ ಮತ್ತು ನಡತೆ. ಮಾನ್ಯ ಅಧ್ಯಕ್ಷರೆ, 1985ನೇ ಇಸವಿಯಲ್ಲಿ ವಿಧಾನ ಸಭೆಗೆ ಮೊದಲನೇ ಬಾರಿಗೆ ನಾನು ಆಯ್ಕೆಯಾದಾಗ ದಿ. ಎಂ.ಪಿ. ಪ್ರಕಾಶ್‌ರವರು ನನಗೆ ಪರಿಚಯವಾದರು. ಅಂದಿನಿಂದ ಕೊನೆಯವರೆಗೂ ಅವರು ಅತ್ಯಂತ ಹಿರಿಯ ಮಾರ್ಗದರ್ಶಕರಾಗಿ ನಮ್ಮಂತಹ ಅನೇಕ ಯುವಕರಿಗೆ ಪ್ರೋತ್ಸಾಹವನ್ನು ಕೊಟ್ಟು ರಾಜಕೀಯ ಕ್ಷೇತ್ರದಲ್ಲಿ ಬೆಳೆಯುವುದಕ್ಕೆ ಅವಕಾಶ ಮಾಡಿಕೊಟ್ಟಂತಹ ಒಬ್ಬ ಧೀಮಂತ ನಾಯಕರಲ್ಲಿ ಅವರು ಸಹ ಒಬ್ಬರು ಪ್ರಮುಖರಾಗಿದ್ದರು. ಬಾಬಾ ಸಾಹೇಬ್ ಅಂಬೇಡ್ಕರ್‌ರವರು ರಾಜಕೀಯ ಅಧಿಕಾರ ಎಂತಹವರ ಕೈಯಲ್ಲಿ ಇರಬೇಕೆಂದು ಹೇಳುವಾಗ, ರಾಜಕೀಯ ಅಧಿಕಾರ ಎನ್ನುವುದು ಯೋಗ್ಯರು, ಸಮರ್ಥರು, ವಿವೇಚನೆಯುಳ್ಳವರ ಕೈಯಲ್ಲಿಯಬೇಕೆಂದು ಎನ್ನುವ ಮಾತನ್ನು ಹೇಳಿದ್ದರು. ಅಂತಹ ಯೋಗ್ಯ, ಸಮರ್ಥನೆ ಮತ್ತು ವಿವೇಚನೆಯುಳ್ಳಂತಹ ರಾಜಕಾರಣಿಗಳಲ್ಲಿ ದಿ. ಎಂ.ಪಿ. ಪ್ರಕಾಶ್‌ರವರು ಒಬ್ಬರಾಗಿದ್ದರು. ರಾಜ್ಯಾಂಗದ ಆಸೆಗಳು ಈಡೇರತಕ್ಕಂತಹ

ಜಾಗದಲ್ಲಿ ಅದರ ಪರವಾಗಿರತಕ್ಕಂತಹ ಜನರು ಇರಬೇಕೆಂದು ಅವರು ಬಯಸುತ್ತಿದ್ದರು. ಅಂತಹ ವ್ಯಕ್ತಿತ್ವವನ್ನು, ಅಂತಹ ನಾಯಕತ್ವದ ಗುಣವನ್ನು ದಿ. ಎಂ.ಪಿ. ಪ್ರಕಾಶ್‌ರವರು ಹೊಂದಿದ್ದರು. ಜೊತೆಗೆ ಅವರು ನಮ್ಮನ್ನು ಅಗಲಿದ್ದಾರೆ, ಮತ್ತೆ ಅವರನ್ನು ನಾವು ಕಾಣುವುದಕ್ಕೆ ಆಗುವುದಿಲ್ಲ. ಆದರೆ, ನಮ್ಮನ್ನು ಅಗಲಿದ್ದಾರೆ, ಮತ್ತೆ ಅವರನ್ನು ನಾವು ಕಾಣುವುದಕ್ಕೆ ಆಗುವುದಿಲ್ಲ. ಆದರೆ, ನಾವು ಮಾಡಬೇಕಾಗಿರುವುದು ಏನು? ಹುಟ್ಟು ಅನಿವಾರ್ಯ, ಸಾವು ಖಂಡಿತವಾಗಿ ಆಗಲೇಬೇಕು. ಇದು ಬುದ್ಧನ ಸತ್ಯ ಸಂದೇಶ. ಪ್ರಪಂಚದಲ್ಲಿ ಸತ್ಯ ಸಂದೇಶವನ್ನು ಹೇಳಿದವರು ಬುದ್ಧ. ಹುಟ್ಟಿದ ಮನುಷ್ಯನಿಗೆ ಸಾವು ಎನ್ನುವುದು ಅನಿವಾರ್ಯವಾಗಲೇಬೇಕು. ಹುಟ್ಟು-ಸಾವಿನ ನಡುವೆ ಒಬ್ಬ ಮನುಷ್ಯ ಮನುಕುಲದ ಉದ್ಧಾರಕ್ಕೆ ಮತ್ತು ಸೌಹಾರ್ದಯುತವಾದಂತಹ ಮಾನವೀಯತೆಯ ನಡವಳಿಕೆಗಳ ಮೂಲಕ ಅವನು ಬಿಟ್ಟು ಹೋದಂತಹ ಹೆಜ್ಜೆಯ ಗುರುತುಗಳೇನು ಎನ್ನುವುದನ್ನು ವಿಶ್ಲೇಷಣೆ ಮಾಡುವುದು ಅನಿವಾರ್ಯ. ದಿ. ಎಂ.ಪಿ. ಪ್ರಕಾಶ್‌ರವರು ನಾಚಿಕೆ ಸ್ವಭಾವದ, ಸಂಕೋಚದ, ಸ್ವಾಭಿಮಾನ ಪೂರಿತವಾದಂತಹ ಒಬ್ಬ ಶ್ರೇಷ್ಠ ವ್ಯಕ್ತಿಯಾಗಿದ್ದರು. ನಾಚಿಕೆ, ಸಂಕೋಚ ಮತ್ತು ಸ್ವಾಭಿಮಾನದಿಂದ ಇದ್ದುದ್ದರಿಂದಲೇ ಎಲ್ಲಾ ಜನರ ಬಾಯಲ್ಲಿ ಅವರ ಹೆಸರು ಹಾಗೆಯೇ ತೇಲಾಡುತ್ತಿರುತ್ತದೆ. ಅಧಿಕಾರಕ್ಕಾಗಿ ತಾನು ಮುಂದು, ತಾನು ಮುಂದು ಎಂದು ಯಾರ ಮೇಲೂ ಹೋಗಿ, ಇರುವವರನ್ನು ನೂಕಿ ಮುಂದೆ ಹೋಗಿ ಬಿದ್ದವರಲ್ಲ. ಅಧಿಕಾರ ಎನ್ನುವುದು ಅವರನ್ನು ಹುಡುಕಿಕೊಂಡು ಬರುತ್ತಿತ್ತು. ಕಾರಣ ಅಂತಹ ವಿವೇಚನೆ, ಯೋಗ್ಯತೆ ಹಾಗೂ ಸಮರ್ಥನೆ ಅವರಲ್ಲಿತ್ತು. ಅಧಿಕಾರ ಸಿಕ್ಕಿದಾಗಲೆಲ್ಲಾ ರಾಜ್ಯದ ಅಭಿವೃದ್ಧಿ ಮತ್ತು ಬೆಳವಣಿಗೆ ಬಗ್ಗೆ ಅವರು ಸದಾ ತಮ್ಮ ಕಾರ್ಯವನ್ನು ಸೀಮಿತಗೊಳಿಸುತ್ತಿದ್ದರು. ಅಂದರೆ, ನೈತಿಕತೆ ಮತ್ತು ಪಾರದರ್ಶಕತೆಯನ್ನು ಆಡಳಿತದಲ್ಲಿ ಮತ್ತು ಸಾರ್ವಜನಿಕ ಬದುಕಿನಲ್ಲಿ ಅವರು ಛಾಪು ಮೂಡಿಸಿದ್ದಾರೆ. ನೈತಿಕತೆ ಮತ್ತು ಪಾರದರ್ಶಕತೆ ಸಾರ್ವಜನಿಕ ಬದುಕಿನಲ್ಲಿ ಇಲ್ಲದೇ ಇದ್ದರೆ ಸಾರ್ವಜನಿಕ ಬದುಕಿಗೆ ಯಾವುದೇ ಮೌಲ್ಯ ಇರುವುದಿಲ್ಲ, ಯಾವುದೇ ಮರ್ಯಾದೆ ಇರುವುದಿಲ್ಲ ಹಾಗೂ ಮಾನ್ಯತೆ ಇರುವುದಿಲ್ಲ. ಅವರು ಬಿಟ್ಟು ಹೋಗಿರತಕ್ಕಂತಹ ಹೆಜ್ಜೆಯ ಗುರುತುಗಳ ಬಗ್ಗೆ ಎಲ್ಲರೂ ಮಾತನಾಡಿದರು. ಅವರು ಮುಖ್ಯ ಮಂತ್ರಿಯಾಗಲೇಬೇಕಾಗಿತ್ತು. ಆ ಸಮರ್ಥನೆ ಅವರಲ್ಲಿತ್ತು. ಅನೇಕ ಜನ ನಮ್ಮನ್ನು ಅಗಲಿರುವವರೆಲ್ಲರೂ ಯೋಗ್ಯತೆ ಇದ್ದವರು. ಅವರು ಮೊದಲನೇ ಸ್ಥಾನಕ್ಕೆ ಬರಲೇ ಇಲ್ಲ. ಕಾರಣ

ರಾಜಕೀಯ ಸೂತ್ರವನ್ನು ನಿಯಂತ್ರಣ ಮಾಡುವಂತಹವರು ಯೋಗ್ಯತೆ, ಸಮರ್ಥ ಮತ್ತು ವಿವೇಚನೆಗಳಿರತಕ್ಕಂತಹ ಜನರ ಕೈಗಳಿಗೆ ಅಧಿಕಾರ ಕೊಡುವ ಪ್ರಯತ್ನವನ್ನು ಮಾಡಲೇ ಇಲ್ಲ. ಪಿತೂರಿಗಳು, ತಂತ್ರಗಳು, ತಂತ್ರಗಾರಿಕೆ, ಅನುಭವ ಇಲ್ಲದೇ ಇರುವವರನ್ನು ಸ್ವಾರ್ಥ, ಸ್ವಜನಪಕ್ಷಪಾತದ ಮುಖಾಂತರ ಯೋಗ್ಯರನ್ನು ಮೂಲೆಗೆ ಸೇರಿಸಿ ಅವರನ್ನು ಅಧಿಕಾರದಿಂದ ವಂಚಿತರನ್ನಾಗಿ ಮಾಡಿ ಬೇರೆ ಬೇರೆಯವರು ಅಧಿಕಾರದ ನಿರ್ಣಾಯಕ ಸ್ಥಳಗಳಲ್ಲಿ ಬಂದು ಕುಳಿತಿದ್ದರು. ಇವೆಲ್ಲವೂ ರಾಜಕೀಯ ಇತಿಹಾಸದಲ್ಲಿ ನಡೆದಿರತಕ್ಕಂತಹ ಘಟನಾವಳಿಗಳು. ಆದರೆ, ಮುಂದೆ ಸಾರ್ವಜನಿಕ ಕ್ಷೇತ್ರವನ್ನು ಶುದ್ಧಿಗೊಳಿಸಬೇಕಾದರೆ ಎಂತಹ ವ್ಯಕ್ತಿಗಳು ತಮ್ಮ ನಡವಳಿಕೆಗಳ ಮೂಲಕ ಸಾರ್ವಜನಿಕ ಮೌಲ್ಯವನ್ನು, ಪಾರದರ್ಶಕತೆಯನ್ನು ಹಾಗೂ ನೈತಿಕತೆಯನ್ನು ಎತ್ತಿ ಹಿಡಿದಿದ್ದಾರೆ ಎನ್ನುವುದಕ್ಕೆ ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರು ಶ್ರೇಷ್ಠ ಉದಾಹರಣೆ. ಈಗಾಗಲೇ ಅವರ ಬಗ್ಗೆ ಅನೇಕ ಜನ ಹೇಳಿದ್ದಾರೆ. ಅವರು ಜನತಾ ಪಕ್ಷದ ಅಧ್ಯಕ್ಷರಾಗಿದ್ದಾಗ ನನ್ನನ್ನು ರಾಜ್ಯದ ಎಸ್.ಸಿ./ಎಸ್.ಟಿ. ವಿಭಾಗದ ಅಧ್ಯಕ್ಷರನ್ನಾಗಿ ಮಾಡಿದ್ದರು. ಅಂದಿನ ಸಂದರ್ಭದಲ್ಲಿ ದಿ. ರಾಮಕೃಷ್ಣ ಹೆಗ್ಗಡೆಯವರು ಮುಖ್ಯಮಂತ್ರಿಯಾಗಿದ್ದರು. ಎಸ್.ಸಿ./ಎಸ್.ಟಿ. ಸಮುದಾಯಕ್ಕೆ ಏನೇನು ಸವಲತ್ತುಗಳಾಗಬೇಕು ಎಂಬುದರ ಬಗ್ಗೆ ಒಂದು ಪಟ್ಟಿ ಮಾಡು, ನಾನು ಹಾಗೂ ನೀನು ಇಬ್ಬರು ಹೋಗಿ ಅವರ ಬಳಿ ಕುಳಿತು ಆ ಕೆಲಸ ಮಾಡಿಸೋಣ ಎಂದು ನನಗೆ ಅವರು ಹೇಳಿದ್ದರು. ಅಂದು Chloral hydrate ನಿಂದ ವಿಷದ ಹೆಂಡವನ್ನು ಕುಡಿದು ಸಾಯುತ್ತಿದ್ದಂತಹ ಜನರನ್ನು ನೋಡಿ ಹೆಂಡವನ್ನು ನಿಷಿದ್ಧ ಮಾಡಬೇಕೆಂದು ಒತ್ತಾಯ ಮಾಡಿದ್ದೆವು. ಪ್ರಾರಂಭಿಕವಾಗಿ ಐದು ಜಿಲ್ಲೆಗಳಲ್ಲಿ ಇದನ್ನು ನಿಲ್ಲಿಸಬೇಕೆಂದು ಮಾಡಿದ್ದೆವು. ಡಾ: ಬಿ.ಆರ್. ಅಂಬೇಡ್ಕರ್‌ರವರ ಸಮಗ್ರ ಸಾಹಿತ್ಯವನ್ನು ಕನ್ನಡಕ್ಕೆ ತರ್ಜುಮೆ ಮಾಡಬೇಕೆಂದು ಮಾಡಿದ್ದೆವು. ಲೋಹಿಯಾಲಾವನ್ನು ಕನ್ನಡಕ್ಕೆ ತರ್ಜುಮೆ ಮಾಡುವಂತಹದ್ದು ಮತ್ತು residential school ಅನ್ನು ಪ್ರಾರಂಭ ಮಾಡುವಂತಹ ಅನೇಕ ವಿಷಯಗಳನ್ನು ಶೋಷಿತ ವರ್ಗಗಳ ಪರವಾಗಿ ಎಂ.ಪಿ. ಪ್ರಕಾಶ್‌ರವರು ರಾಜ್ಯದ ಅಂದಿನ ಜನತಾ ಪಕ್ಷದ ಅಧ್ಯಕ್ಷರಾಗಿ ಹಾಗೂ ನನ್ನನ್ನು ರಾಜ್ಯದ ಜನತಾ ಪಕ್ಷದ ಎಸ್.ಸಿ./ಎಸ್.ಟಿ. ವಿಭಾಗದ ಅಧ್ಯಕ್ಷನನ್ನಾಗಿ ನೇಮಕ ಮಾಡಿ ನಮ್ಮ ಮುಖಾಂತರ ಜನಪರವಾದ ಹಾಗೂ ತುಳಿತಕ್ಕೆ ಒಳಗಾದ ಜನರನ್ನು ಮೇಲೆತ್ತುವ

ಕಾರ್ಯಕ್ರಮಗಳಿಗೆ ನಿಯೋಜನೆ ಮಾಡಿ ಉತ್ತೇಜನ ಕೊಟ್ಟಂತಹ ಒಬ್ಬ ಮುತ್ಸದ್ಧಿ ರಾಜಕಾರಣಿಯಾಗಿದ್ದರು.

2.00 ಪಿ.ಎಂ.

ಮುತ್ಸದ್ಧಿ ಸದಾ ಕಾಲ ಮುಂದಿನ ಜನಾಂಗದ ಏಳಿಗೆ ಮತ್ತು ಅಭಿವೃದ್ಧಿಯ ಬಗ್ಗೆ ಯೋಚನೆ ಮಾಡುತ್ತಾನೆ. ರಾಜಕಾರಣಿ ಇವತ್ತಿನ ರಾಜಕೀಯವನ್ನು ನಿಯಂತ್ರಣ ಮಾಡಿ, ಎಂತಹ ಸಮಸ್ಯೆಗಳು, ಹಗರಣಗಳು ಬಂದರೂ ನಾನೇ ಅಧಿಕಾರದಲ್ಲಿ ಹೇಗೆ ಮುಂದುವರೆಯಬೇಕು ಎನ್ನುವುದರ ಬಗ್ಗೆ ತಲೆಕೆಡಿಸಿಕೊಳ್ಳುತ್ತಾನೆ. ಮುತ್ಸದ್ಧಿಗಳು ನೈತಿಕತೆ ಮತ್ತು ಪಾರದರ್ಶಕತೆಯ ಕಡೆಗೆ ಹೆಚ್ಚು ಗಮನವನ್ನು ಕೊಟ್ಟು ಇತಿಹಾಸವನ್ನು ನಿರ್ಮಾಣ ಮಾಡಿ ಹೋಗುತ್ತಾರೆ. ಈ ಹಿನ್ನೆಲೆಯಲ್ಲಿ ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರು ಒಬ್ಬ ಬಹುಮುಖ ಪ್ರತಿಭೆಯ, ಸರಳ ಸಜ್ಜನಿಕೆಯ, ಶ್ರೇಷ್ಠ ರಾಜಕೀಯ ಪರಂಪರೆಗೆ ಸೇರಿದಂತಹ ಒಬ್ಬ ಮಹಾನ್ ನಾಯಕ. ಅವರು, ಕ್ಯಾನ್ಸರ್ ಎಂದು ಒಂದು ಬಾರಿ detect ಆದ ಮೇಲೆ, ಹತ್ತಿರದಲ್ಲೇ death is certain ಎಂದು ಗೊತ್ತಾಗುತ್ತದೆ. ಆದರೂ ಕ್ಯಾನ್ಸರ್ ಇದ್ದರೂ, ಅವರು ಸಾಯುತ್ತೇನೆಂದು ಗೊತ್ತಿದ್ದರೂ ಕಡಿಮೆ ಅವಧಿಯಲ್ಲಿ, within on time ಅವರು ಹೆದರಿಕೊಳ್ಳದೇ ಅವರ ಮಗಳ ಮನೆಯಿಂದ ನಡೆದುಕೊಂಡು ಬಂದು, ಜನಾರ್ಧನ್ ಹೋಟೆಲ್‌ಗೆ ನಾನು ಸಿದ್ಧರಾಮಯ್ಯನವರು ತಿಂಡಿ ತಿನ್ನುವುದಕ್ಕೆ ಹೋದಾಗ ಅವರು ಅಲ್ಲಿಗೆ ದೋಸೆ ತಿನ್ನುವುದಕ್ಕೆ ಒಬ್ಬರೇ ನಡೆದುಕೊಂಡು ಬಂದರು. ಅದು ಆದ 10–20 ದಿನದಲ್ಲೇ ಅಥವಾ ಒಂದು ತಿಂಗಳಿನೊಳಗೇ ಅವರು ತೀರಿ ಹೋದರು. ಅಂದರೆ 'ಕ್ಯಾನ್ಸರ್ ಇದೆ ಎಂದು ಹೇಳಿ, ಸಾವು ಬರುತ್ತದೆ ಎಂದು ಹೆದರಿಕೊಳ್ಳದೇ, ಸಾವನ್ನು ಧೈರ್ಯವಾಗಿ ಎದುರಿಸಿ' ಎನ್ನುವ ಸಂದೇಶವನ್ನು ಕ್ಯಾನ್ಸರ್ ಮತ್ತು ಇನ್ನಿತರ ರೋಗಿಗಳಿಗೆ ಅಂತಹ ಒಂದು ಧೈರ್ಯವನ್ನು ತುಂಬುವ ಕೆಲಸವನ್ನು ಎಂ.ಪಿ. ಪ್ರಕಾಶ್‌ರವರು ಮಾಡಿ ಹೋಗಿದ್ದಾರೆ. ಆತ್ಮ ಮತ್ತು ಪರಮಾತ್ಮ ಎನ್ನುವುದು ಇಲ್ಲ. ಅದು ಅವರವರು ನಂಬಿರತಕ್ಕಂತಹ ನಂಬಿಕೆ. ಒಬ್ಬ ಮನುಷ್ಯ ಒಂದು ಬಾರಿ ಹುಟ್ಟಿದ ಮೇಲೆ ಅವನು ಸಾಯುತ್ತಾನೆ. ಸತ್ತ ಮೇಲೆ ಒಂದು ವಸ್ತು ತನ್ನ ಮೂಲವನ್ನು ಸೇರುತ್ತದೆ ಅದು ಸಿದ್ಧಾಂತ. ಪ್ರತಿಯೊಂದು ವಸ್ತುವೂ ತನ್ನ ಮೂಲವನ್ನು ಸೇರಲೇಬೇಕು. ಎಂ.ಪಿ. ಪ್ರಕಾಶ್‌ರವರು ತಮ್ಮ ಮೂಲಕ್ಕೆ ಸೇರಿದ್ದಾರೆ. ಆದರೆ ತನ್ನ ಬದುಕಿನ ಉದ್ದಗಲಕ್ಕೂ, ಸಾರ್ವಜನಿಕ ಬದುಕಿನ ಉದ್ದಗಲಕ್ಕೂ ಅನೇಕ ಹೆಜ್ಜೆ

ಗುರುತುಗಳನ್ನು ಅವರು ಬಿಟ್ಟು ಹೋಗಿದ್ದಾರೆ. ಆ ಹೆಜ್ಜೆ ಗುರುತುಗಳು ಇವತ್ತಿನ ರಾಜಕೀಯ ಕ್ಷೇತ್ರಕ್ಕೆ, ಸಾಹಿತ್ಯ ಕ್ಷೇತ್ರಕ್ಕೆ ನಾಟಕ ರಂಗಕ್ಕೆ, ಕಲೆಗೆ ಮತ್ತು ಗುಣಾತ್ಮಕವಾದಂತಹ ನಾಯಕತ್ವವನ್ನು ಬೆಳೆಸಿಕೊಳ್ಳುವುದಕ್ಕೆ ಒಳ್ಳೆಯ ಹೆಜ್ಜೆ ಗುರುತನ್ನು ಬಿಟ್ಟು ಹೋಗಿದ್ದಾರೆ. ಅದನ್ನು ಪರಿಪಾಲನೆ ಮಾಡತಕ್ಕಂತಹ ವಿಷಯಗಳನ್ನು, ಪರಿಪಾಲನೆ ಮಾಡತಕ್ಕಂತಹ ಸಂಗತಿಯನ್ನು ಅಳವಡಿಸಿಕೊಂಡರೆ ಅವರು ನಡೆದು ಬಂದ ದಾರಿಗೆ ನಾವು ಕೊಟ್ಟಂತಹ ಮಾನ್ಯತೆ ಮತ್ತು ಗೌರವ ಎಂದು ನಾನು ಭಾವಿಸುತ್ತೇನೆ.

ಸನ್ಮಾನ್ಯ ತಿಪ್ಪಯ್ಯನವರು, ಸ್ವಾತಂತ್ರ್ಯ ಹೋರಾಟಗಾರರಾದ, ಸಂಗ್ರಾಮಯುಕ್ತ ಒನಕೆ ಓಬವ್ವನವರ ವಂಶಸ್ಥರು, ಒಬ್ಬ ದಲಿತ ಪರವಾದಂತಹ, ಜನಪರವಾದಂತಹ ಹಿರಿಯ ನಾಯಕರಾಗಿ ಅವರು ನಮ್ಮನ್ನು ಅಗಲಿದ್ದಾರೆ. ಅವರ ಅಗಲಿಕೆಯಿಂದ ದಲಿತ ಕ್ಷೇತ್ರದ ನಾಯಕತ್ವವನ್ನು ನಾವು ಕಳೆದು ಕೊಂಡಂತಾಗಿದೆ. ಅವರಿಗೆ ಮತ್ತು ಶ್ರೀ ಭೀಮಸೇನಜೋಷಿಯವರು ಸಂಗೀತ ಕ್ಷೇತ್ರದಲ್ಲಿ ಉಂಟು ಮಾಡಿರುವಂತಹ ಅನೇಕ ಕ್ರಾಂತಿ ಮತ್ತು ರಾಷ್ಟ್ರೀಯ ಐಕ್ಯತೆಯನ್ನು ಮೂಡಿಸುವ ರಾಷ್ಟ್ರಗೀತೆಗಳು ಇವತ್ತು ಇಡಿ ರಾಷ್ಟ್ರ ಮತ್ತು ಅಂತರರಾಷ್ಟ್ರದಲ್ಲಿ, ಭಾರತಕ್ಕೆ ಮತ್ತು ಕರ್ನಾಟಕಕ್ಕೆ ಗೌರವ ಮತ್ತು ಹೆಮ್ಮೆಯನ್ನು ತಂದು ಕೊಡುವ ಸಂಗತಿ. ಗುಡಿಗೇರಿ ಬಸವರಾಜುರವರು ನಟನಾ ಕ್ಷೇತ್ರದಲ್ಲಿ ನಾಟಕ ರಂಗದಲ್ಲಿ ತಮ್ಮದೇ ಆದಂತಹ ಛಾಪನ್ನು ಮೂಡಿಸಿ ಇವತ್ತು ನಾಟಕ ರಂಗದ ಮೂಲಕ ಸಿನಿಮಾದಲ್ಲಿ ನಟನೆಯ ಚಾತುರ್ಯವನ್ನು ಪ್ರತಿಪಾದನೆ ಮಾಡುವಂತಹ ಅನೇಕರನ್ನು ತಯಾರು ಮಾಡಿ ಸಿನಿಮಾ ನಟನೆಯ ಚಾತುರ್ಯವನ್ನು ಪ್ರತಿಪಾದನೆ ಮಾಡುವಂತಹ ಅನೇಕರನ್ನು ತರಯಾರು ಮಾಡಿ ಸಿನಿಮಾ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದರು. ಅವರು ಕೂಡ ನಾಟಕ ಕ್ಷೇತ್ರದ ಮುಖಾಂತರ ನಮ್ಮನ್ನು ಅಗಲಿದ್ದಾರೆ. ಅದರ ಜೊತೆಗೆ ಶಬರಿಮಲೆ ದುರಂತ, ನಿಜವಾಗಿಯೂ ಕೂಡ ಒಂದು ದೊಡ್ಡ ದುರಂತ. ಕಾರಣ ಅಲ್ಲಿಗೆ ಹೋಗತಕ್ಕಂತವರು ದೇಶದ ಉದ್ದಗಲಕ್ಕೂ ಅನಕ್ಷರಸ್ಥರು. ಮೂಢನಂಬಿಕೆ ಇರುವ ಜನ. ಬಡವರು, ದಲಿತರು, ಹಿಂದುಳಿದವರು. ಈ ಜನರಿಗೆ ಮೂಲಸೌಕರ್ಯಗಳನ್ನು ಕಲ್ಪಿಸಿಕೊಡುವ ಮತ್ತು ಅಲ್ಲಿಯ ದೇವಸ್ಥಾನದಲ್ಲಿ ಬರುವ ಲೈಟ್ ಮಾನವ ನಿರ್ಮಿತವಾದದ್ದು ಎಂದು ಹೇಳುವುದರ ಮುಖಾಂತರ ಈ ಜನರ ಮೂಢನಂಬಿಕೆಗಳನ್ನು ತೆರೆದು ಇವರು ತಮ್ಮ ಮೂಢನಂಬಿಕೆಗಳ ಮುಖಾಂತರ ಬಡತನದಿಂದ ಸಂಗ್ರಹ ಮಾಡಿದ ಶ್ರಮದ ಹಣವನ್ನು ವ್ಯಯ

ಮಾಡುವುದರ ಜೊತೆಗೆ ಅವರಿಗೆ ಮೂಲಸೌಕರ್ಯಗಳನ್ನು ಕಲ್ಪಿಸಿ ಕೊಡಬೇಕು. ದುರಂತ ಆದಾಗ ರಾಜ್ಯ ಸರ್ಕಾರ ಸಚಿವರನ್ನು ಕಳುಹಿಸಿ ಉಸ್ತುವಾರ ನೋಡುವಂತಹ ಕೆಲಸವನ್ನೂ ಮಾಡಿದ್ದಾರೆ. ಇಂತಹ ದುರಂತಗಳು ಆಗದ ರೀತಿಯಲ್ಲಿ ಇಲ್ಲಿಯ ಸರ್ಕಾರ ಮತ್ತು ಕೇರಳದ ಸರ್ಕಾರ ಗಮನವನ್ನು ಹರಿಸಿ ಅವರಿಗೆ ವಾಹನ ಸೌಕರ್ಯ, ರಸ್ತೆ, ಸಂಪರ್ಕ, ಬೆಳಕು, ನೀರು, ಆರೋಗ್ಯ, ರಕ್ಷಣೆ ಸವಲತ್ತುಗಳನ್ನು ಒದಗಿಸಿ ಮುಂಜಾಗ್ರತಾ ಕ್ರಮವನ್ನು ಕೈಗೊಳ್ಳಬೇಕೆಂದು ಅವರಿಗೆ ಸಲಹೆಗಳನ್ನು ಕೊಡುತ್ತಾ, ಈ ಎಲ್ಲಾ ಮಹನೀಯರ ಅಗಲಿಕೆ ಇವತ್ತು ನಮನ್ನು ದುಃಖದಲ್ಲಿ ಮುಳುಗಿಸಿದೆ. ದುಃಖ ತಪ್ತ ಕುಟುಂಬದವರಿಗೆ ಅದನ್ನು ಭರಿಸುವ ಶಕ್ತಿಯನ್ನು ನೀಡಲಿ. ಇವರು ಬಿಟ್ಟು ಹೋದಂತಹ ಹೆಜ್ಜೆ ಗುರುತುಗಳು ಮುಂದಿನ ಪೀಳಿಗೆಗಳಿಗೆ ಮಾರ್ಗದರ್ಶನವಾಗಲಿ ಎಂದು ಹಾರೈಸಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

+**ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರು):** ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಏನು ಸಂತಾಪ ಸೂಚನೆಯನ್ನು ತಂದಿದ್ದೀರಿ ಅದಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಮಾನ್ಯ ಎಂ.ಪಿ. ಪ್ರಕಾಶ್‌ರವರು 1940ರಲ್ಲಿ ಜನಸಿದಿ ನಂತರ, ನಾಲ್ಕು ಬಾರಿ ವಿಧಾನಸಭಾ ಸದಸ್ಯರಾಗಿ, ಒಂದು ಬಾರಿ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. 1983ರಲ್ಲಿ ಹಡಗಲಿ ವಿಧಾನಸಭಾ ಕ್ಷೇತ್ರದಿಂದ ಅವರು ಸ್ಪರ್ಧೆ ಮಾಡಿ ಗೆದ್ದ ನಂತರ ಸಾರಿಗೆ ಸಚಿವರಾಗಿ ಕೆಲಸ ನಿರ್ವಹಿಸಿದ್ದರು. ಅವರು ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಅವರು ಯಾವುದೇ ಪಕ್ಷದಿಂದ ಗೆದ್ದರೂ ಕೂಡ ಆ ಸರ್ಕಾರ ಅಧಿಕಾರಕ್ಕೆ ಬರುವ ಸನ್ನಿವೇಶವನ್ನು ನಾವೆಲ್ಲರೂ ಕಾಣುತ್ತಿದ್ದೇವೆ. ಸಾಕಷ್ಟು ವಿಷಯಗಳನ್ನು ನಾವು ಹೋಲಿಸಿದರೆ, ಇವತ್ತು ಎಂ.ಪಿ. ಪ್ರಕಾಶ್‌ರವರು ಯಾವ ಪಕ್ಷದಿಂದ ಗೆದ್ದಿದ್ದಾರೋ ಆ ಪಕ್ಷದ ಸರ್ಕಾರಗಳು ಅಧಿಕಾರಕ್ಕೆ ಬಂದಂತಹ ಸನ್ನಿವೇಶವನ್ನು ನಾವು ನೋಡಿದ್ದೇವೆ. ಎಂ.ಪಿ. ಪ್ರಕಾಶ್‌ರವರು ಸೋಲು-ಗೆಲುವನ್ನು ಸರಿಸಮಾನವಾಗಿ ನೋಡಿದ್ದಾರೆ. ಸೋಲಾಗಿರಬಹುದು, ಗೆಲುವಾಗಿರ ಬಹುದು ಸಮಾನವಾಗಿ ಕಂಡಿದ್ದರು. ಎಂ.ಪಿ. ಪ್ರಕಾಶ್‌ರವರ ಬಗ್ಗೆ ಹೇಳಬೇಕೆಂದರೆ ಅವರನ್ನು ನಡೆದಾಡುವ ವಿಶ್ವವಿದ್ಯಾಲಯ ಎಂದು ಹೇಳಿದರೆ ತಪ್ಪಾಗಲಾರದು. ಬಹಳಷ್ಟು ವಿಶ್ವವಿದ್ಯಾಲಯಗಳನ್ನು ಹುಟ್ಟು ಹಾಕಿದ ಎಂ.ಪಿ. ಪ್ರಕಾಶ್‌ರವರು ಇವತ್ತು ನಮ್ಮನ್ನು ಅಗಲಿದ್ದಾರೆ. ಅವರು ವಾರ್ತಾ ಮತ್ತು

ಪ್ರಚಾರ ಇಲಾಖೆಯ ಮಂತ್ರಿಯಾಗಿದ್ದರು, ಗ್ರಾಮೀಣಾಭಿವೃದ್ಧಿ ಮಂತ್ರಿಗಳಾಗಿದ್ದರು, ಕಂದಾಯ ಮಂತ್ರಿಗಳಾಗಿದ್ದರು, ಉಪ ಮುಖ್ಯಮಂತ್ರಿ ಗಳಾಗಿದ್ದರು. ಅವರು ಉಪಮುಖ್ಯಮಂತ್ರಿಗಳಾದ ನಂತರ ಮುಖ್ಯಮಂತ್ರಿಗಳಾಗುತ್ತಾರೆ ಎನ್ನುವ ವಾತಾವರಣ, ಭಾವನೆ ಜನರಲ್ಲಿತ್ತು ಮತ್ತು ಆ ರೀತಿ ನಮ್ಮ ಜಿಲ್ಲೆಯಲ್ಲಿ ಜನರು ಮಾತನಾಡುತ್ತಿದ್ದರು. ಉಪ ಮುಖ್ಯಮಂತ್ರಿಗಳಾಗಿ ರಾಜ್ಯಕ್ಕೆ ಒಳ್ಳೆಯ ಹೆಸರನ್ನು ತರುವ ಬಹಳಷ್ಟು ಕೆಲಸ ಮಾಡಿದ್ದರು. ಹಂಪಿ ಉತ್ಸವವನ್ನು ನಾವೇನೂ ಆಚರಣೆ ಮಾಡುತ್ತೇವೆ, ಆ ಹಂಪಿ ಉತ್ಸವವನ್ನು ಹುಟ್ಟು ಹಾಕಿದಂತಹ ವ್ಯಕ್ತಿ ಎಂ.ಪಿ. ಪ್ರಕಾಶ್‌ರವರು. ಆವತ್ತು ಏನು ಹಂಪಿ ಉತ್ಸವ ಕೇವಲ ಬಳ್ಳಾರಿ ಜಿಲ್ಲೆಗೆ ಸೀಮಿತವಾಗಿತ್ತು, ಸಾಕಷ್ಟು ಅವರ ಪರಿಶ್ರಮದಿಂದ ಇಡೀ ರಾಷ್ಟ್ರಕ್ಕೆ ಪರಿಚಯ ಮಾಡುವಂತಹ ವ್ಯವಸ್ಥೆ ಎಂ.ಪಿ. ಪ್ರಕಾಶ್‌ರವರು ಮಾಡಿಕೊಟ್ಟರು. ಅವರು ಹಲವಾರು ನಾಟಕಗಳಲ್ಲಿ ಪಾತ್ರವಹಿಸಿದ್ದರು. 'ಸೂರ್ಯವಂಶಿ' ಎನ್ನುವ ಬಂಗಾಳಿ ನಾಟಕವನ್ನು ಕನ್ನಡದಲ್ಲಿ ಅನುವಾದ ಮಾಡಿದಂತಹ ವ್ಯಕ್ತಿ ಎಂ.ಪಿ. ಪ್ರಕಾಶ್‌ರವರು ಆಗಿದ್ದರು. ಅವರು ಪ್ರಾರಂಭ ಮಾಡಿದಂತಹ 'ರಂಗಭಾರತಿ' ನಾಟ್ಯ ತಂಡವನ್ನು ಹುಟ್ಟಿ ಹಾಕಿ ಇವತ್ತಿಗೆ ಸುಮಾರು 45 ವರ್ಷದ ಇತಿಹಾಸವಿದೆ ಎನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ. ನಾನು ಶ್ರೀ ಎಂ.ಪಿ. ಪ್ರಕಾಶ್‌ರವರನ್ನು ಸಾಕಷ್ಟು ವರ್ಷಗಳಿಂದ ಬಹಳಷ್ಟು ಹತ್ತಿರದಿಂದ ನೋಡಿದಂತಹ ವ್ಯಕ್ತಿ. 20 ವರ್ಷಗಳ ಹಿಂದೆ ಅವರು ಮಂತ್ರಿಗಳಾಗಿದ್ದಾಗ ನಾನು ಅವರ ಹತ್ತಿರ ಹೋಗುವಂತಹ ಸಂದರ್ಭದ ಬಂದಾಗ ಅವರು, 'ಶ್ರೀರಾಮುಲು ರಾಜಕೀಯವಾಗಿ ಬೆಳೆಯಬೇಕೆಂದರೆ ಸ್ವಲ್ಪ ತಾಳ್ಮೆ ಇರಬೇಕು. ರಾಜಕೀಯದಲ್ಲಿ ಎಲ್ಲಾ ವಿಷಯಗಳನ್ನು ತಾವು ಜೀರ್ಣ ಮಾಡಿಕೊಳ್ಳಬೇಕು' ಎನ್ನುವ ವಿಷಯವನ್ನು ಸಾಕಷ್ಟು ಬಾರಿ ನನಗೆ ಹೇಳುತ್ತಿದ್ದರು. 1999ರಲ್ಲಿ ಶ್ರೀಮತಿ ಸುಷ್ಮಾ ಸ್ಮರಾಜ್‌ರವರು ಬಳ್ಳಾರಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡಿದಂತಹ ಸಂದರ್ಭದಲ್ಲಿ ನಾನೂ ಕೂಡ ಬಳ್ಳಾರಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡಿದ್ದೆ. ಅವರು ಜೆಡಿಯು ಪಕ್ಷದಿಂದ ಹಡಗಲಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡಿದ್ದರು. ಆಗ ಮಾನ್ಯ ಎಂ.ಪಿ. ಪ್ರಕಾಶ್‌ರವರು ಸೋತು ಹೋದರು, ಸುಷ್ಮಾಸ್ವರಾಜ್‌ರವರೂ ಸೋತು ಹೋದರು ಹಾಗೂ ನಾನು ಸೋತು ಹೋದೆ. ಎಂ.ಪಿ. ಪ್ರಕಾಶ್‌ರವರು ಸೋತಿದ್ದರೂ ಕೂಡ ಸುಮಾರು 3,500 ಮತಗಳನ್ನು ಅಲ್ಲಿ ಸುಷ್ಮಾಸ್ವರಾಜ್‌ರವರಿಗೆ ಜಾಸ್ತಿ ತಂದು ಕೊಟ್ಟರು.

ಆದರೆ ಎಲ್ಲ ರೀತಿಯಲ್ಲಿಯೂ ಅವತ್ತಿನ ಪರಿಸ್ಥಿತಿಯಲ್ಲಿ ಸುಷ್ಮಾಸ್ವರಾಜ್‌ರವರು ಸೋತು ಹೋದರು. ನಾನು ಎಂ.ಪಿ. ಪ್ರಕಾಶ್‌ರವರ ಬಗ್ಗೆ ಹೇಳಬೇಕೆಂದರೆ, ಅವರು ಯಾವುದೇ ಪಕ್ಷದಲ್ಲಿ ಇರಬಹುದು, ಅವರ ಬಗ್ಗೆ ಮಾತನಾಡುವ ಸಂದರ್ಭಧಲ್ಲಿ ಎಂ.ಪಿ. ಪ್ರಕಾಶ್‌ರವರು 'ಸಮಾಜವಾದಿ ವ್ಯಕ್ತಿ' ಎನ್ನುವ ಮಾತನ್ನು ಏನು ಹೇಳುತ್ತೇವೆ, ಅದೇ ರೀತಿಯಲ್ಲಿ ಅಜಾತಶತ್ರು ಎನ್ನುವ ಮಾತನ್ನು ಏನು ಹೇಳುತ್ತೇವೆ, ಅದೇ ರೀತಿ ನಾನು ಸೋತು ಹೋದ ನಂತರ ನಗರಸಭಾ ಚುನಾವಣೆಗಳು ಬಂದವು. ಆ ನಗರ ಸಭೆ ಚುನಾವಣೆಯಲ್ಲಿ ನಾನು ಮತ್ತು ಎಂ.ಪಿ. ಪ್ರಕಾಶ್‌ರವರು ಹಾಗೂ ಜೆಡಿಎಸ್ ಪಕ್ಷದಿಂದ ಅಭ್ಯರ್ಥಿಗಳನ್ನು ಸ್ಪರ್ಧೆ ಮಾಡಿಸಿದ್ದರು. ಅವರು 4–5 ಮಂದಿ ಸದಸ್ಯರು ಗೆದ್ದರು. ಗೆದ್ದ ನಂತರ ನಾವುಗಳು 18 ಮಂದಿಯನ್ನು ಗೆಲ್ಲಿಸಿಕೊಂಡಿದ್ದೆವು. ಅಲ್ಲಿ ಎಂ.ಪಿ. ಹಾಗೂ ಎಂ.ಎಲ್.ಎ. voting ಗಳು ಆಗಬೇಕಾದರೆ, ಅವರು ಜಾಸ್ತಿ ಹಾಕುತ್ತಾರೆ ಎನ್ನುವ ಉದ್ದೇಶದಿಂದ ನಾವು ಅವರ ಮನೆಗೆ ಹೋಗಿ, 'ಸಾರ್ ನಾನು ಭಾರತೀಯ ಜನತಾ ಪಕ್ಷದಿಂದ ಬಳ್ಳಾರಿ ಜಿಲ್ಲೆಯಲ್ಲಿ ಸಾಕಷ್ಟು ಕಷ್ಟಪಟ್ಟು ಈ ಸ್ಥಾನಕ್ಕೆ ಬರಲಿಕೆ ಬಹಳಷ್ಟು ಶ್ರಮಪಟ್ಟಿದ್ದೇನೆ. ನಿಮ್ಮ ಜೆಡಿಯು ಸದಸ್ಯರನ್ನು ಬೆಂಬಲ ಕೊಡುವಂತಹ ವ್ಯವಸ್ಥೆಯನ್ನು ನೀವು ಮಾಡಿ ಕೊಡಿ' ಎಂದು ಆವತ್ತು ಕೇಳಿದೆವು. 'ಶ್ರೀರಾಮುಲುರವರೆ, ಒಳ್ಳೆಯದಕ್ಕೋಸ್ಕರ ಸದಾ ಯಾವಾಗಲೂ ನಿಮ್ಮ ಜೊತೆಯಲ್ಲೇ ಇರುತ್ತೇನೆ' ಎನ್ನುವ ಮಾತನ್ನು ಹೇಳಿ ಅವರ ಎಲ್ಲಾ ಸದಸ್ಯರ ಬೆಂಬಲವನ್ನು ನಮಗೆ ಕೊಟ್ಟು ಆವತ್ತಿನ ನಗರಸಭೆಯಲ್ಲಿ ಚುಕ್ಕಾಣಿ ಹಿಡಿಯಲು ನಮಗೆ ಅವಕಾಶ ಮಾಡಿಕೊಟ್ಟರು.

ಎಂ.ಪಿ. ಪ್ರಕಾಶ್ ಅವರ ಬಗ್ಗೆ ವಿವರಿಸಲು ಸಾಕಷ್ಟು ವಿಷಯಗಳು ಇವೆ. ನಾನು ಕೂಡ ಅವರನ್ನು ಹತ್ತಿರದಿಂದ ನೋಡಿದ್ದೇನೆ. ಅವರ ಭಾಷಣಗಳನ್ನು ಕೇಳುವುದಕ್ಕೋಸ್ಕರ ನಮ್ಮ ಜಿಲ್ಲೆಯ ಎಲ್ಲಾ ಜನರ ಜೊತೆ ಎಲ್ಲಾ ರೀತಿಯಲ್ಲಿ ಹೋಗಿ, ಕುಳಿತುಕೊಂಡು ಅವರ ಭಾಷಣವನ್ನು ಕೇಳುವಂತಹ ಸನ್ನಿವೇಶವನ್ನು ಕೂಡ ನಾವು ಎಲ್ಲಾ ಕಡೆ ಕಾಣುತ್ತಿದ್ದೇವೆ. ಅದಕ್ಕೋಸ್ಕರ ಶ್ರೀ ಎಂ.ಪಿ. ಪ್ರಕಾಶ್ ಅವರನ್ನು ನಾನು ಬಹಳ ಹತ್ತಿರದಿಂದ ನೋಡಿರುವುದರಿಂದ ಅವರ ಹತ್ತಿರ ಬಹಳಷ್ಟು ವಿಷಯಗಳಿವೆ. ಎಲ್ಲ ವಿಷಯಗಳೂ ಸಹ ಅವರಲ್ಲಿತ್ತು. ಅವರು ನಿಧನ ಹೊಂದಿದಂತಹ ಸ್ಥಳಕ್ಕೆ ನಾನು ಸಾಕಷ್ಟು ಮಂದಿ ಹಿರಿಯರು, ಮಾನ್ಯ ಮುಖ್ಯಮಂತ್ರಿಗಳು ಸಹ ಹೋಗಿದ್ದೆವು. ನಂತರ ಅಲ್ಲಿನ ವಾತಾವರಣವನ್ನು ನೋಡಿದ ಮೇಲೆ ಅವರು ನಿಧನರಾದಂತಹ ಸ್ಥಳಕ್ಕೆ ಪಕ್ಷಾತೀತವಾಗಿ ಎಲ್ಲವನ್ನೂ

ಮರೆತು ಎಲ್ಲಾ ಪಕ್ಷದ ನಾಯಕರು ಬಂದಿದ್ದರು. ಅವರೇನು ನಮ್ಮಿಂದ ಅಗಲಿದ್ದಾರೆ? ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಅವರೇನು ಹೆಜ್ಜೆಗಳನ್ನು ಬಿಟ್ಟು ಹೋಗಿದ್ದಾರೆ? ನಾವು ಆ ಹೆಜ್ಜೆಯನ್ನು ಮುಂದಿನ ಪೀಳಿಗೆಗೆ ಯಾವ ರೀತಿ ಪರಿಚಯವನ್ನು ಮಾಡಿಕೊಡಬೇಕು? ಯಾವ ರೀತಿಯಲ್ಲಿ ಸದಾ ಶಾಶ್ವತವಾಗಿ ಉಳಿಯಬೇಕು ಎನ್ನುವಂತಹ ವಿಷಯಗಳ ಬಗ್ಗೆ ನಮ್ಮ ಜಿಲ್ಲೆಯಲ್ಲಿ ಮತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹಾಗೂ ನಾವೆಲ್ಲ ಘಟ್ಟಿಯಾದ ನಿರ್ಧಾರವನ್ನು ತೆಗೆದುಕೊಳ್ಳಬೇಕು. ನಿರ್ಧಾರವನ್ನು ತೆಗೆದುಕೊಂಡು ಅವರು ಶಾಶ್ವತವಾಗಿ ಉಳಿಯುವಂತಹ ವ್ಯವಸ್ಥೆಯನ್ನು ನಾವು ಮಾಡಿಕೊಡುತ್ತೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದಂತೆ ಅವರ ಕುಟುಂಬ ಸದಸ್ಯರಿಗೆ ಅವರ ಅಗಲಿಕೆಯಿಂದ ಉಂಟಾದ ದುಃಖವನ್ನು ಭರಿಸುವುದಕ್ಕೆ ಒಂದು ಶಕ್ತಿಯನ್ನು ಕೊಡಲಿ. ಮುಂಬರುವಂತಹ ದಿನಗಳಲ್ಲಿ ಅವರು ಬಿಟ್ಟು ಹೋದಂತಹ ಹೆಜ್ಜೆಗಳಿಗೆ ಶಕ್ತಿ ಬರಲಿ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎನ್ನುವಂತಹ ಮಾತನ್ನು ಹೇಳುತ್ತೇನೆ. ಅದೇ ರೀತಿಯಲ್ಲಿ ಪಂಡಿತ್ ಭೀಮಸೇನ ಜೋಷಿ ಅವರು ರೋಣ ತಾಲ್ಲೂಕು, ಗದಗ್ ಜಿಲ್ಲೆಯಲ್ಲಿ ಜನಿಸಿದ್ದರು. ಇವತ್ತು ನಾವು ಮಾತನಾಡ ಬೇಕಾದರೆ ಗಂಗೂಬಾಯಿ ಹಾನಗಲ್ ಅವರು ನಿಧನವಾದ ಸಂದರ್ಭದಲ್ಲಿ ನಮ್ಮ ಕರ್ನಾಟಕ ರಾಜ್ಯ ಒಂದು ರತ್ನವನ್ನು ಕಳೆದುಕೊಂಡಿದ್ದೇವೆ ಎನ್ನುವಂತಹ ಮಾತನ್ನು ನಾವು ಹೇಳಿದ್ದೇವೆ. ನಂತರ ಪಂಡಿತ್ ಭೀಮಸೇನ್ ಜೋಷಿ ಅವರು ನಿಧನವಾದ ನಂತರ ನಮ್ಮ ಕರ್ನಾಟಕ ರಾಜ್ಯ ಎರಡು ರತ್ನಗಳನ್ನು ಕಳೆದುಕೊಂಡೆವು ಎನ್ನುವ ಮಾತನ್ನು ನಾವು ಸಾಕಷ್ಟು ಜನರು ಮಾತನಾಡಿಕೊಂಡಿದ್ದೇವೆ. ಅದೇ ರೀತಿಯಲ್ಲಿ ಭೀಮಸೇನ್ ಜೋಷಿಯವರು ಯಾವುದೇ ಒಂದು ಸಂಗೀತ ಪ್ರದರ್ಶನವನ್ನು ನಡೆಸುವಂತಹ ಸಂದರ್ಭದಲ್ಲಿ ಅವರೇ ಸ್ವತಃ ಕಾರ್ drive ಮಾಡಿಕೊಂಡು ಅಲ್ಲಿಗೆ ಹೋಗಿ ಅಲ್ಲಿ ವೀಕ್ಷಿಸಿ ನಡೆಸುವಂತಹ ಸಂದರ್ಭದಲ್ಲಿ ಅವರೇ ಎಲ್ಲಾ ವಿಷಯಗಳನ್ನು ಗಮನಿಸುತ್ತಿದ್ದರು. ಆ ಸಂಗತಿಯನ್ನು ಕೂಡ ನಾನು ಉಲ್ಲೇಖ ಮಾಡುತ್ತೇನೆ. ಅದೇ ರೀತಿ ಪಂಡಿತ್ ಭೀಮಸೇನ್ ಜೋಷಿಯ ಅವರ ವಿಚಾರದಲ್ಲಿ ಇವತ್ತು ನಾವು ಎಲ್ಲಾ ರೀತಿಯಲ್ಲಿ ನೋಡಬೇಕಾದರೆ ಒಂದು ಸಾರಿ ಭೀಮಸೇನ್ ಜೋಷಿಯವರು ಮಧ್ಯಪ್ರದೇಶದಲ್ಲಿ ಭೂಪಾಲ್ ಇಂದ ಮುಂಬೈಗೆ ಪ್ರಯಾಣ ಮಾಡುವಂತಹ ಸಂದರ್ಭದಲ್ಲಿ ರಾತ್ರಿ ವೇಳೆಯಲ್ಲಿ ಅವರೇನು ಪ್ರಯಾಣ

ಮಾಡುವಂತಹ ಸಂದರ್ಭದಲ್ಲಿ ಚಂಬಲ್ ಕಣಿವೆಯ ಕಾಡಿನಲ್ಲಿ ಸಾಕಷ್ಟು ಡಕಾಯಿತರು ಬಂದು ಅವರನ್ನು attach ಮಾಡಿ ದರೋಡೆ ಮಾಡುವಂತಹ ಸನ್ನಿವೇಶದಲ್ಲಿ, ಆ ಕಾರಿನಲ್ಲಿದ್ದಂತಹ ಭೀಮಸೇನ್ ಜೋಷಿಯವರನ್ನು ನೋಡಿ ಆ ಚಂಬಲ್ ಕಣಿವೆಯ ದರೋಡೆಕೋರರು ಅವರ ಕಾಲಿಗೆ ನಮಸ್ಕಾರ ಮಾಡಿ, ಆ ದರೋಡೆಕೋರರರೇ ಚಂಬಲ್ ಕಣಿವೆಯ ಕಾಡಿನಿಂದ ಹೊರಗಡೆ ಹೋಗುವ ತನಕ ರಕ್ಷಣೆಯನ್ನು ಕೊಟ್ಟು ನಂತರ ಅವರನ್ನು ಅಲ್ಲಿಂದ ಸಾಗಿಸುವಂತಹ ವ್ಯವಸ್ಥೆಯನ್ನು ಎಲ್ಲರೂ ನೋಡಿರಬಹುದು. ಅದಕ್ಕೋಸ್ಕರ ಭೀಮಸೇನ್ ಜೋಷಿಯವರು ಆಗಿರಬಹುದು ಅಥವಾ ಇತರೆ ನಿಧನ ಹೊಂದಿದ ಮಹನೀಯರು ಇರಬಹುದು, ಅವರೆಲ್ಲರ ವಿಚಾರದಲ್ಲಿ ತಾವು ಸಾಕಷ್ಟು ವಿಷಯಗಳನ್ನು ಸಂತಾಪ ಸೂಚನೆಯಲ್ಲಿ ತಂದಿದ್ದೀರಿ, ಆ ವಿಚಾರಗಳಿಗೆ ನಾವು ಬೆಂಬಲವನ್ನು ವ್ಯಕ್ತಪಡಿಸುತ್ತಾ ಅವರ ಆತ್ಮಕ್ಕೆ ಶಾಂತಿಯು ಸಿಗಲಿ ಎನ್ನುವ ಮಾತನ್ನು ಕೂಡ ಹೇಳುತ್ತೇನೆ. ಅದೇ ರೀತಿ ಶಬರಿ ಮಲೆಯಲ್ಲಿ ನಡೆದಂತಹ ಮಕರ ಜ್ಯೋತಿ ದರ್ಶನದ ಸಂದರ್ಭದಲ್ಲಿ ಸುಮಾರು 122 ಜನರೇನು ನಿಧನ ಹೊಂದಿದ್ದಾರೆ, ಅವರ ಆತ್ಮಕ್ಕೆ ಶಾಂತಿಯು ಸಿಗಲಿ ಎನ್ನುವಂತಹ ಮಾತನ್ನು ಹೇಳುತ್ತೇನೆ. ಶಬರಿ ಮಲೆಯಲ್ಲಿ ಸಾಕಷ್ಟು ಸಮಸ್ಯೆಗಳು ಇವೆ. ಇವತ್ತು ಮಾನ್ಯ ಪ್ರಧಾನ ಮಂತ್ರಿಗಳಿಗೆ ಕೂಡ ನಾನೊಂದು ಪತ್ರವನ್ನು ಬರೆದಿದ್ದೆ. ಶಬರಿ ಮಲೆಯ ಮಕರ ಜೋತಿಯ ದರ್ಶನದಲ್ಲಿ ಏನು ಘಟನೆ ನಡೆದಿದೆ? ಅಲ್ಲಿಗೆ ಎಲ್ಲಾ ರಾಜ್ಯಗಳಿಂದ ಸಾಕಷ್ಟು ಜನರು ಬರುತ್ತಾರೆ. ಅಲ್ಲಿ ಉತ್ತಮವಾದ ರಸ್ತೆ ಕೊಡಿ. ಅಕಸ್ಮಿಕವಾಗಿ ಈ ರೀತಿ ದುರ್ಘಟನೆ ಆಗಿ 122 ಜನರೇನು ಪ್ರಾಣವನ್ನು ಕಳೆದುಕೊಂಡಿದ್ದಾರೆ? ಆ ರೀತಿ ಮುಂದೆ ಆಗಲಾರದ ಹಾಗೆ ನೋಡಿಕೊಳ್ಳಿ ಎಂದು ನಾನು ಮಾನ್ಯ ಪ್ರಧಾನ ಮಂತ್ರಿಗಳಿಗೆ ಒಂದು ಪತ್ರವನ್ನು ಬರೆದಿದ್ದೇನೆ. ಅದೇ ರೀತಿಯಲ್ಲಿ ಶಬರಿ ಮಲೆಯಲ್ಲಿ ನಡೆದಂತಹ ದುರ್ಘಟನೆ ಬಗ್ಗೆ ನಾನು ಮಾನ್ಯ ಪರಿಸರ ಮಂತ್ರಿಗಳಿಗೂ ಸಹ ಪತ್ರವನ್ನು ಬರೆದಿದ್ದೇನೆ. ಏನೆಂದು ಪತ್ರವನ್ನು ಬರೆದಿದ್ದೇನೆ ಎಂದರೆ ಅಲ್ಲಿ ಶಬರಿ ಮಲೆಗೆ ಹೋದಂತಹ ಭಕ್ತರಿಗೆ ಯಾವುದೇ ರೀತಿಯ ಮೂಲಭೂತ ಸೌಕರ್ಯಗಳು ಸಿಗುತ್ತಿಲ್ಲ. ಎಲ್ಲಾ ರಾಜ್ಯಗಳಿಂದ ಅಲ್ಲಿ ಮಕರ ಜೋತಿಯ ದರ್ಶನಕ್ಕೆ ಹೋಗುತ್ತಾರೆ. ಅವರಿಗೆ ಎಲ್ಲಾ ರೀತಿಯ ಸವಲತ್ತುಗಳು ಸಿಗಬೇಕೆಂದು ಹೇಳಿ ಪತ್ರವನ್ನು ಬರೆದಿದೇನೆ. ನಾನು ಮಾನ್ಯ ಪ್ರಧಾನ ಮಂತ್ರಿಗಳಿಗೆ ನಂತರ ಪರಿಸರ ಮಂತ್ರಿಗಳಿಗೆ ಮತ್ತು ಕೇರಳದ ಮಾನ್ಯ ಮುಖ್ಯಮಂತ್ರಿಗಳಿಗೆ ಕೂಡ ಪತ್ರವನ್ನು ಬರೆದಿದ್ದೇನೆ.

ಅಕಸ್ಮಾತ್ ಆಗಿ ಮಕರ ಜ್ಯೋತಿ ದರ್ಶನದ ಸಂದರ್ಭದಲ್ಲಿ ನಾವು ಬೇಕಾದರೆ ನಮ್ಮ ಸರ್ಕಾರದ ವತಿಯಿಂದ ಬೇಕಾದರೆ 108 ವಾಹನವನ್ನು ಕೂಡ ಅಲ್ಲಿಗೆ ಕೊಟ್ಟು ಅಲ್ಲಿ ಸಂಚಾರ ಮಾಡಿ, ಅಲ್ಲೇನದರೂ ಆಕಸ್ಮಿಕವಾಗಿ ಈ ತರಹ ದುರ್ಘಟನೆ ನಡೆದರೆ 108 ವಾಹನಕ್ಕೆ ಫೋನ್ ಮಾಡಿ ಅಲ್ಲಿ ಬೇಕಾದರೆ ಪ್ರಾಣ ಉಳಿಸುವಂತಹ ಕೆಲಸ ಕೂಡ ಆಗಬಹುದು ಎಂದು ನಾನು ಮಾನ್ಯ ಕೇರಳದ ಮುಖ್ಯಮಂತ್ರಿಗಳಿಗೆ ನಾನು ಪತ್ರವನ್ನು ಬರೆದಿದ್ದೇನೆ. ಅದೇ ರೀತಿ ನಾನು ಮುಂಬರುವಂತಹ ದಿನಗಳಲ್ಲಿ ಈ ಮಕರ ಜ್ಯೋತಿ ನಡೆಯುವಂತಹ ಸಂದರ್ಭದಲ್ಲಿ ಅವರಿಗೆ ಪತ್ರವನ್ನು ಬರೆದಿದ್ದೇನೆ? ನೀವು ಆಕಸ್ಮಿಕವಾಗಿ ಈ ರೀತಿ ಆದಾಗ ನೀವು ನಮಗೆ permission ಕೊಟ್ಟರೆ ನಾವು ಒಂದು ವೈದ್ಯರ ತಂಡವನ್ನು ಕೂಡ ಕರ್ನಾಟಕ ರಾಜ್ಯದಿಂದ ಕಳಿಸಿಕೊಡುತ್ತೇವೆ ಎನ್ನುವಂತಹ ಮಾತನ್ನು ನಾನು ಮಾನ್ಯ ಕೇರಳ ಮುಖ್ಯಮತ್ರಿಗಳಲ್ಲಿ ಕೇಳಿಕೊಂಡಿದ್ದೇನೆ. ತಾವು ತಂದಂತಹ ಸಂತಾಪ ಸೂಚನೆಗೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತಾ ತಮ್ಮೆಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ತಮ್ಮಲ್ಲಿ ಕೋರುತ್ತೇನೆ.

(ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಮೌನವನ್ನು ಆಚರಿಸಿದರು)

ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಲಾಗುವುದು.

2. ಕಾರ್ಯದರ್ಶಿಯವರ ವರದಿ

ಅಧ್ಯಕ್ಷರು: ಮಾನ್ಯ ಕಾರ್ಯದರ್ಶಿಯವರು ವರದಿಯನ್ನು ಮಂಡಿಸುವುದು.

ಕಾರ್ಯದರ್ಶಿ (ಕರ್ನಾಟಕ ವಿಧಾನಸಭೆ ಸಚಿವಾಲಯ): ಗೌರವಾನ್ವಿತ ಸಭಾಧ್ಯಕ್ಷರ ಅನುಮೋದನೆಯೊಂದಿಗೆ ಕಳೆದ ಅಧಿವೇಶನದಲ್ಲಿ ಮಂಡಿಸಿದ ವರದಿಯ ನಂತರ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಈಗ ಸಭೆಯ ಮುಂದೆ ಮಂಡಿಸುತ್ತೇನೆ.

1. ಮೌಲ್ಯ ವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2010
2. ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ, 2009
3. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ, 2009